ಗಮಕ ಚಿಂತಾಮಣಿ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ–೬೪

ಗಮಕ ಚಿಂತಾಮಣಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು–೫೬೦ ೦೧೮

ಮುನ್ನುಡಿ

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಇದುವರೆಗೆ ಕರ್ನಾಟಕದ ಮಟ್ಟದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಹಲವಾರು ಸಭೆ-ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದೆ. ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಹೊರತಂದಿರುವುದರ ಮೂಲಕ ಜನಗಳಲ್ಲಿ ಸಾಹಿತ್ಯದ ಬಗೆಗೆ ಗೌರವ, ಕಾಳಜಿ ಮತ್ತು ಪ್ರೀತಿಯನ್ನು ಹುಟ್ಟಿಸಿದೆ. ಸಂಗೀತ, ಚಿತ್ರಕಲೆ, ಗಮಕ ಮೊದಲಾದ ವಿಷಯಗಳನ್ನು ಜನಸಾಮಾನ್ಯರಿಗೆ ಪರಿಚಯಿಸಿದೆ. ಕಾವ, ಜಾಣ, ರತ್ನ, ಶಾಸನ, ಜಾನಪದ ಪರೀಕ್ಷೆಗಳನ್ನು ನಡೆಸುತ್ತಿರುವಂತೆಯೇ ಗಮಕ ಕಲೆಯ ಅಭ್ಯಾಸಕ್ಕಾಗಿ ಎರಡು ಮಟ್ಟಗಳಲ್ಲಿ ಗಮಕ ಶಿಕ್ಷಣವನ್ನು ನೀಡುವ ತರಗತಿಗಳನ್ನು ನಡೆಸುತ್ತ ಬಂದಿದೆ. ನಾಡಿನ ಕೇಂದ್ರಗಳಲ್ಲಿ ಈ ತರಗತಿಗಳು ನುರಿತ ಗಮಕ ವಿದ್ವಾಂಸರ ನೇತೃತ್ವದಲ್ಲಿ ನಡೆಯುತ್ತಿವೆ. ಪರಿಷತ್ತು ವರ್ಷಕ್ಕೊಮ್ಮೆ ಪರೀಕ್ಷೆ ನಡೆಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರಗಳನ್ನು ನೀಡಿ ಅವರ ಕಲಿಕೆಗೆ ಪ್ರೋತ್ಸಾಹ ನೀಡುತ್ತಿದೆ.

ಗಮಕ ಕಲಾಭ್ಯಾಸಿಗಳಿಗೆ – ಶಿಕ್ಷಣಕ್ಕೆ ಅಗತ್ಯವಾದ ಪುಸ್ತಕಗಳ ಅವಶ್ಯಕತೆ ಇದೆ ಎಂಬುದನ್ನು ಪರಿಷತ್ತು ಅರಿತುಕೊಂಡು ಗಮಕ ಕಲೆಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಹೊರತಂದಿದೆ. ಅಂಥ ಬಹುಮುಖ್ಯ ಪುಸ್ತಕಗಳಲ್ಲಿ 'ಗಮಕ ಚಿಂತಾಮಣಿ'ಯೂ ಒಂದಾಗಿದೆ. ವಿಕ್ರಮಾರ್ಜುನ ವಿಜಯ, ಆದಿಪುರಾಣ, ಸಾಹಸಭೀಮ ವಿಜಯ, ಜಗನ್ನಾಥ ವಿಜಯ, ಪಂಪರಾಮಾಯಣ, ಶಬರಶಂಕರ ವಿಳಾಸ, ಮೊದಲಾದ ಚಂಪೂ ಶೈಲಿಯ ಕೃತಿಗಳಿಂದ ಕೆಲವು ಭಾಗಗಳನ್ನು, ರಗಳೆಯ ಪ್ರಕಾರದಲ್ಲಿ ಕೆಲವು ಭಾಗಗಳನ್ನು ಆಯ್ಕೆ ಮಾಡಿ ಇಲ್ಲಿ ಕೊಡಲಾಗಿದೆ. ಗಮಕ ವಾಚನಕ್ಕೆ ಸುಲಭವಾಗುವ ಈ ಪದ್ಯಭಾಗದ ಜೊತೆಗೆ ಅವುಗಳ ಸಾರಾಂಶವನ್ನು ಕೊನೆಯಲ್ಲಿ ಒದಗಿಸಲಾಗಿದೆ. ಗಮಕ ಕಲಾಭ್ಯಾಸಿಗಳಿಗೆ ಈ ಕೃತಿ ಅಗತ್ಯವಾಗಿ ಬೇಕಾಗುತ್ತದೆ.

ಇದು ಎರಡನೆಯ ಮುದ್ರಣವನ್ನು ಕಂಡಿರುವುದು ಇದರ ಜನಪ್ರಿಯತೆಯನ್ನು – ಮಹತ್ವವನ್ನು ಸೂಚಿಸುತ್ತದೆ. ಇದರ ಇನ್ನೂ ಹೆಚ್ಚಿನ ಉಪಯೋಗವನ್ನು ನಾಡಿನ ಜನತೆ ಪಡೆಯುತ್ತದೆಂಬ ಭಾವನೆ ಪರಿಷತ್ತಿಗಿದೆ.

ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು — ಪ್ರೊ॥ ಹಂಪ. ನಾಗರಾಜಯ್ಯ

ವಿಷಯಸೂಚಿ

GAMAKA CHINTAMANI : A collection of extracts of classical poetry from different authors. Published by Kannada Sahitya Parishat, Bangalore-560 018

ಪ್ರಥಮ ಮುದ್ರಣ—೧೯೭೬
ದ್ವಿತೀಯ ಮುದ್ರಣ—೧೯೮೫

ಬೆಲೆ : ಎಂಟು ರೂಪಾಯಿ

ಮುದ್ರಕರು :
ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು / ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ / ಬೆಂಗಳೂರು ೫೬೦ ೦೧೮

ವಿಕ್ರಮಾರ್ಜುನ ವಿಜಯಂ

೧

ಉ|| ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಮಾ
ತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ ತಾಳ್ದಿಯುಮಿಂತುದಾತ್ತ ನಾ
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ೧

ಚಂ|| ಮುಳಿಸು ಲಲಾಟ ನೇತ್ರ ಶಿಖಿ ಮೆಚ್ಚೆವಿನೂತ ರಸ ಪ್ರಸಾದಮು
ಜ್ವಳ ಜಸಮಂಗಸಂಗತ ಲಸದ್ಭಸಿತಂ ಪ್ರಭುಶಕ್ತಿ ಶಕ್ತಿ ನಿ
ರ್ಮಳ ಮಣಿಭೂಷಣಂ ಫಣಿ ವಿಭೂಷಣಮಾಗೆ ನೆಗಟ್ತೆಯಂ ಪುದುಂ
ಗೊಳಿಸಿದನೀಶ್ವರಂ ನೆಗಟ್ದುದಾರ ಮಹೇಶ್ವರನೀಗೆ ಭೋಗಮಂ ೨

ಉ|| ಚಂಡವಿರೋಧಿ ಸಾಧನ ತಮಸ್ತಮಮೋಡೆ ವಿಶಿಷ್ಟ ಪದ್ಮಿನೀ
ಷಂಡಮರಲ್ದು ರಾಗದಿನೊಱಲ್ದಿರೆ ಯಾಚಕ ಭೃಂಗ ಕೋಟಿ ಕೈ
ಕೊಂಡು ನಿರಂತರಂ ತಗುಳ್ದು ಕೀರ್ತಿಸೆ ಮಿಕ್ಕೆಸೆವ ಪ್ರಚಂಡ ಮಾ
ರ್ತಾಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜ ವಾಙ್ಮರೀಚಿಯಿಂ ೩

ಚಂ|| ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದುಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ ೪

ಚಂ|| ಲಲಿತಪದಂ ಪ್ರಸನ್ನ ಕವಿತಾ ಗುಣಮಿಲ್ಲದೆ ಪೂಣ್ದು ಪೇೞ್ದ ಬೆ
ಳ್ಗುಳ ಕೃತಿಬಂಧಮುಂ ಬರೆಪಕಾಱರ ಕೈಗಳ ಕೇಡು ನುಣ್ಣನ
ಪ್ಪಳಕದ ಕೇಡು ಪೇೞಿಸಿದೊಡರ್ಥದ ಕೇಡೆನೆ ಪೇೞ್ದು ಬೀಗಿ ಪೊ
ಟ್ಟಳಿಸಿ ನೆಗೞ್ತೆಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ ೫

ಉ|| ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ
ವ್ಯಾಸನೆನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪುಮನ್ಮನೋ
ವಾಸಮನೆಯ್ದೆ ಪೇೞ್ದಪೆನದಲ್ಲದೆ ಗರ್ವಮೆ ದೋಷಮುೞ್ತಿಗಂ
ದೋಷಮೆ ಕಾಣೆನೆನ್ನಱಿವ ಮಾೞ್ಕೆಯೆಪೇೞ್ವನಿದಾವದೋಷಮೋ ೬

೨

ಖಾಂಡವನ ದಹನ

ವ|| ಅಂತಾ ವನಾಂತರಾಳಮುಂ ತೊೞಲ್ದು ತೋಱುತ್ತಿರ್ಪನ್ನೆಗಮನೂನ ದಾನಿಯ ದಾನದುದ್ದಾನಿಯ ದಾನಮನಾನಲಾನಲ್ಲದೆ ಪೆಱರ್ ನೆಱೆಯರೆಂಬಂತೆ ತೊಟ್ಟನೆ ಕಟ್ಟಿದಿರೊಳ್—

ಕಂ|| ಉರಿವುರಿಯನೆ ತಲೆನವಿರನು
ಕರಿಸಿರೆ ಸಂತಪ್ತ ಕನಕ ವರ್ಣಮುಮುರಿಯೊಂ
ದುರುಳಿವೊಲಿರೆ ಜಠರಾನಳ
ನುರಿವಿನಮಂತೊರ್ವನುರಿಯ ಬಣ್ಣದ ಪಾರ್ವಂ ೭

ವ|| ಅಂತುವರ್ಪನಂ ಕಂಡು ಸಾಮಂತ ಚೂಡಾಮಣಿ ತನ್ನೊಳಿಂತೆಂದು ಬಗೆದಂ— .

ಕಂ|| ತಪ ನಿಯಮ ನಿಯತನೀ ಬ
ರ್ಪ ಪಾರ್ವನೇನೞ್ತಿ ತನಗದಂ ಬೇಡಿದೊಡಿ
ನ್ನುಪಗತ ದುರಿತರ್ ಸಂಪೂ
ರ್ಣ ಪುಣ್ಯರಾನಲ್ಲದಿಲ್ಲ ಪೇೞ್ ಪೆಱರೊಳರೇ ೮

ವ|| ಎಂಬನ್ನೆಗಂ ಸಾಮಂತಚೂಡಾಮಣಿಯನೆಯ್ದೆವಂದು ನಾಲ್ಕುಂ ವೇದಂಗಳೊಳ್ ನಾಲ್ಕುಂ ಋಚಂಗಳಂ ಪೇೞ್ದು ಸಿತ ದೂರ್ವಾಂಕುರ ವಿಮಿಶ್ರಂಗಳಪ್ಪ ಶೇಷಾಕ್ಷತೆಗಳಂ ಕೊಟ್ಟು ಮುಂದೆ ನಿಂದನಂ ನಿಮಗೆ ಬಾೞ್ತಿಯಪ್ಪುದಂ ಬೇಡಿಕೊಳ್ಳಿಮೆನೆ—

ಚಂ|| ಮಣಿ ಕನಕಾದಿ ವಸ್ತುಗಳನೊಂದುಮನೊಲ್ಲೆನವೇವುವಾದವಿ
ನ್ನುಣಿಸೆನಗಟ್ಟಿ ಮೆಯ್ ಪಸಿದು ಜೊಮ್ಮನೆ ಪೋದಪುದೆನ್ನವೇಟ್ಟುದಂ
ತಣಿಯುಣಲೀವೊಡೀವುದೆನೆ ಪಾರ್ಥನದೇವಿರಿದಿತ್ತೆನಾವುದು
ಣ್ಬಣಿಸೆನೆ ಪೇಟಿಮೆನೆಂಬ ಪದದೊಳ್ ನರಕಾಂತಕನಗ್ನಿದೇವನಂ ೯

ವ|| ಕಾಣಲೊಡಮಱಿದು ಶರಣಾಗತ ಜಳನಿಧಿಯನೆಯ್ದಿ ವಂದನೀ ಬಕವೇಷಿ ನಿನ್ನನೇನಂ ಬೇಡಿದಂ ನೀನೀತಂಗೇನನಿತ್ತೆಯೆನೆ—

ಚಂ|| ಪಸಿದುಣವೇಡಿದಂ ಬಡವನಾನುಣಲಿತ್ತೆನದಲ್ಲದಿಲ್ಲಿ ದಲ್
ಕುಸುರಿಯ ಮಾತುಗಾಣೆನೆನೆ ಕೇಳ್ದು ಮುರಾಂತಕನೇಂ ತಗುಳ್ದಿ ಯಿ
ನ್ನುಸಿರದಿರೀವ ಮಾತನಿವನುಣ್ಬುದು ಖಾಂಡವಮಿಾತನಗ್ನಿ ಮುಂ
ಪುಸಿದಿವನಿಂತೆ ಪಾಯಿಸಿದನಿಂದ್ರನೊಳಾದಿ ನರೇಂದ್ರರೆಲ್ಲರಂ ೧೦

ವ|| ಈತನಜಮುಖ ವ್ಯಾಘ್ರಂ ಶ್ವೇತ ಕೃಷ್ಣಕಾರಕನೀತನ ಮಾತುಮಾತಲ್ಲ ವೆಂದೊಡಾ ಮಾತು ತನ್ನಂ ಮೂದಲಿಸಿದಂತಾಗೆ ವಿದ್ವಿಷ್ಟ ವಿದ್ರಾವಣ ನಿಂತೆಂದಂ—

ಚಂ|| ಎರೆದನ ಪೆಂಪುವೇಟಿಪ್ಪೊಡನಲಂ ಪೊಣರ್ವಾತನ ಪೆಂಪುವೇಟಿಪ್ಪೊಡಾ
ಸುರಪತಿ ಕೊಟ್ಟ ತಾಣದೆಡೆವೇಟಿಪ್ಪೊಡಮಾ ಯಮುನಾನದೀ ತಟಾಂ
ತರಮೊಸೆದಿತ್ತೆನಾನೆರೆಯ ಕೇಳ್ದನಿಳಾಧರನೀನದರ್ಕೆ ಮಾ
ತೆರಡಣ ಮಾಡಲಾಗದಿದು ಸ್ಪೈಪಿನೊಳಲ್ಲದೆ ಕೂಡಿಬರ್ಕುಮೇ ೧೧

ಮ|| ದನುಜಾರೀ ದಿವಿಜೇಂದ್ರ ಶಾಶ್ವತಗುಣಾ ನಿನ್ನಳ್ಕದೇಂ ಬೇಡಿ ದಾ
ನನಲಂ ತೀರ್ಥಂ ಸಮಿಾಪಮುಂಬುನಿವಹ ವ್ಯಾಳೋಳ ಕಾಳಿಂದಿಯಾ
ವನಮುಂ ಕೇಳ್ದುವು ಭೂತಮಯ್ದುಮಱಿಗುಂ ಕೊಟ್ಟೆರ್ದುದಾದಂತಱಿಂ
ದೆನಗಿಂ ಮಾಣ್ಬುದು ಸೂಟಿ ಖಾಂಡವಮನಾಂತಳ್ವಿಲ್ಲದಿಂದೂಡುವೆಂ ೧೨

ಉ|| ಒತ್ತಿ ತಱುಂಬಿ ನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದು ತನ್ನ ಮಱಿವೊಕ್ಕೊಡೆ ಕಾಯದೆ ಚಾಗದೊಳ್ಪಿನ
ಚ್ಯೊತ್ತದೆ ಮಾಣ್ದು ಬಾಟ್ಟು ಪುಟುವಾನಸನೆಂಬನಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಟುವಲ್ಲದೆ ಮಾನಸನೇ ಮುರಾಂತಕಾ ೧೩

ವ|| ಎಂದು ಮಱುಮಾತಿಂಗೆಡೆಯಿಲ್ಲದಂತಿರೆ ನುಡಿದ ಪಡೆಮೆಚ್ಚೆ ಗಂಡನ ಗಂಡವಾತುಮಂ ನನ್ನಿವಾತುಮಂ ಮುರಾಂತಕಂ ಮೆಚ್ಚಿ—

ಮ|| ಸುಮುಕಟ್ಟಿಂಗೊರೆಗಾರುಮಿಲ್ಲರಿಗ ಕೇಳ್ ನಿನ್ನೊಳ್ ಸಮಂ ಧಾತ್ರಿಯೊಳ್
ಹಿಮಕೃದ್ಭೂಧರದಂತೆ ನಿನ್ನ ಗುಣಸಂದೋಹಂಗಳಂ ಕಾಣಲ
ಕ್ಕುಮೆ ಮತ್ತೊರ್ವನೊಳಾಗದೆಂತೆನೆ ಸಮಸ್ತೋರ್ವೀಧರಾಶೇಷ ಶೇ
ಷ ಮಹಾನಾಗ ಫಣಾಮಣಿ ದ್ಯುತಿಯನೇಂ ಖದ್ಯೋತದೊಳ್
ಕಾಣ್ಬರೇ ೧೪

ಚಂ|| ಮುನಿಯಿಸಿದಂ ಕರಂ ಪಿರಿಯನಪ್ಪುದು ಬೇಟ್ಪನ ಬೇಟ್ಪ ವಸ್ತು ಕಾಂ
ಚನ ಗಿರಿಯಿಂದ ಮಗ್ಗಳಮೆನಿಪ್ಪುದದಾದೊಡಮೇನೋ ಜೀವಮು
ಳ್ಳಿನಮಿಱಿದರ್ಥಮುಳ್ಳಿನೆಗಮಿತ್ತು ನೆಗಟ್ತ್ತಿಯನಾಂಪುದೆಂಬ ಪೆಂ
ಪಿನ ಸಮುಕಟ್ಟು ಕಣ್ಗೆ ದೊರೆಯಾರರಿಕೇಸರಿ ನಿನ್ನವೋಲ್ ಪೆಱಂ ೧೫

ವ|| ಎಂದು ತನಗೆ ಕೊಟ್ಟ ಕೋಡಿಂಗೊಡಂಬಟ್ಟ ದಿತಿಜ ಕುಲ ದಾವಾನಲನು ಮನರಾತಿಕಾಲಾನಲನು ಮನನಲನಿಷ್ಟಾರ್ಥಸಿದ್ಧಿಯಕ್ಕುಮೆಂದುಪರಸಿ ಮನಃ ಪನವವೇಗದಿಂ ಫಾಲ್ಗುಡಲನೆಯ್ದಿ ತನ್ನ ಬಯ್ತಿಟ್ಟ ದಿವ್ಯ ಸಂಭವಂಗಳಪ್ಪ ಶ್ವೇತಾಶ್ವಂಗಳೊಳ್ ಪೂಡಿದ ದಿವ್ಯರಥಮುಮಂ ದಧೀಚಿ ಗಂಡಸ್ಥಮಪ್ಪ ಗಾಂಡೀವಮೆಂಬ ಬಿಲ್ಲುಮಂ ದಿವ್ಯ ಶರಂಗಳೊಳ್ ತೆಕ್ಕನೆ ತೀವಿದ ತವದೊಣೆ ಗಳುಮಂ ತಂದೆನ್ನ ಪ್ರತಿಜ್ಞೆಯಂ ತೀರ್ಚುವೊಡಮಿಂದ್ರನಂ ಗೆಲ್ವೊಡಮಿವನ ಮೋಘಂ ಕೆಯ್ಕೊಳಲ್ವೇಟ್ಕು ಮೆಂದೊಡತಿರಥಮಥನನಗ್ನಿದೇವಂಗೆ ಪೊಡವಟ್ಟು ಕೈಯ್ಕೊಂಡು ಬೃಹಂದಳನೆಂಬ ಸಾರಥಿವೆರಸು ರಥಮನೇಱ ಲೊಡಂ—

ಉ|| ಪಾವಕನಟ್ಟಿ ಖಾಂಡವಮನುಂಡಪನರ್ಜುನನೂಡಿದಪ್ಪನೈ
ರಾವತವಾಹನಂ ನೆಱೆದು ಸಾಧನಸಂಯುತನಾಂಪನಲ್ಲಿ ನಾ
ನಾವಿಧ ಯುದ್ಧಮುಂಟೆನುತೆ ಶೈಬ್ಯ ಬಳಾಹಕ ಮೇಘವರ್ಣ ಸು
ಗ್ರೀವ ಹಯಂಗಳಿಂದೆಸೆವುದಂ ರಥಮಂ ಹರಿ ತಾನುಮೇಱಿದಂ ೧೬

ವ|| ಅಂತು ದಾರುಕಂ ರಥಮಂ ಚೋದಿಸಲೊಡಂ—

ಕಂ|| ಚೋದಿಸುವುದುಮಿರ್ವರ ರಥ
ಚೋದಕರವರೆರಡು ರಥದ ಗಾಲಿಯ ಕೋಳಿಂ
ದಾದ ರಜಃಪಟಲಂ ಕವಿ
ದಾದಮೆ ತೀವಿದುದು ದಿವಿಜ ವಧುವಿರ ಕಣ್ಣೊಳ್ ೧೭

ವ|| ಅಂತೆಯ್ದಿ ಯಮುನಾ ನದಿಯ ತೆಂಕಣ ದೆಸೆಯೊಳ್ ನೂಱುಯೋಜನದಗಲ ದೊಳಮನಿತೆ ನೀಳದೊಳಂ ನೆಱೆದು—

ಮ|| ಕಕುಭಾಶೋಕಕದಂಬ ಲುಂಗ ಲವಲೀಭೂಜಾರ್ಜುನಾನೋಕಹ
ಪ್ರಕರಂ ಪುಷ್ಪಿತ ಹೇಮ ಪಂಕಜ ರಜಸ್ಸಂಸಕ್ತ ಭೃಂಗಾಂಗ ನಾ
ನಿಕರಂ ಸಾರಸ ಹಂಸ ಕೋಕಿಳ ಕುಳಧ್ವಾನೋತ್ಕರಂ ಚೆಲ್ವನಾ
ಯ್ತು ಕರಂ ಸಕ್ತನಿಳಿಂಪ ದಂಪತಿಗಳಿಂದಾ ನಂದನಂ ನಂದನಂ ೧೮

ವ|| ಎನೆ ಸೊಗಯಿಸುವಖಾಂಡವ ವನಮಂ ವನರುಹನಾಭಂ ವಿಕ್ರಮಾರ್ಜುನಂಗೆ
ತೊಱಲ್ದು ತೋಱಿ—

ಮ|| ಅಲರಂ ನೋಯಿಸದೊಯ್ಯನೊಯ್ಯನಳಿಗಳ್ ಬಂದುಣ್ಬುವಾಟಂದು ಬಂ
ದಲೆಯ್ಕಣ್ಮದುಗಾಳಿ ಸೂರ್ಯಕಿರಣಾನೀಕಕ್ಕಮೆಂದಪ್ಪೊಡಂ
ಸಲವಿಲ್ಲುದ್ಧತ ಸಿದ್ಧ ಖೇಚರರೆ ತಾಮಾಳ್ವೇರಿಯಾಗಿಂತು ನಿ
ಚ್ಚಲುಮೋರಂತಿರೆ ಕಾವರೀ ದೊರೆತು ಕಾಪೀ ನಂದನಕ್ಕಿಂದ್ರನಾ ೧೯

ಉ|| ಒರ್ಮೆ ತೊಟಲ್ದು ನೋಡಿ ಬನಮಂ ಮಘವಂ ಶಚಿ ಪೂತ ಚೂತಮಂ
ನೆರ್ಮಿದಶೋಕವಲ್ಲರಿಯ ಪಲ್ಲವಮೊಂದನೆ ಕೊಯ್ದು ರಾಗದಿಂ
ಸೋರ್ಮುಡಿಯೊಳ್ ತಗುಳ್ಚಿದೊಡೆ ಸೂಟನೆ ಬಾರಿಸಿದಂದಲೆಂದೊಡಿಂ
ಕೂರ್ಮೆಯ ಮಾತು ಮೆಚ್ಚುವನಿತರ್ಕೆ ಬಳಾರಿ ಮುರಾಸುರಾರಿಯೋಂ ೨೦

ಕಂ|| ಇಂತಪ್ಪ ಬನಮನಿದನಿ
ನ್ನೆಂತನಲನನೊಡಲೆಂದು ಪೂಣ್ದಯ್ ಮುಂ ಪೂ
ಣ್ದಿಂತೂಡು ಪೂಡು ಶಿತಶರ
ಸಂತತಿಯಂ ಬಿಲ್ಲೊಳೀಕೆ ನೀಂ ತಡೆದಿರ್ಪಯ್ ೨೧

ಪರಮಾಣುವನಿತು ಬನದೊಳ್
ಚರಾಚರಂ ಪೋಗೆ ತಣಿಯುನನಲನದರ್ಕಾಂ
ನೆರಮಪ್ಪೆನುಗ್ರ ಕಿನ್ನರ
ಸುರ ದನುಜೋರಗರ ಕದನಮೇಂ ನಿನಗರಿದೇ ೨೨

ವ|| ಎಂಬುದುಮಂತೆಗೆಯ್ವೆನೆನ್ನ ಸಾಹಸಮಂ ನೋಡಿಮೆಂದು ವಿಕ್ರಾಂತ ತುಂಗ ನುತ್ತುಂಗ ಭುಜಪರಿಘದೆರಡು ದೆಸೆಯೊಳಂ ತವದೊಣೆಗಳಂ ಬಿಗಿದು ಗಾಂಡೀವಮನೇಱಿಸಿ ನೀವಿ ಜೇವೊಡೆದು ದಿವ್ಯಾಸ್ತ್ರಂಗಳಂ ಪಿಡಿದು ಕೆಯ್ತಾವಿಕೊಂಡಗ್ನಿದೇವನಂ ನೋಡಿ—

ಉ|| ಓಡುಗೆ ನಿಮ್ಮ ಮೆಯ್ಯ ಪಸಿವಾಂತ ವಿರೋಧಿಗಳಿನ್ನ ಕೆಯ್ಯೊಳ
ಟ್ಟಾಡುಗೆ ಕೊಳ್ಳಿಮುಣ್ಣಿಮೆನೆ ಕೇಳ್ದನಲಂ ಪರಸುತ್ತುಮಾಲಯ
ಕ್ರಿಡೆಯೊಳೀ ಚರಾಚರಮುಮಂ ಸುಡುವಂದಿನ ಮೆಯ್ಗಮಗ್ಗಳಂ
ಮಾಡಿ ತಗುಳ್ದು ನೀಳ್ದು ಬಳೆದರ್ವಿಸೆ ಪರ್ವಿದನಾ ವನಾಂತಮಂ ೨೩

ಮ|| ಫಳ ಕರ್ಪೂರ ಲವಂಗಲುಂಗ ಲವಳೀ ಹಿಂತಾಳ ತಾಳೀ ತಮಾ
ಳ ಲತಾ ಸುಂದರ ನಂದನಕ್ಕಳುರಿವುಂ ತನ್ನರ್ಚಿಗಳ್ ಬಂದು ಮೊ
ಕ್ಕಳಮೆತ್ತಂ ಸುರಿಯುತ್ತುಮಿರ್ಪ ರಸಮಂ ಮುಂಪೀದುರ್ಕೊಂಡಂ ಮನಂ
ಗೊಳೆ ಸಪ್ತಾರ್ಚಿ ಪೊದಳ್ದು ನೀಳ್ದುಸಗೆಯಿಂದಾಪೋಶನಂಗೊಳ್ವವೋಲ್ ೨೪

ಕಂ|| ನನೆಕೊನೆಯ ತಳಿರ ಪೂವಿನ
ಬನಮನಿತುಂ ಶಿಖೆಗಳಳುರೆ ಬೆಂಕೆಯ ಪೊಯ್ಲ್ದು
ರ್ವಿನೊಳೆ ಕೊರಗಿರ್ದ ಲತೆಗಳ
ಕೊನೆಗೊನೆಯನೆ ದಹನನಳುರ್ದು ಕೊನೆಗೊನೆಗೊಂಡಂ ೨೫

ವ|| ಆಗಳಾ ಬನಮನಿಂದ್ರನ ಬೆಸದೊಳ್ ಕಾವ ಕಿನ್ನರ ಕಿಂಪುರುಷ ಗರುಡ ಗಂಧರ್ವ ಸಿದ್ಧ ವಿದ್ಯಾಧರ ಬಲಮುನಿತುಮೊಂದಾಗಿ ವಿಕ್ರಮಾರ್ಜುನನೊಳ್ ತಾಗೆ—

ಕಂ|| ಕೊಂಡಪುದುರಿ ಬನಮನದಂ
ಕಂಡೆಂತಿರಲಕ್ಕುಮೆಂದು ತಾಗಿದ ನೆಗೞ್ದೊ
ಳ್ಗಂಡರ ಗಂಡೋಡುವಿನಂ
ಕೊಂಡುವು ಗಾಂಡೀವಮುಕ್ತ ಬಾಣಗಣಂಗಳ್ ೨೬

ವ|| ಅಂತು ಕಾದೆ ವಿದ್ವಿಷ್ಟವಿದ್ರಾವಣನ ಮೊನೆಯಂಬಿನಂಬೇೞಿಂಗಳ್ಕಿ ಹತವಿಹತ ಕೋಳಾಹಳರಾಗಿ ಸಿದ್ಧರಸಿದ್ಧರಾಗೆಯುಂ ಕಿನ್ನರರಿನ್ನಾರ ಮಱೆಯಂ ಪುಗುವಮೆನೆಯುಂ ಕಿಂಪುರುಷರ್ ಕಾಪುರುಷರಂತೆ ಬಾಯುಂ ಬಿಡೆಯುಂ ಗಂಧರ್ವರ್ ಗರ್ವಮನುೞಿದೊಂದೊರ್ವರಂ ಮಿಗೆಯೋಡೆಯುಂ ವಿದ್ಯಾಧರರ ಧರರಾಗೆಯುಂ ಪನ್ನಗರ್ ಪನ್ನತಿಕೆಯಿಂ ಬಂದಾಂತೊಡೆ—

ಕಂ|| ನಾಗರ ಖಂಡಂಗಳನಾ
ನಾಗರ ಖಂಡದೊಳೆ ತೊಡರೆ ನರನಿಸುವುದುಮಾ
ನಾಗರ ಖಂಡಂಗಳುಮಂ
ನಾಗರ ಖಂಡಮುಮನಳುರ್ದು ಕೊಂಡಂ ದಹನಂ ೨೭

ವಿರಹಿಗಳ ಸುಯ್ಯ ಬೆಂಕೆಯೊ
ಳಿರದೊಣಗಿದುವಕ್ಕುಮಾಗಳೆನಲುರಿವುರಿಯಿಂ
ಕರಿಮುರಿಕನಾದುವುನ್ಮದ
ಪರಭೃತ ಷಟ್ಚರಣ ರಾಜಕೀರ ಕುಲಂಗಳ್ ೨೮

ಉರಿ ಕೊಳೆ ದೆಸೆಗಾಣದೆ ದೆಸೆ
ವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ
ಬೆರೆಸೊಳಱಿ ನೆಗೆದುದಾ ವನ
ಕರಿ ಶರಭ ಕಿಶೋರ ಕಂಠಗರ್ಜನೆ ಬನದೊಳ್ ೨೯

ಸಂಗತ ಧೂಮಾವಳಿಯುನಿ
ಭಂಗಳೆ ಗೆತ್ತೊಳಱಿಪಾಯ್ದು ಪೊಗೆಪುಗೆ ಕಣ್ಣಂ
ಸಿಂಗಂಗಳಳುರೆ ಗರ್ಜಿಸಿ
ಲಂಗಿಸಿ ಪುಡಪುಡನೆ ಪುಟ್ಗಿ ಸತ್ತುವು ಪಲವುಂ ೩೦

ವ|| ಮತ್ತಮಲ್ಲಿ ಕೆಲವು ಲತಾಗೃಹಂಗಳೊಳಂ ಧಾರಾಗೃಹಂಗಳೊಳಂ—

ಕಂ|| ಒಡನಳುರೆ ಕಿರ್ಚು ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ
ಳೊಡ ಸಾಯಲ್ ಪಡೆದರಿನ್ನವುಂ ಸಯ್ಪೊಳವೇ ೩೧

ವ|| ಅಂತು ಖಾಂಡವ ವನಮೆಲ್ಲಮನನಲಂ ಪ್ರಳಯ ಕಾಳಾನಳನಂತಳುರ್ದು ಕೊಳೆ ಬಳಸಿ ಬಂದು ಕಾವ ನಾರಾಯಣನ ಸುದರ್ಶನಮೆಂಬ ಚಕ್ರದ ಕೋಳುಮಂ ವಿಕ್ರಮಾರ್ಜುನನ ದಿವ್ಯಾಸ್ತ್ರಂಗಳ ಕೋಳುಮನಗ್ನಿದೇವನ ಶಿಖಾಕಳಾಪದಕೋಳುಮನೆಂ ತಾನುಂ ಬಂಚಿಸಿ ಬಳಿ ಪಱಿದ ಕೋಕನಂತೊರ್ವ ವನಪಾಲಕಂ ಪೋಗಿ ದೇವೇಂದ್ರನಂ ಕಂಡು—

ಮ|| ದೇವಬಿನ್ನಪಮಿಂದು ಖಾಂಡವಮಂ ಕೃಶಾನು ತಗುಳ್ದುನಾ
ನಾವಿಧಂ ಸುಡೆ ನೋಡಲಾರದೆ ತಳ್ತ ದೇವರ ಕಾಪಿನಾಳ್
ದೇವಕಿನ್ನರ ಪನ್ನಗಾವಳಿ ಮೊಟ್ಟನಪ್ಪಿನಮೆಚ್ಚು ಕೊಂ
ದೇವರೆಂದಱಿದಿರ್ದನೊರ್ವನಗುರ್ವು ಪರ್ವಿರೆ ದೇವರಂ ೩೨

ಕಂ|| ಎರಡು ರಥವೊಳವು ನೋಟ
ಕ್ಕೆರಡಱೊಳವನೊಂದು ರಥಮೆ ತೋಟಿಗೆ ಪಲವಾ

ಗಿರಿ ಪರಿದು ಕಣ್ಣೊಳಿನ್ನುಂ
ತಿರಿದಪುದುರಿದಪುದು ನಮ್ಮ ಬನವೆನಿತನಿತುಂ ೩೩

ವ|| ಎಂಬುದುಂ ಪೌಳೋಮಿಪತಿ ತನ್ನ ದಿವ್ಯಜ್ಞಾನದೊಳ್ ನೋಡಿ ಚಕ್ರಿಯುಂ ವಿಕ್ರಮಾರ್ಜುನನುಮಪ್ಪುದನಱಿದು ಗಜಱಿ ಗರ್ಜಿಸಿ ವಿಳಯ ಕಾಳಾಂಬುದ ದಂತೆ ಮೊಱಗುಮಂ ಸಿಡಿಲ ಬಳಗಮನೊಳಕೊಂಡ ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸುವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳವು ವಿಂಧ್ಯಾ ಚಳ ಕೂಟ ಕೋಟಿಗಳೆ ಕಿೞ್ತೆೞ್ದುಬರ್ಪಂತೆ ಬಂದು ದೆಸೆಗಳೆಲ್ಲಮಂ ಮುಸುರಿ ಕಟ್ಟಲಿಸಿ ಕವಿದು—

ಚಂ|| ಕವಿದುವು ಸಪ್ತಸಾಗರ ಜಲಂಗಳೆ ಲೋಕಮನೀಗಳೆಂಬಿನಂ
ಕವಿದು ಮುಗಿಲ್ಗಳಲ್ಲಿ ಕಱೆಯುತ್ತಿರೆ ಪಾವಕನುರ್ಕುಗೆಟ್ಟಿದೆಂ
ತುವೊ ತೊದಳಾಯ್ತು ದಾನವೆನೆ ಮಾರುತ ಬಾಣದೆ ಮೇಘ ಮಾಲಿಕಾ
ನಿವಹಮನೆಚ್ಚು ಕೂಡೆ ಶರಪಂಜರಮಂ ಪಡೆದಂ ಗುಣಾರ್ಣವಂ ೩೪

ವ|| ಅಂತು ಪುಂಖಾನುಪುಂಖಮಾಗೆ ಪಾಯ್ವ ಶರಸಂಧಾನದೊಳೆಡೆವಱಿಯ ದಂತೆರಡುಂ ಕೆಯ್ಯೊಳ್ ತೋಡುಂ ಬೀಡುಂ ಕಾಣಲಾಗದಂತಿಸೆ ತುಱುಗಿ ಕವಿವಂಬಿನ ಮಱೆಯ ಮಱೆಯುಂ ಮಾಣಿಸೆ ದಿವ್ಯಾಸ್ತ್ರಂಗಳಿಂ ನೂಱು ಯೋಜನದಳವಿಯ ಖಾಂಡವವನಮೆಲ್ಲಮಂ ತಟ್ಟೆ ಮೆಡಱಿಮಶಕ ಮಾತ್ರ ಮಪ್ಪೊಡಂ ಮಿಸುಕಲ್ ಛಿದ್ರಮಿಲ್ಲದಂತಾಗೆ ಶರಪಂಜರದೊಳ್ ಮುಚ್ಚಿ ಮುಸುಕಿದಾಗಳಭಿನವ ಜೀಮೂತವಾಹನನ ದಿವ್ಯಾಸ್ತ್ರದ ಕೋಳ್ಗಿರಲಾಱದೆ ಜೀಮೂತಂಗಳೆಲ್ಲಂ ತೆರಳ್ದೋಡಿದೊಡಗ್ನಿದೇವನಾ ವಗೆಯ ಕಿರ್ಚಿನಂತೊಳ ಗೊಳಗಳುರ್ದು—

ಕಂ|| ವನ ಖಗವನ ಮೃಗ ವನ ತರು
ವನ ಚರ ವನ ವನಜ ನಿವಹಮುಳ್ಳನಿತುಂ ಸೀ
ರನಿತುಮಣಮುಱಿದುದಿಲ್ಲೆಂ
ಬಿನಮುಂಡಂ ದಹನನಳುರ್ದು ಖಾಂಡವವನಮಂ ೩೫

ವ|| ಅಂತಾ ವನ ಗಹನಮೆಲ್ಲಂ ದಹನಮಯಮಾದ ಪ್ರಸ್ತಾವದೊಳ್ ವಿಸ್ಮಯ ಮಾಗೆ ಮಯನೆಂಬ ದಾನವ ವಿಶ್ವಕರ್ಮಂ ನೆಗೆದುರಿವುರಿ ಮಾಲೆಗಳಂ ಗದೆಯೊಳ್ ಬೀಸುತ್ತುಂ ಪೊಱಮಡೆ ಪೊಱಮಡಲೀಯದೆ—

ಕಂ|| ಒಂದು ದೆಸೆಯೊಳ್ ತಗುಳ್ವ ಮು
ಕುಂದನ ಕರಚಕ್ರಮೊಂದು ದೆಸೆಯೊಳ್ ನರನೆ
ಚ್ಚೊಂದು ಶರಮೊಂದು ದೆಸೆಯೊಳ್
ಕುಂದದೆ ದಹನಾರ್ಚಿ ಸುತ್ತಿ ಮುತ್ತುವ ಪದದೊಳ್ ೩೬

ಶರಣಕ್ಕೆನಗರಿಕೇಸರಿ
ಯೆರಡು ಪದಾಂಬುಜಮುಮಿಗಳೆಂಬುದು ಮಾಗಳ್
ಹರಿ ಚಕ್ರಂ ಕೊಳ್ಳದೆ ನರ
ಶರಮುರ್ಚದೆ ದಹನ ಶಿಖೆಗಳಳುರದೆ ಅವನಂ ೩೭

ವ|| ಆಗಳ್ ಮಯಂ ವಿಸ್ಮಯಂಬಟ್ಟು ಪೊಡವಟ್ಟು ಪೋದನಾಗಳಾವನಾಂತರಾಳದೊಳಿರ್ಪ ತಕ್ಷಕನ ಮಗನಪ್ಪಶ್ವಸೇನನೆಂಬ ಪನ್ನಗಂ ತನ್ನ ತಾಯುಂ ತನ್ನ ಬಾಲಮುಂ ಕರ್ಚಲ್ವೇಟ್ಟು ದಹನಾರ್ಚಿಗಳಿಂ ಬರ್ದುಂಕಿ ನೆಗೆದು ಪಾಱುವಾಗಳದನೆರಟ್ಟಿಂಡಮುಪ್ಪಿನಮಾಖಂಡಳತನಯುನಿಸುವುದುಂ ತನ್ನ ಬಾಲಂಬೆರಸುರಿಯೊಳ್ ಬಿಟ್ಟು ಮಿಡುಮಿಡು ಮಿಡುಕುತಿರ್ದ ಜನನಿಯುಂ ಕಂಡು ಪಾವುಗಳುಳ್ಳ ಪಗೆಯಂ ಮಱೆಯುವೆಂಬುದಂ ನನ್ನಿ ಮಾಡಿ—

ಕಂ|| ಪಗೆ ಸಾಱುವುದುಂ ಕೊಲ್ಲೆಂ
ಪಗೆ ಸಾಱಿದ ನಿನ್ನನಾರ ಮಱೆಯುಂ ಪೊಕ್ಕುಂ
ಪಗೆಯಂ ನೆಱಪೆನೆ ನೆಱಪುವ
ಬಗೆಯೊಳೆ ಪೊಕ್ಕಂ ಕಡಂಗಿ ಕರ್ಣನ ದೊಣೆಯುಂ ೩೮

ವ|| ಅಂತಶ್ವಸೇನನರ್ಧಾವಲಿಕಮೆಂಬಮೋಘಾಸ್ತ್ರಮಾಗಿ ಕರ್ಣನದೊಣೆಯೊಳಿರ್ದನಿತ್ತ ಖಾಂಡವವನದೊಳಗೆ ಮಂದಪಾಲನೆಂಬ ಮುನಿಗಮೊಂದು ಲಾವಗೆಗಂ ಪುಟ್ಟಿದ ನಾಲ್ಕುಂ ಲಾವಗೆಗಳಗ್ನಿ ಸೂಕ್ತಂಗಳ ನೋದುತ್ತುಮದಿರದಿದಿರಂ ಬರೆ ಮೆಚ್ಚಿ ಬರವನಗ್ನಿ ದೇವಂ ಬೇಡಿಕೊಳ್ಳಿಮೆಂದೊಡೆಮ್ಮನ್ವಯಕ್ಕೆ ನೀನ್ ತಣ್ಣಿದೆಯಾಗೆಂದು ಬೇಡುವುದುಂ ತದಸ್ತುವೆಂದನಿತ್ತಲಿಂದ್ರಂ ತನ್ನ ಬಲಮೆಲ್ಲ ಮೆಳ್ಕಿದಂತಾದುದೆಂಬುದಂ ಕೇಳ್ದು—

ಚಂ|| ಮಗನೆನಗೆಂದು ಪೇೞ್ ಪಿಡಿದು ಕಟ್ಟದೆ ಮಾಣ್ಬನೆ ಪಾರ್ಥನಂ ಧರಿ
ತ್ರಿಗೆ ಗುರುವೆಂದು ವಜ್ರದೊಳುರುಳ್ಚದೆ ಮಾಣ್ಬನೆ ಚಕ್ರಿಯಂ ಕರಂ
ಬಗೆಯದೆ ಗೊಡ್ಡಮಾಡಿದರ್ಗೆ ತಕ್ಕುದನೀಗಳೆ ಮಾೞ್ಪೆನೆಂದು ತೊ
ಟ್ಟಗೆ ಪೊಱಮಟ್ಟನೇಱಿ ನಿಜವಾಹನಮುಂ ದಿವದಿಂ ಸುರಾಧಿಪಂ ೩೯

ವ|| ಅಂತು ದೇವನಿಕಾಯಂ ಬೆರಸು ಯುದ್ಧಸನ್ನದ್ಧನಾಗಿ ಪರಸೈನ್ಯ ಭೈರವ ನೊಳಿಱಿವೆನೆಂಬ ಪಟುವಗೆಯೊಳ್ ಭೈರವಂಬಾಯ್ವಂತೆ ಬಂದುನಿಂದ ಪುರಂದರನಲ್ಲಿಗೆ ಸರಸಿಜಸಂಭವಂ ಬಂದು ಮಾರ್ಕೊಂಡು—

ಚ|| ಬನಮನೆ ಕಾಯಲೆಂದಿಱಿವೆಯಪ್ಪೊಡೆ ಮುನ್ನಮೆ ಪೋದುದಂದು ಪಾ
ರ್ಥನೊಳಿನಗೇವಮೆಂಬ ಬಗೆಯುಳ್ಳೊಡೆ ನಿನ್ನಯ ಪುತ್ರನಚ್ಯುತಂ
ಗಿನಿಸೆರ್ದೆನೋವೆಯಪ್ಪೊಡದು ಕೂಡದು ಮೂವರೊಳೊರ್ವನೆಮ್ಮಮಾ
ತಿನಿತೆ ಗುಣಾರ್ಣವಂಗೆ ಕುಡು ಗೆಲ್ಲಮನಿಂತಿದೆ ಕಜ್ಜದುಜ್ಜುಗಂ ೪೦

ವ|| ಎಂದು ಕಮಲಾಸನನಾಸೆದೋಱಿ ನುಡಿದುಳ್ಳುದನೆ ನುಡಿದೊಡಂತೆ ಗೆಯ್ವೆನೆಂದು—

ಚ|| ಸುರಿವರಲೊಂದು ಬೆಳ್ಸರಿಯದಾತ್ಮತನೂಭವನುತ್ತಮಾಂಗದೊಳ್
ದೊರೆಕೊಳೆ ನಿಲ್ಲದಲ್ಲಿ ಕುಸುಮಂ ಕೆಲವಲ್ಲುಗೆ ತನ್ನ ರತ್ನವಿ
ಸ್ಫುರಿತ ಕಿರೀಟಮಂ ಕವಿದು ತಾನೆ ನರಂಗೆ ಕಿರೀಟಿ ನಾಮಮಂ
ಸರಸದಿನಾಗಳುಚ್ಚರಿಸಿ ಸಾಹಸಮಂ ಪೊಗೞ್ದಂ ಸುರಾಧಿಪಂ ೪೧

ವ|| ಅಂತು ಪೊಗೞ್ದು ಖಾಂಡವವನ ದಹನದೊಳಾದ ಪೊಗೆಯೊಳಮಲ್ಲಿಯ ಮಹಾನಾಗಂಗಳ ವಿಷಂಬೆರಸು ಸುಯ್ವ ಸುಯ್ಯ ಪೊಗೆಯೊಳಂ ಕಱಂಗಿ ಕೞ್ಗಿದ ಮೆಯ್ಯುಮಂ ಪ್ರಚಂಡ ಗಾಂಡೀವ ವ್ಯಾಘಾತದೊಳಿಂದ್ರ ನೀಲಂಗಳ ನಡಸಿದಂತಪ್ಪ ಮುಂಗೆಯ್ಯುಮಂ ಕಂಡು ಕೃಷ್ಣನೆಂಬ ಪೆಸರನಿಟ್ಟನಾಗಳ್ ಬ್ರಹ್ಮಂ ಬ್ರಹ್ಮಾಯುವಕ್ಕೆಂದು ಪರಿಸಿದನೀಶ್ವರಂ ನೀನುದಾರಮಹೇಶ್ವರನ ಪುದಱಿಂ ನಿನಗಮೆನಗಮೇತಱೊಳಂ ವಿಕಲ್ಪಮುಂ ವಿಚ್ಛಿನ್ನಮು ಮಿಲ್ಲೆಂದನಂತು ಮೂದೇವರುಂ ಪರಸಿ ನಿಜನಿವಾಸಂಗಳ್ಗೆ ಪೋದರಾಗಳ್—

ಚ|| ಅನಿತಿನಿತೆನ್ನದಾಂತ ಸುರ ಪನ್ನಗ ಕಿನ್ನರ ಸೈನ್ಯಮೆಲ್ಲಮಂ
ಬಿನ ಮೊನೆಯೊಳ್ ಪಡಲ್ವಡೆ ಲತಾಭವನಂ ಕೃತಕಾಚಳಂಗಳೆಂ
ಬಿನಿತುಮನಟ್ಟಿ ತಟ್ಟಿ ನುಡಿಯುಂ ನುಡಿದಂತೆ ನೆಗೞ್ಚಲಗ್ನಿದೇ
ವನನಮರೇಂದ್ರನಂದನಮನೂಡಿದನಂದಮರೇಂದ್ರ ನಂದನಂ ೪೨

ವ|| ಆಗಳ್ ಸ್ವಾಹಾಂಗನಾ ನಾಥಂ ಸಂಪೂರ್ಣ ಮನೋರಥನಾಗಿ ಖಟ್ವಾಂಗ ನೆಂಬರಸನ ಯಜ್ಞದೊಳಾತನ ತಂದ ಘೃತ ಸಮುದ್ರಮಂ ಕುಡಿದೊಡಾದ ರೋಗಮಿಂದು ಪೋದುದೆಂದು ನೀರೋಗನಾಗಿ ಮಹಾನುರಾಗಂ ಬೆರಸು ಪರಸಿ ಪೋದನಾಗಳಿರ್ವರುಮಿಂದ್ರಪ್ರಸ್ಥಕ್ಕೆಯ್ದೆ ವಂದು—

ಚ|| ಇದಿರ್ವರೆ ಧರ್ಮಜಂ ಬೆರಸು ತನ್ನೊಡವುಟ್ಟಿದರೆಯ್ದೆ ತಳ್ತು ಕ
ಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ ಸೂಸೆ ಸೇಸೆಯಂ
ಸುದತಿಯರಿಕ್ಕೆ ಚಾಮರಮನಂಗನೆಯರ್ ನಿಜಕೀರ್ತಿ ಲೋಕಮಂ
ಪುದಿದಿರೆ ಪೊಕ್ಕನಂದು ನಿಜ ಮಂದಿರಮಂ ಪರಸೈನ್ಯಭೈರವಂ ೪೩

೩

ಭೀಷ್ಮರಿಗೆ ಸೇನಾಪಟ್ಟವನ್ನು ಕಟ್ಟಿದುದು

ಕಂ|| ಶ್ರೀನಾರೀ ವಲ್ಲಭನಭಿ
ಮಾನಧನಂ ಹರಿಗನಾ ಕುರುಕ್ಷೇತ್ರದೊಳಂ
ತೇನುಂ ಮಾಣದೆ ಬಿಟ್ಟುದ
ನಾ ನೆಗಟ್ದ ಸುಯೋಧನಂಗೆ ಚರರಱಿಪುವುದುಂ ೧

ಗುರು ಗುರುಸುತ ಶಕುನಿ ಕೃಪಾಂ-
ಗ ರಾಜರಂ ಬರಿಸಿ ನುಡಿದನವನಿಪನೇಂ ಕೇ
ಳ್ದಿರೆ ಪಾಂಡುಸುತರ ಮುನಿಸಿನ
ತಱಿಸಲವಿನ ಚಲದ ಬಲದ ಕಲಿತನದಳವಂ ೨

ಬಂದು ಕುರುಕ್ಷೇತ್ರ ದೊಳಳ
ವೊಂದಿರೆ ನಮ್ಮೊಳ್ ಕಡಂಗಿ ಮಿಗೆ ತಳ್ತಿಱಿಯ
ಲ್ಕೆಂದಾನುಂ ಬಂದಿರ್ದರಿ
ದೇಂ ದಾಯಿಗತನಮನೆಮಗವರ್ ತೋಱಿದಪರ್ ೩

ಮ|| ಪಡೆವಳ್ಳಂ ಗಡಮಾ ಬಲಕ್ಕೆ ದಲೆ ಧೃಷ್ಟದ್ಯುಮ್ನನೆಂಬೊಳ್ಳಿಯಾ
ಪಡೆಯೊಳ್ ಗಂಡನುಮಾ ನೊಲಂ ದ್ರುಪದನುಂ ಪೇರೊಟ್ಟಿಯಾ ಮತ್ಸ್ಯನುಂ
ಗಡಮಂತಾ ಬಲಕಾಳ್ದನೇನಱಿಯಿರೇಧರ್ಮಜ್ಞನಾ ಧರ್ಮಜಂ
ಗಡಮೇಂ ನಾಯಕರೊಳ್ಳಿದರ್ ನೆರೆದರೋ ಕಾದಲ್ಕೆಮತ್ಸೈನ್ಯದೊಳ್ ೪

ವ|| ಎಂಬುದಂ ಕುಂಭಸಂಭವನಿಂತೆಂದಂ—

ಮ|| ಕಳವೇಟಿದ್ಕ್ರೆ ಕುರುಭೂಮಿಯಂ ಕಳಕವರ್ ವಂದಿರ್ದರೆಂದಂತೆ ದೋ
ರ್ವಳ ಚಾತುರ್ವಳ ತತ್ಸುಹೃದ್ಬಳಮನಿನ್ನೇಗೇಳ್ದಪೈ ಪಾಂಡವರ್

ಬಳಸಂಪನ್ನರುದಗ್ರ ದೈವಬಳಸಂಪನ್ನರ್ ಮರುಳ್ಮಾತನಿ
ನ್ನುಱಿ ಗಾಂಗೇಯರ ಪೇಳ್ದುದೊಂದು ತೆಱದಿಂ ನೀಂ ಕಾದು
ದುರ್ಯೋಧನಾ ೫

ವ|| ಎಂಬುದುಮಾ ಮಾತಂ ಮನದೇಗೊಂಡಂತೆಗೆಯ್ವೆನೆಂದನಿಬರುಮಂ ವಿಸರ್ಜಿಸಿ ನಿಶಾಸಮಯದೊಳ್ ಪತ್ತೆಂಟು ಕೆಯ್ದೀವಿಗೆಗಳ ಬೆಳಗಿನೊಳಂ ಕತಿಪಯ ಪರಿಜನ ಪರಿವೃತನಾಗಿ ರಾಜರಾಜಂ ಸಿಂಧುಜನರಮನೆಗೆ ವಂದು ವಾಹನದಿಂದಮಿೞಿದು ಕುರುಪಿತಾಮಹಂಗೆಱಗಿ ಪೊಡೆವಡೆವುದುಂ ಪರಸಿ ಮಂಚದೊಳೇಱಲ್ ಕರೆದೊಡೊಲ್ಲೆಂ ಮಹಾಪ್ರಸಾದಮಿಂತಿರ್ಪೆನೆಂದು ಮಣಿಮಯ ಹೇಮಾಸನದೊಳ್ ಕುಳ್ಳಿರ್ದನಂ ನೋಡಿ ಕಜ್ಜಂ ಪುಟ್ಟಿ ದೊಡೆಮಗೆ ಬೞಿಯಟ್ಟದೀಪೊೞ್ತಿದಾವುದು ಮನವಾೞ್ತಿಗೆೞ್ತಂದೆ ಯೆಂದೊಡೆ ಸುಯೋಧನನಿಂತೆಂದಂ—

ಕಂ|| ಹರಿಬಲದಿಂ ಪಾಂಡವರನು
ವರಮಂ ಪೊತ್ತಿಸಿದರೆನ್ನೊಳಾಂ ಕರಮಱಿದಾ
ಹರಿಯಂ ಕೋಡಗಗಟ್ಟಾ
ಗಿರೆ ಕಟ್ಟಿದೊಡಂದು ನೀಮೆ ಬಿಡಿಸಿದಿರಲ್ತೇ ೬

ಕರಿಗಂ ಪರಮಾಣುಗಮಂ
ತರಮಾವುದೊ ನಿಮಗಮಸುರ ವೈರಿಗಮೇನಂ
ತರಮಂತೆ ನಿಮ್ಮೊಳಗ್ಗದ
ಪರಶುಧರಂ ಪೊಣರ್ದು ತಾನದಂದೇನಾದಂ ೭

ಪಿಡಿದರವರಸುರ ವೈರಿಯ
ನೊಡಂಬಡಿಂ ತೊೞ್ತುವೆಸದಿನಾಂ ನಿಮ್ಮಡಿಯಂ
ಪಿಡಿದೆನದೇಂ ತಾನೆಚ್ಚುಂ
ಪಿಡಿದೊಡವರ್ಮಂದು ಪಿಡಿದರೆನ್ನರೆಗೆಲ್ಲಂ ೮

ಮ|| ಕೊರಲೊಳ್ ಕಟ್ಟಿದ ದೇವಿಯಂತಿರುರದೊಳ್ ಶ್ರೀತೊಟ್ಟಿಲೊಳ್ ತೊಟ್ಟನಂ
ತರಮೆನ್ನೊಳ್ ನೆಲಸಿತ್ತು ನಿಮ್ಮ ದಯೆಯಿಂ ನಿಮ್ಮಂ ಕರಂ ನಚ್ಚಿಸಂ
ಗರಮಂ ಬಲ್ಲಿದರೊಳ್ ಪೊಣರ್ಚಿದೆನದರ್ಕೆನ್ನೊಳ್ ರಣಶ್ರೀ ರಣಾ
ಜಿರದೊಳ್ ಮಾಣದೆ ಪೊರ್ದುವಂತೆ ಬೆಸಸಿಂ ನಿಮ್ಮೊಂದಭಿಪ್ರಾಯಮಂ ೯

ವ|| ಎಂದು ನುಡಿದ ತನ್ನ ಮೊಮ್ಮನ ನಯದ ವಿನಯದ ನುಡಿಗಳ್ಗೆ ಕರುಣಿಸಿ ಕುರುವೃದ್ಧನಿಂತೆಂದಂ—

ಮ|| ಧೃತರಾಷ್ಟ್ರಂ ನುಡಿದಾರ್ತನೆ ಹರಿ ಭರಂಗೆಯ್ದಾರ್ತನೇ ನೀಂ ಪೃಥಾ
ಸುತರಂ ನೋಯಿಸಲಾಗದೆಂದು ನುಡಿದೇನಾಮಾರ್ತೆಮೇ ನಿನ್ನೊರಂ
ಟುತನಂ ಕೈಗೞಿವಾಯ್ತುದಪ್ಪೊಡೆ ಮಹಾಭಾರಾವತಾರಂ ರಣೋ
ದ್ಯತನಾಗೆಂಬುದನೆಮ್ಮನನ್ಯರವೋಲೇಂ ನೀಂ ಪ್ರಾರ್ಥಿಸಲ್ವೇೞ್ಪುದೇ ೧೦

ವ|| ಎಂಬುದುಂ ಮಹಾಪ್ರಸಾದಮೆಂದು ದುರ್ಯೋಧನಂ ಪೋದನಿತ್ತ ಗಾಂಗೇಯಂ
ತನ್ನಂತರ್ಗತದೊಳ್—

ಕಂ|| ಅಣಿಯರಮೊದವಿದ ಮುಳಿಸಿನೊ
ಳಣಮುಱಿದವರೆಂದು ರಣದೆ ಜಯಿಸಲ್ ನಾರಾ
ಯಣನೊಳಮುದಾತ್ತ ನಾರಾ
ಯಣನೊಳಮಿಂತೆತ್ತಿಕೊಂಡ ಗಂಡರುಮೊಳರೇ ೧೧

ಎನ್ನನೆ ನಚ್ಚಿದನನುವರ
ಕೆನ್ನನೆ ಪೂಣಿಸಿದನೆನಗೆರಟ್ಟಿಂಡಮುಮೋ
ರನ್ನರೆ ದಲೆಂತು ಕಾದುವೆ
ನೆನ್ನಯ ಮಕ್ಕಳೊಳಮೆನ್ನ ಮೊಮ್ಮಕ್ಕಳೊಳಂ ೧೨

ಮಕ್ಕಳ ಮೊಮ್ಮಕ್ಕಳ ರಥ
ಮೆಕ್ಕೆಯಿನೆಡೆ ಗೊಂಡೊಡವರನೋವದೆ ರಣದೊಳ್
ಮಕ್ಕಳನಾಂ ಕೊಂದೊಡೆ ತ
ನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ ೧೩

ನರನಾರಾಯಣರಿರ್ವರೆ
ಧುರದೊಳ್ ಮಾರ್ಕೊಳ್ವರೆನ್ನನೊವಂ ಮೊಮ್ಮಂ
ಪರಮ ಗುರುವೊರ್ವನವರಿ
ರ್ವರುಮಂ ಕಾದೞಿವೆನುೞಿದ ರಿಪುನೃಪ ಬಲಮಂ ೧೪

ವ|| ಎಂದು ತನ್ನೊಳ್ ಬಗೆಯುತ್ತಿರ್ಪಿನಮತ್ತ ದುರ್ಯೋಧನಂ ಸಹಸ್ರ
ಕಿರಣೋದಯದೊಳನೇಕ ಸಹಸ್ರ ನರಪತಿ ಪರಿವೃತನುಮಾಗಿ ಮಂದಾಕಿನೀ
ತನೂಜಂಗೆ ಬೞಿಯನಟ್ಟಿ ಬರಿಸಿ ಮಣಿಮಯ ಪೀಠದೊಳ್ ಕುಳ್ಳಿರಿಸಿ
ದೇವಾಸುರ ಯುದ್ಧದೊಳ್ ಗುಹಂಗೆ ವೀರ ಪಟ್ಟಮಂ ಕಟ್ಟುವ
ಪುರಂದರನಂದಮನೆಪೋಲ್ತು—

ಉ|| ತುಂಗ ಮೃದಂಗ ಶಂಖ ಪಟಹ ಧ್ವನಿದಿಕ್ತಟದಂತನೆಯ್ದೆವಾ
ರಾಂಗನೆಯರ್ ಚಳಲ್ಲುಳಿತ ಚಾಮರವಮಂ ನೆರೆದಿಕ್ಕೆ ಸಂಚರ
ತ್ನಂಗಳುಮಂ ಪುದುಂಗೊಳಿಸಿ ಪೊಂಗಳಸಂಗಳೊಳಿರ್ದ ಪುಣ್ಯತೋ
ಯಂಗಳೊಟ್ಕಿಱಿಂ ಮಿಸಿಸಿ ಕಟ್ಟಿದನಾ ವಿಭು ವೀರಪಟ್ಟಮಂ ೧೫

ವ|| ಅಂತು ಪರಶುರಾಮುನನಂಜಿಸಿದ ವೀರಂಗೆ ವೀರಪಟ್ಟಮಂ ಕಟ್ಟಿ ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನೆಂದು ಪೊಟ್ಟಳಿಸುವ ಸುಯೋಧನನ ನುಡಿಯನವಕರ್ಣಿಸಿ ಕರ್ಣನಿಂತೆಂದಂ—

ಚ|| ಭಗವತಿಯೇಱುವೇಱ್ವ ತೆರದಿಂ ಕಥೆಯಾಯ್ತಿವರೇಱು ನೀನಿದಂ
ಬಗೆದಿವರಿನ್ನು ಮಾಂತಿಱುವರೆಂದು ವಿಮೋಹಿಸಿ ವೀರಪಟ್ಟಮಂ
ಬಗೆಯದೆ ಕಟ್ಟಿದೈ ಗುರುಗಳಂ ಕುಲವೃದ್ಧರನಾಜಿಗುಯ್ದು ಕೆ
ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ ೧೬

ಕಂ|| ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟೆಂಗೆಣೆ ಕ
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ ೧೭

ಆದಿಯೊಳವರಂ ಪಿರಿದೊಂ
ದಾದರದಿಂ ನಡಪಿದಜ್ಜರಪ್ಪುದಱಿಂದಂ
ಕಾದರಿವರವರೊಳವರುಂ
ಕಾದರ್ ನೆರೆದಿವರೊಳಿಂತು ನಂಬುವೆ ನೃಪತೀ ೧೮

ವ|| ಎಂಬುದುಮಾ ನುಡಿಗೆ ಸಿಡಿಲ್ದು ಕುಂಭಸಂಭವನಿಂತೆಂದಂ—

ಕಂ|| ಸಿಂಗದ ಮುಪ್ಪುಂ ನೆಗೞ್ದೀ
ಗಾಂಗೆಯರ ಮುಪ್ಪುಮಿಱಿಕೆವಡೆಗುಮೆ ವನಮಾ
ತಂಗಂಗಳಿನಸುಹೃಚ್ಚತು
ರಂಗ ಬಲಂಗಳಿನದೆಂತುಮಂಗಾಧಿಪತೀ ೧೯

ಕುಲಜರನುದ್ಧತರಂ ಭುಜ
ಬಲಯುತರಂ ಹಿತರನೀ ಸಭಾಮಧ್ಯದೊಳ

ಗ್ಗಲಿಸಿದ ಮದದಿಂ ನಾಲಗೆ
ಕುಲಮಂ ತುಬ್ಬುವವೊಲುಱದೆ ನೀಲಂ ಕೆಡೆ ನುಡಿವೈ ೨೦

ವ|| ಎಂದು ನುಡಿದ ಗುರುವಿನ ಕರ್ಣಕಠೋರ ವಚನಂಗಳ್ಗೆ ಕರ್ಣಂ ಕಿನಿಸಿ—

ಚ|| ಕಲಮನೆಮುನ್ನ ಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲಮಣ್ಮುಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲಮಾಕುಲಮಂ ನಿಮಗುಂಟು ಮಾಡುಗುಂ ೨೧

ಕಂ|| ಗಂಗಾಸುತಂ ಪೃಥಾಸುತ
ರಂ ಗೆಲ್ವೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್
ಗಾಂಗೇಯನಟಿದೊಡಹಿತರ
ನಾಂ ಗೆಲೆ ತಳ್ತಿಱಿವೆನನ್ನೆಗಂ ಬಲ್ವಿಡಿಯೆಂ ೨೨

ವ|| ಎಂದು ಕರ್ಣಂ ಪ್ರತಿಜ್ಞೆಗೆಯ್ವುದುಂ ಸಿಂಧುತನೂಜನಿಂತೆಂದಂ—

ಚಂ|| ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲಿದಪೆಯಣ್ಣ ಸೂಟ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್ ೨೩

ವ|| ಎಂದು ಮತ್ತಮಿಂತೆಂದಂ—

ಕಂ|| ಮುದುಪರ ಬಿಲ್ಬಲ್ಮೆಯುಮಿಱಿ
ವದಟುಂ ಬಗೆವಾಗಳಣ್ಣನೆಂದಂತುಟೆ ತ
ಪ್ಪದು ಕರಮೆ ತುಚ್ಛಮಕ್ಕುಂ
ಕದನದೊಳಿನ್ನೆನ್ನ ನುಡಿದ ನುಡಿಯುಂ ಕೇಳಿಂ ೨೪

ಮ|| ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾ ಚಕ್ರಂಭಯುಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ
ಪಡುವೆಣ್ಗಾವುದು ಪೋಗೆ ಪೋಗಡಿಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆಮಾಟಿಪ್ಪೆನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ ೨೫

ವ|| ಎಂದು ಮಹಾ ಪ್ರತಿಜ್ಞಾರೂಢನಾದ ಗಾಂಗೇಯನಳವನಳವಲ್ಲದೆ ಪೊಗಳ್ದವರಂ ಬೀಡಿಂಗೆ ಬಿಜಯಂಗೆಯ್ವುದೆಂದು ಕಳಿಪಿ ಮಱುದಿವಸಂ ಯುದ್ಧಸನ್ನದ್ಧನಾಗಿ ಪ್ರಯಾಣ ಭೇರಿಯಂ ಪೊಯ್ಸಿದಾಗಳ್—

ವ|| ಕೆಡೆದಂ ಪದ್ಮಜನಾಸನಾಂಬುರುಹದಿಂದಾಗಳ್ ಸುರೇಂದ್ರಾಚಳಂ
ನಡುಗಿತ್ತರ್ಕನಳುರ್ಕೆಗೆಟ್ಟು ನಭದಿಂ ತೂಳ್ದಂ ಮರುಳ್ದಪ್ಪಿದಳ್
ಮೃಡನಂ ಗೌರಿ ಸಮಸ್ತಮಿ ತ್ರಿಭುವನಂ ಪಂಕೇಜ ಪತ್ರಾಂಬುವೋಲ್
ನಡುಗಿತ್ತೆಂಬಿನಮುರ್ವಿ ಪರ್ವಿದುದು ತತ್ಸನ್ನಾಹ ಭೇರೀರವಂ ೨೬

ವ|| ಅಂತು ಮೊಳಗುವ ಭೇರೀರವದೊಡನೆ ನೆಲಂ ಮೊಟಗೆಯುಂ ತಳ್ತಿತ್ತಿದ ವಿಚಿತ್ರ ಕೇತುಗಳೊಡನುತ್ಪಾತಕೇತುಗಳ್ ಮೂಡೆಯುಂ ಪೆರ್ವೆಂಡಿರ್ ಸೂಸುವ ಸೇಸೆಯೊಡನೆ ರುಧಿರವರ್ಷಂ ಸುರಿಯೆಯುಂ ಹಿತಪುರೋಹಿತ ಜಯಜಯ ಧ್ವನಿಗಳೊಡನೆ ಹಾಹಾಕ್ರಂದನ ಧ್ವನಿಗಳ ನಿಮಿತ್ತಮಾಕಾಶ ದೊಳ್ ನೆಗೞೆಯುಂ ಕಾದುವೆನೆಂದು ನೆಗೞೆ ನುಡಿದ ನುಡಿಯುಮಂ ಪಿಡಿದ ಚಲಮುಮಂ ಬಗೆದು ಸೆರಗಂ ಬೆರಗುಮಂ ಬಗೆಯದೆ ಮಂಗಳಾಭರಣ ದೊಳ್ ನೆಱೆಯೆ ಕೆಯ್ಗೆಯ್ದು ಮುತ್ತಿನ ಮಾಣಿಕದ ಮಂಡನಾಯೋಗಂಗ ಳೊಳಾಯೋಗಂಗೊಂಡು ಬಂದ ಮದಾಂಧ ಗಂಧಸಿಂಧುರಮಪ್ಪ ಪಟ್ಟವರ್ಧ ನದ ಬೆಂಗೆವಾಯ್ದು—

ಕಂ|| ನಯಮನಯಂ ಜಯಮೆನಗಪ
ಜಯಮಿದು ಯಶಮಯಶಮೆಂಬಿಂದಂ ಬಗೆಯದೆ ನಿ
ಶ್ಚಯಿಸಿ ಕಲಹಮನೆ ಮನದೊಳ್
ಭಯಮಱಿಯದ ಕಲಿ ಸುಯೋಧನಂ ಪೊಱಮಟ್ಟಂ ೨೭

ವ|| ಅಂತು ಪೊಱಮಟ್ಟು ಮುಂದೆ ಪರಿವ ಧವಳಚ್ಛತ್ರ ಚಾಮರಂಗಳುಂ ಮಿಳಿರ್ವ ಪಾಳಿ ಕೇತನಂಗಳುಂ ಪೊಯ್ವ ಪಂಚಮಹಾ ಶಬ್ದಂಗಳುಂ ತನಗೆ ರಾಜರಾಜ ಶಬ್ದಮನನ್ವರ್ಥಂ ಮಾಡೆ ಜಯದ್ರಥ ಜಯತ್ಸೇನ ಸುದಕ್ಷಿಣ ಶಲ್ಯಶಕುನಿ ಧೃಷ್ಟಕೇತು ನೀಳ ಭಗದತ್ತ ಶ್ರುತಾಯುಧ ನಿಯತಾಯುಧಾಚ್ಯುತಾಯು ಧಾದಿಗಳಪ್ಪ ಪನ್ನೊಂದಕ್ಷೋಹಿಣೀಪತಿಗಳುಂ ಗಾಂಗೇಯ ದ್ರೋಣಾಶ್ವ ತ್ಥಾಮ ಕೃಪ ಕೃತವರ್ಮ ಪ್ರಭೃತಿಗಳುಂ ಕರ್ಣ ವೃಷಸೇನ ಚಿತ್ರಸೇನರೆಂಬ ಮೂವರುಂ ಬೆರಸುಬರೆ ಬಾಹ್ಲಿಕ ಭೂರಿಶ್ರವಸ್ಸೋಮದತ್ತರೆಂಬ ಮೂವರು ಮನಂತ ಬಲಂಬೆರಸು ಕೂಡಿಬರೆಯುವಂತಿ ದೇಶಾಧೀಶ್ವರರಪ್ಪ ವಿಂದಾನುವಿಂದ ರೆಣ್ಬತ್ತುನಾಲ್ಸಾಸಿರ ಮದದಾನೆವೆರಸು ಬಂದುಕೂಡೆ ಕಳಿಂಗರಾಜಂ ಕ್ಷೇಮ ಧೂರ್ತಿಯುಂ ಭೀಮಸೇನನ ಕೆಯ್ಯೊಳ್ ಸತ್ತ ಬಕಾಸುರ ಜಟಾಸುರರ

ಮಕ್ಕಳ್ ಚತುಸ್ತ್ರಿಂಶತ್ಸಹಸ್ರ ನಕ್ತಂಡರ ಪರಿವೃತ ಹಳಂಭೂಷ ಮುಸಲಾಯುಧ ಕಾಳನೀಳ ವಿದ್ಯುನ್ಮಾಲ್ಯಾದಿಗಳುಂ ಬಂದು ಕೂಡೆ ತ್ರಿಗರ್ತಾಧೀಶಂ ಸುಶರ್ಮನುಂ ಸಂಸಪ್ತಕರ್ ಪದಿನೆಂಟುಕೋಟಿ ರಥಂ ಬೆರಸು ಬಂದುಕೂಡೆ ಮತ್ತಮನೇಕ ದೇಶಾಧೀಶ್ವರರುಂ ಬರೆ ಯುಯುತ್ಸು ದುಶ್ಶಾಸನ ಚಿತ್ರಸೇನ ದುಸ್ಸಹ ದುಸ್ಸಳ ವಿಂದಾನುವಿಂದ ದುರ್ಧರ್ಷಣ ದುರ್ಮರ್ಷಣ ದುಸ್ಪರ್ಶನ ಸುಬಾಹು ದುರ್ಮುಖ ದುಷ್ಕರ್ಣ ವಿಕರ್ಣ ವಿವಿಂಶತಿಸುಲೋಚನ ಚಿತ್ರೋಪಚಿತ್ರನಂದೋಪನಂದ ಚಿತ್ರಾಂಗದ ಚಿತ್ರಕುಂಡಲ ಜರಾಸಂಧ ಸತ್ಯಸಂಧ ಸುಹಸ್ತ ದೃಢಹಸ್ತ ಪ್ರಮಾಥಿದೀರ್ಘಬಾಹು ಮಹಾ ಬಾಹುಗಳ್ ಮೊದಲಾಗೆ ತನ್ನ ನೂರ್ವರ್ ತಮ್ಮಂದಿರುಂ ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಂ ಸುತ್ತಿಱಿದು ಬಳಸಿಬರೆ ವಿಳಯಕಾಳ ವಾತಾಹತಿಯಿಂ ಜಳನಿಧಿಯೆ ತಳರ್ವಂತೆ ತಳರ್ದು ಕುರುಕ್ಷೇತ್ರಕ್ಕೆ ಮೊಗಸಿದಾಗಳ್—

ಚಂ|| ಕರಿ ಮಕರಂಗಳಂ ಕರಿ ಘಟಾವಳಿಯುಬ್ಬ ಕುಳಂಗಳಂ ಭಯಂ
ಕರತರಮಾದ ಪೆರ್ದೆರೆಗಳಂ ಹಯಸಂತತಿ ಮತ್ಸ್ಯಕೋಟಿಯಂ
ಸ್ಫುರಿತ ನಿಶಾತ ಹೇತಿಯುತ ಸದ್ಭಟ ಕೋಟಿ ನಿರಂತರಂ ತಿರ
ಸ್ಕರಿಸಿರೆ ಘೂರ್ಣಿತಾರ್ಣವಮನೊತ್ತರಿಸಿತ್ತು ಚತುರ್ಬಲಾರ್ಣವಂ ೨೮

ಮ|| ಮದವದ್ದಂತಿ ವರೂಥ ವಾಜಿಭಟ ಸಂಘಾತಂಗಳೀ ಲೆಕ್ಕಮೆಂ
ಬುದನಾಂ ನಿಟ್ಟಿಸಲಾಱೆನೊಂದನಱಿವೆಂ ತತ್ಸೈನ್ಯಪಾದೋತ್ಥಿತಂ
ಪುದಿದೆತ್ತಂ ರಜಮಂಬರ ಸ್ಥಳಮುಮಂ ಮುಟ್ಟಿತ್ತು ತಳ್ತುರ್ವಿ ಪ
ರ್ವಿದೊಡಾ ಮುನ್ನಿನತೆಳ್ಪುಗೆಟ್ಟು ಕೆಸಱಾಯ್ತಾಕಾಶಗಂಗಾಜಲಂ ೨೯

ಚಂ|| ರವಿಕಿರಣಾಳಿಗಳ್ ಧ್ವಜಪಟಾಳಿಯ ತಿಂತಿಣಿಯಿಂದಮುರ್ಚಲಾ
ಱವೆ ರವಿವಾಜಿಗಳ್ ನೆಗೆದ ಪಾಂಸುಗಳಿಂ ದೆಸೆಗೆಟ್ಟು ಪೋಗಲಾ
ಱವೆ ರವಿಬಿಂಬಮುಂದೆಸೆಯಲಾಱದೆ ಪೆಂಪಿನ ಪಿಣ್ಪನಾಂತ ಕೌ
ರವ ಬಳದಂತು ಮೇರೆ ಪವಣೆಂಬುದನಿನ್ನಱಿವಂದಮಾವುದೋ ೩೦

ಮ|| ಮದವದ್ದಂತಿ ಮದಾಂಬುಧಾರೆಗಳವಂದೊಂದಱೊಳ್ ಕೂಡಿಪ
ಣ್ಣಿದ ಜಾತ್ಯಶ್ವರಥಾಶ್ವ ಸಂಕುಳಖಲೀನೋದ್ಭೂತ ಲಾಲಾಜಲಂ
ಕದಡೆಟ್ಟಿತ್ತಮವುಂಕೆ ಬೇರೆ ಪರಭಾಗಂ ಬೆತ್ತು ಲೋಕಕ್ಕೆ ಸ
ನ್ನಿದಮಾಗಿರ್ದುವು ಕೌರವ ಧ್ವಜಿನಿಯೊಳ್ ಕಾಳಿಂದಿಯುಂ ಗಂಗೆಯುಂ ೩೧

ವ|| ಅಂತು ದುರ್ಯೋಧನಂ ತನ್ನ ಬಲದ ಕರಿಘಟೆಗಳ ಕರ್ಣತಾಳಾಹತಿಯಿಂ ಕುಲಗಿರಿಗಳಳ್ಳಾಡೆಯುಂ ತನ್ನ ಬಲದ ಪದಾಭಿಘಾತದೊಳಂ ಕುಲಗಿರಿಗಳ್

ಜೀಱಿಟ್ಟು ಪಾಱೇಱಿಯುಂ ತನ್ನ ಬಲದ ಪದೋತ್ಥಿತ ರಜವೆ ಮಹಾ ಸಮುದ್ರಂಗಳಂ ತೆಕ್ಕನೆ ತೀವೆಯುಂ ನಿಚ್ಚವಯಣದಿಂ ಬಂದು ಕುರುಕ್ಷೇತ್ರದ ಪೂರ್ವ ದಿಗ್ಭಾಗದೊಳ್ ಪ್ರಳಯಂ ಮೂರಿವಿಟ್ಟಂತೆ ಬೀಡಂ ಬಿಟ್ಟು ಧರ್ಮ ಪುತ್ರನಲ್ಲಿಗುಳೂಕನೆಂಬ ದೂತನ ನಿಂತೆಂದಟ್ಟಿದಂ—

ಚ|| ಮಸೆಯಿಸುಗುಳ್ಳ ಕೆಯ್ದುಗಳನರ್ಚಿಸುಗಾನೆಗಳಂ ತಗಳ್ದು ಪೂ
ಜಿಸುಗೆ ವಿಶುದ್ಧವಾಜಿಗಳನಾಜಿಗೆ ಜೆಟ್ಟಿಗರಾಗಿ ಕೊಳ್ಳಿವೀ
ಸಿಸುಗೆ ನಿರಂತರಂರವಳಿ ಘೋಷಿಸುಗಿಂದೆ ಕಡಂಗಿ ಸಾರ್ಚಿ ಬಿ
ಟ್ಟುಸಿರದೆ ನಿಲ್ವಕಾರಣಮದಾವುದೋ ನೆಟ್ಟನೆ ನಾಳೆ ಕಾಳೆಗಂ ೩೨

ವ|| ಎಂದಾ ದೂತನಾಮಾಱ್ಕೆಯೊಳೆ ಬಂದು ಪೇಱೆ ಕೇಳ್ದು ಯಮನಂದನ ನಿಂತೆಂದಂ—

ಚ|| ಪಗೆ ಮಸೆದಂದೆ ಕೆಯ್ದುಮಸೆದಿರ್ದುವು ಪೂಜಿಸುವಂಕದಾನೆವಾ
ಜಿಗಳೆಮಗಿಲ್ಲ ಜಟ್ಟಿಗರೆ ಎನ್ನೊಡವುಟ್ಟಿದರಲ್ತೆ ನಾಲ್ಕುಮಾ
ನೆಗಳೆವನಾಂದಲೀ ರಣದೊಳರ್ಚಿಸಿ ಬಿಟ್ಟಪೆನೇಕೆ ಮಾಣ್ಬೆನಾ
ವಗಮಿದನಿಂತೆ ಪೇೞ್ ನೆಱೆಯೆ ನಾಳೆಯೆ ಕಾಳೆಗಮಂತೆಗೆಯ್ವಮಾಂ ೩೩

ವ|| ಎಂದಾ ದೂತನಂ ವಿಸರ್ಜಿಸಿ ಪುಂಡರೀಕಾಕ್ಷಂಗೆ ಬೞಿಯನಟ್ಟಿ ಬರಿಸಿ ನಮ್ಮ ಪಡೆಯೊಳಾರ್ಗೆ ವೀರಪಟ್ಟಮಂ ಕಟ್ಟುವಂ ಪೇೞಿಮೆನೆ—

ಕಂ|| ಮಾತಂಗಾಸುರ ವೈರಿಯಲ್ಲಿ ಪಡೆದಂ ಬಿಲ್ಲಂ ಧನುರ್ವಿದ್ಯೆಗಂ
ತಾತಂಗಗ್ಗಳಮಾರುಮಲ್ಲದೞಿನಾಶ್ವೇತಂಗಮಂತಾ ನದೀ
ಜಾತಂಗಂದೊರೆ ಯುದ್ಧಮೆಂದೞಿದು ತಚ್ಛ್ವೇತಂಗೆ ಭೂಲೋಕ ವಿ
ಖ್ಯಾತಂಗಗ್ಗಳ ವೀರಪಟ್ಟಮನುದಾರಂ ಕಟ್ಟಿದಂ ಧರ್ಮಜಂ ೩೪

ವ|| ಅಂತು ವಿರಾಟ ನಂದನನಂ ಧರ್ಮನಂದನಂ ಸೇನಾನಾಯಕನಂ ಮಾಡೆ ನಾಳೆ ಕಾಳೆಗಮೆಂದು ಪಡೆವಳರ್ ಪೋಗಿ ಸಾರಿಮೆಂಬುಡುಮುಮವರ್ ಬೀಡು ವೀಡುಗಳ್ಗೆಲ್ಲಂ ಸಾಱಿದಾಗಳ್—

ಚಂ|| ಪಗೆಸುಗಿವನ್ನೆಗಂ ಮಸೆವ ವೀರಭಟರ್ಕಳ ರೌದ್ರಮಪ್ಪ ಕೆ
ಯ್ದುಗಳೆನಗುರ್ವಿನದ್ಭುತದಿನುರ್ವಿದ ಕೆಂಗಿಡಿಗಳ್ ಪಳಂಚಿ ತೊ
ಟ್ಟಗೆ ಕೊಳೆ ಪಾಯ್ದುವೋಲ್ ಪೊಳೆವಸಂಜೆಯಕೆಂಪದುಸಾಣೆಗೊಡ್ಡಿ ದಿ
ಟ್ಟಗೆಯ ರಜಂಬೊಲೆಂಬಿನೆಗಮಸ್ತಮಯಕ್ಕೆಱಿದಂ ದಿವಾಕರಂ ೩೫

ಆದಿಪುರಾಣ

೧. ಪೀಠಿಕೆ

ಶ್ರೀ ದೇವೇಂದ್ರಮುನೀಂದ್ರ ವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿ ಬ್ರಹ್ಮನಗಾಧಬೋಧನಿಲಯಂ ದುರ್ವ್ವಾರಸಂಸಾರ ವಿ
ಚ್ಛೇದೋಪಾಯನಿಯುಕ್ತ ಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ೧

ಬಗೆಯೊಳ್ಪೊಣ್ಮೆ ದಯಾರಸಂ ಚರಿತದೊಳ್ ಕೈಗಣ್ಮೆ ಚಾರಿತ್ರಮಾ
ವಗಮಾವಶ್ಯಕದೊಳ್ತಗುಳ್ದು ಪಲವುಂ ಶೀಲಂಗಳಂ ತಾಳ್ದಿದಂ
ದುಗಮೆಂದುಂ ತಮಗಾಗದಂತೆಸಗುವರ್ ಸರ್ವೋತ್ತಮರ್ ಸರ್ವಸಾ
ಧುಗಳೋರಂತೆ ಕಟಲ್ಚುಗೆಮ್ಮಮನದಿಂ ದುರ್ಮೋಹ ಸಂಮೋಹಮಂ ೨

ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಟ್ಕೆಮಗಿಲ್ಲಿಯೆ ವಾಗ್ವಿಳಾಸಮಂ ೩

ಪರಮ ಜಿನಮಾಲೆ ವರಗಣ
ಧರಮಾಲೆ ಮುನೀಂದ್ರಮಾಲೆ ನಿರಂ
ತರಮೀಗೆ ಭವ್ಯಮಾಲೆಗೆ
ಪರಾರ್ಘ್ಯ ಗುಣರತ್ನಮಾಲೆಯಂ ದಯೆಯಿಂದಂ ೪

ಮೃದುಪದಗತಿಯಿಂ ರಸಭಾ
ವದ ಪೆರ್ಚ್ಚಿಂ ಪುಣ್ಯವನಿತೆಯೊಲ್ ಕೃತಿ ಸೌಂದ
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧಬುಧಜನದ ಮನಮನಲೆಯಲೆ ವೇಡಾ ೫

ಗುರುದೇವೇಂದ್ರ ಮುನೀಂದ್ರನಿಂದ್ರನಮಿತಂ ದೇವಂ ಕಥಾನಾಯಕಂ
ಪುರುದೇವಂ ಕಥೆಯುಂ ತವಾದಿಪುರುಷಪ್ರಸ್ತುತ್ಯಜನ್ಮಾಳಿ ಬಂ
ಧುರಮೆಂದಂದೆ ಮದೀಯವಾಗ್ವಿಭವವಿನ್ಯಾಸಂ ಬಲಂಬೆತ್ತುದಿ
ನ್ನಿರು ಬಲ್ಲಿತ್ತಱ ಕೋಡು ಕೂರಿತದನಂತಿಂತುಂತೆನಲ್ಬರ್ಕುಮೋ ೬

ಇದುನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ
ಭ್ಯುದಯ ಪ್ರಾಪ್ತಿನಿಮಿತ್ತಮುತ್ತಮಯಶಂ ಶಂಸಾರದೊಳ್ ಸಾರಮು
ಪ್ಪುದಱಿಂ ಧರ್ಮಮದಂ ನಿಮಿರ್ಚುವುದಱಿಂ ಸಂಸಾರಸಾರೋದಯಂ ೭

ಅತಿಸುಭಗೆಗೆ ಸಂದ ಸರ
ಸ್ವತಿಗೀತನ ಲಲಿತವಾಗ್ವಿಳಾಸಮೆ ದಲಲಂ
ಕೃತಿಯವೊಲೆಸೆದಪುದು ಜಗ
ತ್ಪ್ರತೀತನೀತನೆ ಸರಸ್ವತೀಮಣಿಹಾರಂ ೮

ದುಂದುಭಿಗಭೀರನಿನದಂ
ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ
ದುಂದುಭಿ ಸಿಂಹಾಸನಸುರ
ದುಂದುಭಿಪತಿಚರಣಕಮಲ ಭೃಂಗಂ ಸಂಪಂ ೯

ಕವಿತೆಯೊಳಾಸೆಗೈವ ಫಲಮಾವುದೊ ಪೂಜೆ ನೆಗಟ್ತೆ ಲಾಭಮೆಂ
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಟ್ತೆ ಮುಕ್ತಿ ಸಂ
ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಱರೀವುದೇಂ ಪೆಱಱ ಮಾಡುವುದೇಂ ಪೆಱಱಿಂದವಪ್ಪುದೇಂ ೧೦

ಇದುವೆ ಸುಕವಿಪ್ರಮೋದ
ಪ್ರದಮಿದುವೆ ಸಮಸ್ತ ಭವ್ಯಲೋಕಪ್ರಮುದ
ಪ್ರದಮೆನೆ ನೆಗಟ್ದಾದಿಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ೧೧

ಇರೆ ಹರಿಪೀಠದೊಳ್ ಭರತನಾದರದಿಂ ಬೆಸಗೊಂಡುದಂ ಜಿನೇ
ಶ್ವರಮತದಿಂದಮಾವೃಷಭಸೇನಗಣಾಗ್ರಣಿ ಪೇೞ್ದುದಂ ಸವಿ
ಸ್ತರದೊಳೆ ವರ್ಧಮಾನಜಿನಸನ್ನಿಧಿಯೊಳ್ ವಿಪುಳಾದ್ರಿಯೊಳ್ ನಿಜಾ
ದರದೊಳೆ ಗೌತಮರ್ ಮಗಧನಾಯಕನುಂ ತಿಳಿವಂತು ಪೇೞ್ದುದಂ ೧೨

ಪ್ರಾಣಿಹಿತಮಂ ವಿನೇಯ
ಪ್ರೀಣನಕರಮಂ ಜಗತ್ರಯಪ್ರಕಟಿತ ಕ
ಲ್ಯಾಣಮುನೀನೆಗಟ್ದಾದಿಪು
ರಾಣಮನಪರಿಮಿತ ಭಕ್ತಿಯಿಂ ವಿರಚಿಸುವೆಂ. ೧೩

೨

ನೀಲಾಂಜನೇಯ ನೃತ್ಯ

ಶ್ರೀಪತಿಪುರುಪರಮೇಶ್ವರ
ನಾಪೂರ್ಣಮನೋರಥಂ ನಮನ್ನೃಪಮಕುಟಾ
ಟೋಪಂ ತ್ರೈಲೋಕ್ಯಾಂತ
ವ್ಯಾಪಿತಮಹಿಮಂ ಸರಸ್ವತೀಮಣಿಹಾರಂ ೧

ಸ್ಫುರಿತಮಣಿಖಚಿತಹರಿವಿ
ಷ್ಟರದೊಳಲಂಕರಿಸಿ ನೆಱೆದ ರಾಜನ್ಯಕಮಂ
ದರಹಸಿತಮೃದುವಿಲೋಕನ
ಪರಿಭಾಷಣದಿಂದಮಾದಮಾರಿಸುತ್ತುಂ ೨

ಎರಡೋಳಿಯೊಳಂ ಮೊದಲೊಳ್
ಭರತೇಶ್ವರಬಾಹುಬಲಿಗಳಿರೆ ಮತ್ತಿನ ಪು
ತ್ರರುಮವರ ಕೆಲದೊಳಿರೆ ಸುರ
ಶರಾಸನಂ ನೆಗಟ್ದುದವರ ಮಕುಟಪ್ರಭೆಯೊಳ್. ೩

ವ|| ಮತ್ತಂ ಸಿಂಹಾಸನಾಸನ್ನಸ್ಥಿತಮಣಿಮಯಪೀಠದೊಳ್ ನಾಭಿರಾಜನುಂ, ಕನಕಪೀಠದೊಳ್ ಕಚ್ಛಮಹಾಕಚ್ಛರುಂ, ಸೋಮವಂಶಲಲಾಮಂ ಸೋಮಪ್ರಭನುಂ, ಹರಿವಂಶಾಗ್ರಗಣ್ಯಂ ಹರಿಕಾಂತನುಂ, ನಾಥವಂಶನಾಯಕನಕಂಪನನುಂ,ಉಗ್ರವಂಶಾಗ್ರಗಣ್ಯಂ ಕಾಶ್ಯಪನುಂ ಇರೆ,ಮತ್ತಂ ಪೆಱರುಮಱಿಕೆಯ ನಾಯಕರುಂ ಮಣಿಮಕುಟ ಬದ್ಧರಾತ್ಮೋಚಿತ ಪ್ರದೇಶಾಸನಂಗಳೊಳಿರ್ದೋಲಗಿಸುತ್ತಿರ್ಪನ್ನೆಗಮಾದಿ ದೇವನ ಪರಿನಿಷ್ಕ್ರಮಣ ಕಲ್ಯಾಣಕಾಲಮತ್ಯಾಸನ್ನಮೆಂಬುದಂ ನಿಜಾವಧಿ ಬೊಧದಿಂದಮಱಿದು ಸಂಗೀತಪ್ರಸಂಗದಿಂದವೋಲಗಿಸಲೆಂದು,

ಸುರರಾಜಂ ತನ್ನ ಗಂಧೇಭದ ಕೆಲಗೆಲದೊಳ್ ಸಿಂಧುರಾರೂಢರೆತ್ತಂ
ಬರೆ ಗಂಧರ್ವಾಮರರ್ ಮೆಚ್ಚಱಿದು ಮಧುರಗೀತಂಗಳಿಂ ಮೆಚ್ಚಿಸುತ್ತುಂ
ಬರೆ ನಾನಾತೋದ್ಯದಿಂ ವಾದಕದಿವಿಜಗಣಂ ತನ್ನನಾರಾಧಿಸುತ್ತುಂ
ಬರೆ ಮುಂದಿರ್ದಪ್ಸರೋವೃಂದಮುಮಧಿಕಮುದಂ ಬಂದನಾಗಳ್
ಸುರೇಂದ್ರಂ. ೪

ವ|| ಬಂದು ಭಗವದಾಸ್ಥಾನಮಂಟಪಮನವನತ ಮಣಿಕಿರೀಟರತ್ನಪ್ರದೀಪಂ
ಗಳಿಂದಮರ್ಚಿಸಿ ಸಿಂಹಾಸನೋಪಾಂತಸ್ಥಿತಕನಕಪೀಠದೊಳ್ ಕುಳ್ಳಿರ್ದು

ಪರಮನನೋಲಗಿಸಿ ಕೃತಾ
ರ್ಥರೆಮಪ್ಪೆವಮೋಘಮವಸರಂಗುಡಿಸುವುದೆಂ
ದಿರದೆನ್ನನಧಿಕಭಕ್ತಿಯೆ
ತರೆ ಬಂದುದು ದೇವ ದಿವಿಜಪೇಟಕಮನಿತುಂ

ಸಮನಿಸಲ್ಲಿವರ ಮನೋರಥ
ಮಮರೀನೃತ್ಯ ಪ್ರಸಂಗಮಕ್ಕಭವ, ಭವ
ತ್ಕ್ರಮಕಮಳ ಸೇವೆಯಿಂದಿಂ
ತುಮನಂತಂ ಗೀತವಾದಿತಂ ಫಲಮಲ್ತೇ ೬

ವ|| ಅಂತುಮಲ್ಲದೆ,

ಅಸಮಪ್ರೇಕ್ಷಣಮೀಕ್ಷಣೈಕರಸಮಂ ಪಾರ್ದಿರ್ದುದೀರಾಜ ಪು
ತ್ರಸಮೂಹಂ ಪರಿಪೂರ್ಣಭಾವರಸಮಂ ಸಂಗೀತಮಂ ತೋಱಿ ಮೆ
ಚ್ಚಿಸಲೋರಂತೆ ಸಮಸ್ತ ದೇವಕುಪಿತವ್ಯೂಹಂ ತೆರಳ್ದಿರ್ದುದಿಂ
ಬೆಸಸಿಂ ಭಾರತಿಕಂಗೆ ನಾಟ್ಯಘಟನ ಪ್ರಸ್ತಾವನಾಟೋಪಮಂ ೭

ಎಂದಿಂದ್ರಂ ಬಿನ್ನವಿಸಲೊ
ಡಂ ದರಹಸಿತಾನನಾಬ್ಜನಾವುದು ನಿಮಗಾ
ನಂದಮದಕ್ಕೆನೆ ನುತಸುರ
ವೃಂದಂ ಸಂಗೀತಕಕ್ಕೊಡರ್ಚಲ್ವೇೞ್ದಂ ೮

ಪೇೞ್ವುದುಮನಂಗನಿರ್ದೆಡೆ
ವೇೞ್ವವೊಲೊರ್ವೊದಲೆ ಗೀತವಾದಿತರವಮೇ
ವೇೞ್ವುದೊ ಸಭೆಯಂ ರಸದೊಳ್
ಪೂೞ್ವವೊಲೆಸೆದತ್ತು ದಿವಿಜಪೇಟಕಜನಿತಂ ೯

ಮದನನ ಬಿಲ್ಲೊಳವಾತನ
ಸುದತಿಯ ಬೀಣೆಯೊಳವೆಸೆವ ದನಿಯುಮನಿಱಿಸಿ
ತ್ತಿದುದಲೆನಿಸಿದುದು ಸುರತೂ
ರ್ಯದ ರವದೊಳ್ ಪುದಿದು ಸುರವಧೂಗೀತರವಂ ೧೦

ಅಂಬರ ಭೂಷಣಮಾಲಾ
ಡಂಬರದ ಬೆಡಂಗನಮರ ನರ್ತಕಿ ಗಡಮೋ
ನೆಂಬುದೊ ಧರಣೀಂದ್ರಂಗಮ
ಳುಂಬಂ ಪೊಗಟಲ್ಕೆ ರೂಪು ನೀಲಾಂಜನೆಯಾ ೧೧

ಕಳೆಗೀತಂ ವಾದ್ಯಂ ನೃತ್ಯ
ಲೀಳೆ ಪೆಜಿರ್ಗೊಪ್ಪದೀಕೆಗಲ್ಲದೆ ಗಣಿಕಾ
ತಿಳಕಮಿವಳ್ ನರ್ತನರಸ
ದೊಳೆ ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್ ೧೨

ಎನಿಸಿದ ನೀಲಾಜಂನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳಜನಾಂತರಂಗಮಂ ರಂಗಮುಮಂ ೧೩

ನಿಲ್ತುವು ರಸಂಗಳಲ್ಲಿ ಮ
ಡಲ್ತಿನೆ ಭಂಗಿಯೊಳನಂಗಜಂಗಮಲತೆವೊಲ್
ನಿಲ್ತು ಜವನಿಕೆಯ ಮಱೆಯೊಳ್
ಪೋಲ್ತಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯಂ ೧೪

ನೆಗಟೆ ನಿಜಪ್ರತಿಬಿಂಬಂ
ನೆಗಟ್ದ ರಸುಗಳುರದೊಳೆಸೆವ ಹಾರಮಣಿ ದ್ಯೋ
ತಿಗಳೊಳವರೆರ್ದೆಯನಲ್ಲಿಂ
ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ ೧೫

ತಾಳದ ಲಯಮಂ ನಿಱಿಸಿ ನೀ
ಳಾಳಕ ಹಾರದ ಪೊದಟ್ದ ಮುತ್ತೆಂಬವು ಮಂ
ಮೇಳಿಸಿ ಕೈಕೊಂಡುವು ಲಾಳಿ
ತಾಳಕಿ ಕೈಕೊಂಡಳೆಂಬುದೊಂದಚ್ಚರಿಯೇ ೧೬

ರಸಭಾವಾಭಿನಯಂಗಳ್
ಪೊಸವೆ ಪುಗಿಲ್ ಪೊಸವೆ ಚಲ್ಲಿಗಳ್ ಪೊಸವೆ ನಯಂ
ಪೊಸವೆ ಕರಣಂಗಳುಂ ನಿ
ಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ ೧೭

ಭಾವದನುಭಾವದೆಸೆವ ವಿ
ಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ
ಭಾವಿಸುವೊಡಾದಿದೇವನ
ದೇವೇಂದ್ರನ ಬಗೆಗಮಸದಳಂ ನರ್ತಕಿಯಾ ೧೮

ಸುರಗಣಿಕಾ ನಾಟ್ಯರಸಂ
ಪರಮನ ಚಿತ್ತಮುಮನ್ನೆದೆ ರಂಜಿಸಿದುದು ವಿ
ಸ್ಫುರಿತಸ್ಫಟಿಕಂ ಶುದ್ಧಾಂ
ತರಂಗಮೇನನ್ಯರಾಗದಿಂ ರಂಜಿಸದೇ ೧೯

ಆ ಮಧುರಾಕಾರ ಲತಾ
ಕೋಮಳೆ ತನಗಾಗಳಾಯುರಂತಂ ಬರೆ ಸೌ
ದಾಮಿನಿವೊಲ್ ಭೋಂಕೆನೆ ಸುರ
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್ ೨೦

ರಸಭಂಗಭಯದಿನಿಂದ್ರಂ
ಪೊಸತೊಂದಾದೊರೆಯ ಪಾತ್ರಮಂ ತಂದನು ಸಂ
ಧಿಸುವುದು ಮದನಣಮುಱಿಯ
ಲ್ಕೆ ಸುರಾಸುರಸಮಿತಿಗಾದುದಿಲ್ಲಾ ಕ್ಷಣದೊಳ್ ೨೧

ಆ ನೀಲಾಜಂನೆಯೆಂದೆ ಮ
ನೋನಯನೋದಿತ ವಿಮೋಹದಿಂದಿರೆ ಸಭೆ ವಿ
ಧ್ಯಾನಿಲಯನಱಿದದಂ ದೇ
ಹಾನಿತ್ಯತೆಗಿಂತು ನಾಡೆ ಚೋದ್ಯಂಬಟ್ಟಂ ೨೨

ನಾರೀರೂಪದ ಯಂತ್ರಂ
ಚಾರುತರಂ ನೋಡೆ ನೋಡೆ ಕರಗಿದುದೀ ಸಂ
ಸಾರದನಿತ್ಯತೆ ಮನದೊಳ್
ಬೇರೂಱಿದುದೀಗಳಿಂತಿದಂ ಕಡೆಗಣಿಪೆಂ ೨೩

ಕೋಟಿತೆಱದಿಂದಮೆಸೆವೀ
ನಾಟಕಮಂ ತೋಱಿ ಮಾಣ್ದಳಿಲ್ಲಳ್ ಬಗೆಯೊಳ್
ನಾಟುವಿನಮಮರಿ ಸಂಸ್ಕೃತಿ
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ೨೪

ತನುರೂಪವಿಭವಯೌವನ
ಧನ ಸೌಭಾಗ್ಯಾಯುರಾದಿಗಳ್ಗಿಣೆ ಕುಡುಮಿಂ
ಚಿನ ಪೊೞೆಪು ಮುಗಿಲ ನೆೞಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬುಪರ್ಬಿದ ಬೋಗಂ ೨೫

ನಾನಾಯೋನಿಗಳೊಳ್ ಸುಱಿ
ದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆಗುಂ
ಮಾನುಷ್ಯಮನತಿ ದಾರುಣ
ಮಾನಸಶಾರೀರದುಃಖಪೀಡಿತನಕ್ಕುಂ ೨೬

ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನೆಲನಿಂ
ದೆನಿತೆನಿತಂ ಮಱುಗಿದುದಿ
ಲ್ಲನಂತ ಸಂಸಾರಗಹನದೊಳ್ ಜೀವಂಗಳ್ ೨೭

ಜನನೀಜನಕ ಸಹೋದರ
ವನಿತಾಸುತ ಪುತ್ರಮಿತ್ರ ಸಂಬಂಧಮದೆಂ
ತೆನಿತೆನಿತು ಭವದೊಳಾಯ್ತಿ
ಲ್ಲೆನಿತೆನಿತಂ ನೆನೆವುದೆನಿತನವಧರಿಸುವುದೋ ೨೮

ತನುಗೆ ಪೊಱೆ ತುಡುಗೆ ನವಲೇ
ಪನಮೆ ಮಳಂ ಗೀತಮಳ್ಕೆ ನೃತ್ಯಂ ಬಗೆಯ
ಲ್ಕೆ ನಗೆದಲುನ್ಮತ್ತವಿಳಾ
ಸನಮಿಂತಿನಿತಱೊಳವೊಂದಱೊಳ್ ಪುರುಳುಂಟೇ ೨೯

ವಿದಿತಂ ಮೂರ್ಧಾಭಿಷಿಕ್ತರ್ ಪಲಬರರಸುಗಳ್ ಪ್ರಾಜ್ಯಸಾಮ್ರಾಜ್ಯ ಲಕ್ಷ್ಮೀ
ಪದಮಂ ಕೈಕೊಂಡು ತಮ್ಮಂ ಮರೆದು ವಿಷಯ ಭೋಗಾಸವಾತ್ಯಂತ ಸೇವಾ
ಮದದಿಂದಂ ಧರ್ಮಪೋತಚ್ಯುತರನವಧಿ ಸಂಸಾರವಾರಾಶಿಮಧ್ಯಾ
ಸ್ಪದ ಸರ್ವಗ್ರಾಸಿ ಭೀಮಾಂತಕ ವದನ ಮಹಾಗರ್ತದೊಳ್
ಮಗ್ನರಾದರ್ ೩೦

ಬಗೆದೀಡಾಡೆ ದುರಂತ ದುಃಖತತಿಗಳ್ ಬೆನ್ನಟ್ಟಿದುರ್ಮೋಹ ಮ
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳಾಟಂದು ನು
ಣ್ಣಗೆ ನುಂಗುತ್ತಿರೆ ಮಾರರಾಗ ಶಿಶುಮಾರಂಗಳ್ ಮಹೋಗ್ರಂಗಳಿ
ನ್ನೆಗವೋರಂತೆ ತೊೞಲ್ದಿನಿಂತಿರಿಯಲಾಱೆಂ ಭವಾಂಭೋಧಿಯೊಳ್ ೩೧

ವ|| ಎಂದು ಸಂಸಾರ ಶರೀರ ಭೋಗವಿರಕ್ತಾಂತರಂಗನುಂ ಮುಕ್ತಿ ಕಾಂತಾನುರಕ್ತ ಚಿತ್ತನುಮಾಗಿರ್ಪನ್ನಗಂ, ಪೂರ್ವಭವಾಭ್ಯಸ್ತ ಸಮಸ್ತಾಗಮಾರ್ಥರುಂ ಉಚಿತ ಶುಭಭಾವನಾಧ್ಯಾಸಿತಾಂತಃಕರಣರುಂ ತ್ರಿಭುವನ ಗುರುಪರಿನಿಷ್ಕ್ರಮಣಕಲ್ಯಾಣ ಶಾರದಾಗಮ ಪ್ರತೀಕ್ಷಣ ದಿವ್ಯ ಹಂಸರುಂ, ಬ್ರಹ್ಮಕಲ್ಪಾಂತನಿವಾಸಿಗಳುಮಪ್ಪ ಸಾರಸ್ವತಾದಿತ್ಯ ವಹ್ನ್ಯರುಣಗರ್ದತೋಯತುಷಿತಾವ್ಯಾಭಾದಾರಿಷ್ಟರೆಂಬೆಣ್ಬರುಂ ಲೋಕಾಂತಿಕ ದೇವರ್ ಬಂದು,

ಸುರಭೂಜಪ್ರಸವಂಗಳಂ ಸುರಿದು ಪಾದಾಂಭೋಜದೊಳ್ ದೇವ ಭೀ
ಕರಕರ್ಮದ್ವಿಷರಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರಸಂ
ಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತದುದ್ಯೋಗ ಮಿ
ನ್ನಿರವೇಂ ತ್ರೈಭುವನೋಪಕಾರಕರಣ ವ್ಯಾಪಾರಪಾರಾಯಣಾ ೩೨

ಪರಮಾರ್ಹಂತ್ಯಮನೆಯ್ದಲಿರ್ದುದದಱಿಂ ಮೇಲುಂಟೆ ಸತ್ವಂಚರಾ
ಚರಮಂ ನೆಟ್ಟನೆ ಪರ್ವಲಿರ್ದುದದಱಿಂ ಮೇಲುಂಟೆ ವಿಜ್ಞಾನಮಿಂ
ತೆರಡರ್ಕಂ ನೆಲೆಯಾಗಿಯುಂ ವಸುಮತೀ ಸಾಮ್ರಾಜ್ಯದೊಳ್ ನೀಂ ನಿರಾ
ದರನಾಗಿರ್ದುದೆ ತತ್ಸುಖಾನುಗುಣಮಂ ಪೇೞ್ಗುಂ ಗುಣಾಂಭೋನಿಧೀ ೩೩

ವ|| ಅದು ಕಾರಣದಿಂದಮೀ ವಸುಂಧರಾರಾಜ್ಯ ಮೋಹಮೆಂಬ ವಜ್ರ ಲೋಹನಿಗಳಮಂ ಪಱಿಯೆ ಪೊಯ್ವರಾಜಕುಂಜರಂಗೆ ನಿನಗಪವರ್ಗ ಮಾರ್ಗಂ ನಿರರ್ಗಳಮೆ ವಲಮಾದೊಡಮೇಂ,

ವಿಶದಯಶಧರ್ಮಮಷ್ಟಾ
ದಸ ಕೊಟ್ಯನುಕೋಟಿ ಸಾಗರೋಪಮಕಾಲಂ
ಪ್ರಶಮಿಸಿ ನಿಂದುದದಂ ನೀಂ
ವಿಶದಂ ಮಾೞ್ದುದು ಜಗದ್ವಿಶೇಷಕ ಚರಿತಾ ೩೪

ವ|| ಎಂದವರ್ ಪ್ರತಿಬೋಧಿಸಿ ಪೋಗಲೊಡಂ ಪಸಿನಿಷ್ಕ್ರಮಣ ಕಲ್ಯಾಣೋತ್ಸವೋತ್ಸುಕರಾಗಿರಲಾ ಸಕಳಸುರಸಮಾಜಂಬೆರಸಮರರಾಜಂಮುಂ ಮಾಡಿದ ಜನ್ಮಾಭಿಷೇಕಕ್ಕಂ ಬೞಿಕ್ಕ ಮಾಡಿದರಾಜ್ಯಾಭಿಷೇಕಕ್ಕಮಿದುವೆ ಮಿಗಿಲೆಂಬತಾಗೆ ಪಂಚಮಹಾಂಬುಧಿ ಪವಿತ್ರ ಜಲಪರಿಪೂರ್ಣ ಸುವರ್ಣಕಲಶಂಗಳಿಂದ ಮಭಿಷೇಕಂಗೆಯ್ದು ತದನಂತರದೊಳ್ ಭರತ ರಾಜನಂ ಬರಿಸಿ ರಾಜ್ಯಾಭಿಷೇಕಂಗೆಯ್ದಂ.

ಭರತಂಗಭಿಷೇಕ ಪುರ
ಸ್ಸರಮೂರ್ಜಿತ ರಾಜ್ಯಪದವಿಯಂ ಕೊಟ್ಟು ನಿಜಾ
ದರದಿಂದೆ ಬಾಹುಬಲಿಗಂ
ಪರಮಂ ಯುವರಾಜಪದವಿಯಂ ದಯೆಗೆಯ್ದಂ ೩೫

ವ|| ಅಂತು ದಯೆಗೈದಯೋಧ್ಯಾ ಪೌದನಪುರಾಧಿಪತ್ಯದೊಳಿರ್ವರುಮಂನಿಱಿಸಿ ನಿರ್ಭರ ಪ್ರಮೋದ ಪರಂಪರಾ ಪರೀತ ದಿವಿಜಮನುಜ ಸಮಾಜದೊಳ್,

ಭಗವತ್ಪರಿನಿಷ್ಕ್ರಮಣ
ಪ್ರಗುಣೀಕೃತ ಸುರಮೃದಂಗರವಮೊಂದೆಡೆಯೊಳ್
ನೆಗೞ್ದುದು ರಾಜ್ಯಸಮರ್ಪಣ
ಯುಗಪತ್ಪ್ರತಿಹತಮಮಂದರವಮೊಂದೆಡೆಯೊಳ್ ೩೬

ನೆಗೞ್ದ ತಪೋರಾಜ್ಯದ ಬಗೆ
ಮಿಗೆ ನಿಂದಂ ವೃಷಭನಾಥನತ್ತೊಂದೆಡೆಯೊಳ್
ಜಗತೀರಾಜ್ಯದ ಬಗೆ ಕೈ
ಮಿಗೆ ನಿಂದಂ ಭರತರಾಜನಿತ್ತೊಂದೆಡೆಯೊಳ್ ೩೭

ಬಾಹುಬಲಿವಿಜಯಂ

ತುದಿಯೆಯ್ದಿತ್ತೆಮ್ಮ ವಿಶ್ವಕ್ಷಿತಿತಲಜಯಮಿಂತೆಮ್ಮ ದಾಯಾದನುಂ ಕೋ
ಪದಿನೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂಮಾ
ಣ್ಬುದುಸೂಟಿಲ್ತೆಮ್ಮ ಸಾಪತ್ನನ ಭುಜಬಲಮಂ ನೋಳ್ಪೆನೆಂದಾಗಳಾಸ್ಥಾ
ನದಿನೆರ್ದಂ ಚಕ್ರಿ ರಾಜನ್ಯಕ ಮಕುಟಮಣಿ ಪ್ರೋಜ್ವಳದ್ರೋಚಿಯಮ
ಚಕ್ರಂ ೧

ವ|| ಆಗಳ್ ಸಮರ ಸನ್ನಾಹ ಭೇರೀನಿನಾದಂ ಪೆರ್ಚೆ ವಿಜಯಪರ್ವತ ಗಜೇಂದ್ರದ ಬೆಂಗೆವಂದು ವೀರರಸಂ ಕೈಗಣ್ಮಿ ಪೊಣ್ಮುತ್ತಿರೆನಿಜಬಲಮಂ ನೋಡಿ ಸಾರ್ವಭೌಮಂ ಪೌದನಪುರಾಭಿಮುಖನಾಗಿ ನಡೆದು—

ರಜಮುಂ ದಿಗ್ಧೂಮಮುಂ ಸಂದಣಿಸೆ ಪರುಷವಾತಾಹತಿಪ್ರೋಚ್ಛಳತ್ಸಾ
ಮಜಸೇನಾಕುಂಭಸಿಂದೂರಮುಮೊದವಿದ ದಿಗ್ದಾಹಮುಂ ಕೂಡೆ ಭೂರಿ
ಧ್ವಜಿನೀ ಸಂಕ್ಷೋಭಮಾಕಂಪಮುಮಶುಭಮಹೀ ಕಂಪಮುಂ
ತನ್ನೊಳೊಂದಾ
ಗೆ ಜಗಕ್ಕೇನಿಲ್ಲಿ ಪೇಟಾದಪುದೆನೆ ದೆಸೆಬರ್ಪಂತೆ ಬಂದೊಡ್ಡಿನಿಂದಂ ೨

ವ|| ಅನ್ನೆಗಮಿತ್ತ ಬಾಹುಬಲಿಕುಮಾರನ ವಿಜಯ ಸೈನ್ಯದೊಳ್—

ಮಸೆಯಿಪ ಶಸ್ತ್ರಕೋಟಿ ಸಮ್ಮುಕಟ್ಟುವ ಸನ್ನಣಮುಟ್ಟಿಯಿಂದಮು
ರ್ಚಿಸುವ ತುರಂಗದಂತಿರಥಸಂಕುಳಮೇಱುವ ದರ್ಭಶಯ್ಯೆ ಪೂ
ಜಿಸುವ ಜಿನೇಂದ್ರಬಿಂಬಮೆಸೆವುಗ್ರ ರಣಾನಕರೌದ್ರಘೋಷಮೋ
ರ್ಸೆಸಕಮನುಂಟು ಮಾಡಿದುದು ಪಂದೆಗಮುಂದಿನ ವೀರಗೋಷ್ಠಿಯೊಳ್ ೩

ವ|| ಆಗಳಾ ಬಾಹುಬಲಿಕುಮಾರನುಂ ವಿಜಯಗಜದ ಬೆಂಗೆವಂದು—

ಇರದೆಂಟುಂ ದಿಗ್ಗಜಂಗಳ್ ನೆರೆದಿದಿರಿದಿರೊಳ್ ತಾಗೆಯುಂ ಮಂದರಕ್ಷ್ಮಾ
ಧರದೊಳ್ ಕೈಗೂಡಿ ಗೋತ್ರಾದ್ರಿಗಳೆ ಗಜಘಟಾರೂಪದಿಂ ತಾಗೆಯುಮ
ತ್ಕರಿ ತಾಂಗಲ್ ತಾನೆ ಸಾಲ್ಗುಂ ಮನುಜಗಜಘಟಾ ಬಂಧಮೇ
ಭಂಡವೆಂಬೊಂ
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರೋತ್ಸಾಹ ಸಂಪನ್ನನಾದಂ ೪

ವ|| ಅಂತುಭಯಬಲದ ಸೆೞಿಕೋಲ್ಗಳೊಂದೊಂದಂ ಮುಟ್ಟುವಿನಂ ಅತ್ತ ರಾಜಾಧಿರಾಜನುಂ ಇತ್ತ ಯುವರಾಜನುಂ ನಿಂದಾಗಳುಭಯಬಲದ ಮಂತ್ರಿ ಮುಖ್ಯರಿರ್ವರಿರ್ಬರರಸುಗಳಪ್ಪೊಡೆ ಚರಮದೇಹಧಾರಿಗಳಿವರ ಯುದ್ಧ ವೆಂಬುದತಿಕ್ರೂರಗ್ರಹಯುದ್ಧದಂತೆ ಸಕಲಪ್ರಜಾವಿನಾಶಕರಮಲ್ಲದೆ ಪೆಱತಲ್ತು ; ಚತುರಂಗಬಲಯುದ್ಧದೊಳಲ್ಲದೆ ಗೆಲ್ಲಸೋಲಮೆಂಬುದಿಲ್ಲ ; ಸಮಸ್ತಜನ ಸಂಹರಣ ಕಾರಣಮಪ್ಪ ರಣದೊಳೇವಂದಪುದೆಂದು ಧರ್ಮ ಯುದ್ಧಮನೆ ತಮ್ಮೊಳ್ ಸಮಕಟ್ಟಿ ಮುನ್ನಂ ಭರತೇಶ್ವರ ಚಕ್ರವರ್ತಿ ಯಲ್ಲಿಗೆವಂದು—

ಜಯಮಂ ಕೈಕೊಳ್ವುದು ದೃ
ಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳೆ ಜನ
ಕ್ಷಯ ಕರಣದೊಳೇಂ ಪಾಪಮು
ಮಯಶಮುಮಪ್ಪನಿತೆ ದೇವ ಕಡೆಗಣಿಪುದಿದಂ ೫

ಉೞಿವುದು ಭುಜಬಲದಳವಂ
ಘೞಿಲನೆ ಕೊಳೆ ಹೀನಬಲನನಧಿಕಬಲಂ ತೊ
ತ್ತೞಿದುೞಿದನೆಂಬ ಲೋಕದ
ಪೞಿ ಪೊರ್ದದೆ ಮಾಣ್ಗೆ ಧರ್ಮಯುದ್ಧದೊಳೆಸಗಿಂ ೬

ವ|| ಎನೆ ಭರತೇಶ ಚಕ್ರವರ್ತಿ ಇಂತಾದೊಡೆಮಗೆ ಬಾಹುಬಲಿಯ ಸಮರ ಸಂಘಟ್ಟದೋಹಳಮಿದು ದರಿದ್ರಂಗೆ ಹೀನಗರ್ಭದೋಹಳಂತಾದುದೆಂದು ಸಿಂಧುರಸ್ಕಂಧಪೀಠದೊಳ್ ಸುಖಾಸೀನನಾಗಿರ್ದಾಗಳ್ ಬಾಹುಬಲಿಕುಮಾರ ನಲ್ಲಿಗೆ ಮಂತ್ರಿಗಳ್ ಬಂದು ಧರ್ಮಯುದ್ಧವ್ಯತಿಕರಮಂ ಬಿನ್ನಪಂಗೆ ಯ್ದಾಗಳ್

ಎನ್ನ ಚತುರಂಗಬಲಮನಿ
ದಂ ನರರಾರಾಂಪರೆಂಬ ನಿಮ್ಮರಸನಗ
ರ್ವೋನ್ನತಿಯುಡುಕುಮನಿನಿಸಾ
ನುಂ ನೋಡಿಂ ಧರ್ಮಯುದ್ಧಮಕ್ಕೆಮ ಬೞಿಯಂ ೭

ವ|| [ಎನೆ]ಬಾಹುಬಲಿಕುಮಾರನಂ ಮಂತ್ರಿಪುಂಗವರ್ ನೋಡಿ

ಬಿಸುಡುವುದಸದಾಗ್ರಹಮಂ
ಪ್ರಸನ್ನಗಂಭೀರಚಿತ್ತದಿಂದಿದನವಧಾ

ರಿಸುದು ಯುವರಾಜ ಮನಂ
ಬಸದೊರ್ವಗೆ ಸಲಿಪುದೆಮ್ಮ ಮುದುಗಣ್ಣನಮಂ ೮

ವ|| ಎಂದು ನುಡಿದೊಡಂಬಡಿಸಿ ಧರ್ಮಯುದ್ಧಮನುಭಯಬಲಂಗಳೊಳ ಮಾನಂದಭೇರಿಯಂ ಪೊಯ್ಸಿ ಘೋಷಿಸಲ್ವೇೞ್ದು ಬಾಹುಬಲಿ ಕುಮಾರನ ಭರತೇಶ್ವರನ ಪಕ್ಷದ ಲೋಕಮನೆರಡುಂ ದೆಸೆಯೊಳಂ ಮಧ್ಯಸ್ಥರಾಗಿ ಮಿಡು ಕಡೆ ನೋಡುತ್ತಿರ್ಪಂತು ನಿಯಮಿಸಿದಾಗಳ್ ಇರ್ವರುಂ ನೀಲನಿಷಧಗಿರಿಗ ಳೊಂದೊಂದಱೊಳ್ ಬಂದು ಪೊಣರ್ದು ನಿಲ್ಪಂತೆ ನಿಂದೊರ್ವರೊರ್ವರೆ ಮೆಯಿಕ್ಕದೆ ನೋಡುವಲ್ಲಿ—

ಲಲಿತ ಮುಖಸರಸಿಜಂ ನಿ
ಶ್ಚಳಪಕ್ಷ್ಮಂ ಸ್ತಿಮಿತತಾರಕಂ ಭುಜಬಲಿ ಕ
ಣ್ಣೊಳೆ ತವೆ ಪೀರ್ವವೊಲೇ ನಿ
ಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ ೯

ವ|| ಅಂತು ಬಾಹುಬಲಿ ತೇಜಃಪುಂಜಮೆ ಕಣ್ಣೊಳುಳ್ಕುವಂತೆ ಸೈರಿಸದೆಮೆಯಿಕ್ಕಿ ದೃಷ್ಟಿಯುದ್ಧದೊಳ್ ಸೋಲೆ ಮತ್ತಮಿರ್ವರುಂ ಬಂದು

ಕರಿಯೂಥಪತಿಗಳೆರಡುಂ
ಸರಸೀಜಳಮಂ ವಿಳಾಸದಿಂ ಪುಗುವವೊಲಾ
ದರದಿಂದೆ ಪೊಕ್ಕು ತುಳ್ಕಿದ
ರರವಿಂದರಜಃಪಿಶಂಗಿತಾಚ್ಛೋದಕಮಂ ೧೦

ಭರತನ ಮುಖದೊಳ್ ಪರ್ವಿದ
ಖರಕೋಪಾನಳನನೆಯ್ದೆ ನಂದಿಸುವವೊಲಾ
ಮರಕತವರ್ಣ ಕರಿಕರ
ಪರಿಘದಿನೊಡನೊಡನೆ ತುಳ್ಕಿದಂ ತಿಳಿನೀರಂ ೧೧

ಭರದಿಂದಂ ತುಳ್ಕಿದನೀ
ರುರದೊಳ್ ಹಾರಾಂಶುರುಚಿಯನಿರ್ಕುಳಿಗೊಳೆ ದು
ರ್ಧರ ಜಳಯುದ್ಧಮುಮಾದಮೆ
ಪರಿಭವಮಂ ಚಕ್ರವರ್ತಿಗಿತ್ತತ್ತಾಗಳ್ ೧೨

ವ|| ಅಂತು ಸೋಲ್ವುದುಂ ಕುಮಾರಂಗೆ ಘೋಷಿಸುವ ಜಯಘೋಷಣೆಯಂ ಕೇಳಲಾಱದೆ ಮಲ್ಲಯುದ್ಧದೊಳ್

ಮರಕತಮಣಿಶೈಲಮನನು
ಕರಿಸುವ ಭುಜಬಲಿಯೊಳಿರದೆ ಪೊಣರ್ವುದುಮಾಗಳ್
ಸುರವಿದ್ಯಾಧರನರಬಲ
ಮೆರಡುಂ ದೆಸೆಯೊಳ್ ತೆರಳ್ದು ನೋಡುತ್ತಿರ್ತ್ತುಂ ೧೩

ಕರಣಂಗಳ ಗಾಯಂಗಳ
ಪರಿಣತೆಯಂ ಮೆಱೆದು ಪೊಣರ್ದು ಸಂದೊಂದೆಡೆಯೊಳ್
ಭರತನನವಯವದೊಳೆ ಮಣಿ
ಕಿರೀಟರುಚಿ ಬೆಳಗೆ ದೆಸೆಗೆ ಬೀಸಿದನಾಗಳ್ ೧೪

ಕನಕಾಚಳಮಂ ಪೊತ್ತುದು
ಘನಮರಕತಶೈಲಮೆನಿಸಿ ಭುಜಬಲ ಸಕಳಾ
ವನಿತಳವಲ್ಲಭನಂ ಭೋಂ
ಕನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ ೧೫

ಭರತಾವನೀಶ್ವರಂ ಗುರು
ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
ದೊರೆಯನುಮಳವಱಿಯೆ ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ ೧೬

ಎಂದೊಯ್ಯನಿಱಿಪೆ ನೆಲದೊಳ್
ದುಂದುಭಿರವದೊಡನೆ ವಿಜಯಘೋಷಣೆ ನೆಗೞ್ದ
ತ್ತಂದು ಭುಜಬಲಿಯ ಬಲದೊಳ್
ಕುಂದು ಕರಂ ಪಿರಿದುಮಾಯ್ತು ಭರತನ ಬಲದೊಳ್ ೧೭

ನೆರೆದೆರಡುಂ ಬಲದರಸುಗ
ಳಿರೆ ಪರಿಭವಮಂತು ತನಗೆ ಬರೆ ಮುಳಿಸಿನ ದ
ಳ್ಳುರಿಗಳನುಗುೞುತ್ತುಂ ಚ
ಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ ೧೮

ಬೆಸಸಿದೊಡದು ಮಾರ್ಕೊಳ್ಳದೆ
ಬೆಸನಂ ಬಲವಂದು ಬಾಹುಬಲಿಯನಣಂ ಭೇ
ದಿಸಲಾಱದುದಱಿನಿರ್ದುದು
ಮಸುಳ್ದಿಸಕಂಗೆಟ್ಟು ಬಲದ ಮುಯ್ಪಿನಕೆಲದೊಳ್ ೧೯

ಧರೆಯುಂ ಪರ್ವಿರ್ದುದೀ ಬಾಹುಬಲಿನೃಪಯಶೋದುಂದುಭಿಧ್ವಾನವೆಂಬಂ
ತಿರೆ ದೇವಾನೀಕನೀದುಂದುಭಿರವಮಮರೀವೃಂದಮಾಂಗಲ್ಯಗೇಯ
ಸ್ವರದೊಳ್ ಕೈಗೂಡಿ ಪೊಣ್ಮುತ್ತಿರೆ ಮುದಿತ ಸುರಾನಂದ ಬಾಷ್ಪೋದ
ಬಿಂದೂ
ತ್ಕರಮೆಂಬಂತಾಗೆ ತಂದತ್ತರಲ ಮಳೆಗಳಂ ಪುಷ್ಪಮೇಘಪ್ರತಾನಂ ೨೦

ತನಗಲ್ಲದುದಂ ಮಾಡಿದ
ನಿನಿತಂ ಚಕ್ರೇಶನೆಂಬ ಕುಲವೃದ್ಧರ ಭೂ
ವನಿತಾಧೀಶರ ನುಡಿಗ
ಳ್ಗೆ ನಾಣ್ಚಿದಂ ಭರತರಾಜನವನತಮುಕುಟಂ ೨೧

ಬಾಹುಬಲಿ ತನ್ನ ದಕ್ಷಿಣ
ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್
ಸಾಹಸರಸಿಕಂ ಕಂಡೀ
ಸಾಹಸಮಂ ನೆಗೞ್ದನೆನ್ನೊಳಂ ಭರತೇಶಂ ೨೨

ಕಳೆದಿಡುವುದೆ ಕಷ್ಟಂ ಭೂ
ತಳರಾಜ್ಯವಿಮೋಹಮಚಿರರುಚಿಸಂಚಳಮಿಂ
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಖಳಮಹೀಶರುೞಿದವರಳವೇ ೨೩

ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೊಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್ ೨೪

ಪಾತಕಿಯೊಳ್ ಲಕ್ಷ್ಮಿಯೊಳತಿ
ಕಾತರ ಕಾಪುರುಷಗಣನೆಯೊಳ್ ನೆರೆಯಲ್ಕಿಂ
ತೀತನೆ ಬಗೆಗಾಂ ಪುರುತನು
ಜಾತರ ಬಗೆದುದನೆ ಬಗೆವೆನಳಿಪಂ ಬಗೆಯಿಂ ೨೫

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬೞಿಕೆಯ್ದೆ ಮುಳಿದು ಕೊಂದಿಕ್ಕುವುವಿಂ
ತೆನೆಯೆನೆ ವಿಷಯ ಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ ೨೬

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೈಯುಗಿದಪುದೀ
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತ ಸುರಸಮುದಯಮಂ ೨೭

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುೞಿ ಮುಳಿಸಂ ನೀ
ನೆಂದಿಂಗಂ ಬಿಸುಡೀ ತ
ನ್ಮೊಂದಿರೊಳಿಂತಿಂತು ಕಟ್ಟುವರ್ಪುದು ಪೆಂಪೇ ೨೮

ನಿನ್ನೀ ಬೆಸಸಿದ ಚಕ್ರಮ
ಪೆನ್ನೀ ದೇಹಾದ್ರಿಯಂ ಗೆಲಲ್ ನೆಱೆಯದು ನೀಂ
ಬಿನ್ನ ನಿದೇಕಿರ್ಪೆಯದೆಂ
ತೆನ್ನಗೆಲಲ್ ವಜ್ರಗಿರಿಯೆನಾರ್ಕುಮೆ ವಜ್ರಂ ೨೯

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮಿ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗೞ್ತೆ ಮಾಸದೇ ೩೦

ಅವಧರಿಸದೆ ನಿನ್ನೊಳ್ಪಿರಿ
ದವಿನಯಮಂ ನೆಗೞ್ದ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ವಗೆ ಮಱೆವುದೆನ್ನ ದುರ್ವಿಳಸನಮಂ ೩೧

ವ|| ಎಂದು ಬಾಹುಬಲಿಕುಮಾರಂ ತಪಶ್ಚರಣ ನಿಶ್ಚಲನಿಶ್ಚಯಮನನಾದಾಗಳ್–

ಮನದೊಳ್ ಮುಂ ಪುದಿದಿರ್ದ ಕೋಪಮನಿತುಂ ತೂಳ್ದಾಗಳೆತ್ತೆತ್ತಗೆ
ಯ್ದೆನಿದಂ ತಮ್ಮನೊಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ವನೈ
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾನದಾರ್ಗೆ ಮೆಱೆವೆಂ ಮತ್ರಾಜ್ಯ
ಸಾಮ್ರಾಜ್ಯಮಂ ೩೨

ವ|| ಎಂದು,

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ

ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜರಾಜ್ಯಾಭಿಷವೋತ್ಸವಂ ನೆಗಟ್ದುದೆಂಬಾಶಂಕೆಯಂ ಮಾಡಿದಂ ೩೩

ವ|| ಅಂತು ಭರತೇಶ್ವರನಂ ಬಾಹುಬಲಿಕುಮಾರನೆಂತಾನುಮೊಡಂಬಡಿಸಿ ಮಹಾಬಲಿಯೆಂಬ ನಿಜತನೂಜನನಾತ್ಮೀಯ ಪದವಿಯೊಳ್ ನಿಱಿಸಿ—

ಕ್ಷಿತಿತಳದೊಳ್ ನೆಗಟ್ದಿರ್ದ
ಪ್ರತಿಮಲ್ಲನನಿಕ್ಕಿ ಮುಯ್ವನಣಮಾನದೆ ದ
ರ್ಪಿತ ದುರಿತಮಲ್ಲನುಮನುಡಿ
ವ ತಕ್ಕಿನಿಂ ಸಭೆಗೆ ನಡೆದನಿಂದ್ರಾರ್ಚಿತನಾ ೩೪

ಮಂದಾರವರ್ಷನವಮಕ
ರಂದ ರಜೋಗಂಧಬಂಧು ವಿವಿಧ ಪತಾಕಾ
ಸಂದೋಹಾಂದೋಲನಪಟು
ಬಂದಾಱಿಸಿದತ್ತು ಸಮವಸರಣ ಸಮೀರಂ ೩೫

ವ|| ಅಂತು ಬಂದು ಭಗವತ್ಪಾದ ಪೀಠೋಪಕಂಠದೊಳ್ ಸರ್ವಾಂಗೋಪನತನಾಗಿನಿಂದಾಗಳ್,

ಪುರುಪರಮೇಶ್ವರ ಮುಖಚಂ
ದ್ರರಶ್ಮಿಯಿಂ ಚೋದ್ಯಮಿನ್ನವಿಲ್ಲೆಂಬಿನೆಗಂ
ಕರವದನಹೃದಯಕಮಳದೊ
ಳೆರಡಲರ್ದುವದೊಂದು ಮುಗಿದುದಾ ಭುಜಬಲಿಯಾ ೩೬

ಮೊದಲೊಳ್ ದೇವರ ದಯೆಗೆ
ಯ್ದುದಲ್ತೆ ಯುವರಾಜಪದವಿಯೆನಗೀಗಳುಮ
ಭ್ಯುದಯಕರ ಪ್ರವ್ರಜ್ಯದ
ಪದವಿಯ ಯುವರಾಜಪದವಿಯಂ ದಯೆಗೆಯ್ಯಿಂ ೩೭

ವ|| [ಎಂದು] ಜೈನದೀಕ್ಷೆಯಂ ಕೈಕೊಂಡು ಗುರುವಿನನುಮತದಿಂ ಏಕ ವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ನಿಲೆ—

ಅಡಿವಿಡಿದಿಟ್ಟ ಪುತ್ತುಗಳ ನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗ
ಳ್ಪಿಡಿದು ವಿಷೋರಗಪ್ರತತಿ ನೋಟ್ಪೊಡಗುರ್ವಿಸೆ ಸುಯ್ವಸುಯ್ಗಳಿಂ

ಕಿಡಿಪೊಱಪೊಣ್ಮೆ ಬಾಹುಬಲಿಯೋಗಿಯ ಘೋರತಪೋ ಮಹಾಗ್ನಿಯಿಂ
ಸುಡೆ ಸುಟ್ಟಿದುಣ್ಮುತಿರ್ಪ ಕಿಡಿಗಳ್ಗೆಣೆಯಾದುವು ತತ್ಪ್ರದೇಶದೊಳ್ ೩೮

ಬಳೆದ ಜಡೆ ನಿಮಿರ್ದ ಬಳ್ಳಿಗ
ಳೊಳೆ ಪೆಣೆದು ವಿಷೋರಗಾನನಾನಳನಿಂದಂ
ಮಿಳಿರ್ದುವು ಮುನಿಪಧ್ಯಾನಾ
ನಳನಿರ್ಯದ್ಧೂಮವೇಣಿಕಾ ನಿಕರದವೊಲ್ ೩೯

ವ|| ಅಂತುಗ್ರೋಗ್ರತಪದೊಳಮಾ ಬಾಹುಬಲಿ ಮುನೀಂದ್ರಂಗೆ ಕೇವಲ ಜ್ಞಾನಾ
ವಾಪ್ತಿಯಾಗಮುದರ್ಕೆ ಭರತೇಶ್ವರಂ ವಿಸ್ಮಯಮುತ್ತು ಪೋಗಿ ವೃಷಭ
ನಾಥನಂ ಬೆಸಗೊಳೆ ತಪದೊಳ್‌ನಿಂದುಂ ನಿನ್ನ ನೆಲದೊಳ್ ನಿಂದೆವೆಂಬ
ಮಾನಕಷಾಯಮುವರ್ಗಿನ್ನುಂ ಪತ್ತುವಿಟ್ಟುದಲ್ತುದಱಿಂ ಕೇವಲಜ್ಞಾನೋತ್ಪ
ತ್ತಿಯಾಗದಿರ್ದುದು. ನೀಂ ಪೋಗಿ ಕಾಲ್ಗೆಱಗಲೊಡಂ ಚರಣಾಂಭೋಜ
ದೊಳ್ ಬಂದೆಱಗಿ ವಿವಿಧಾರ್ಚನೆಗಳಿಂದ ಮರ್ಚಿಸಿ—

ನಿನ್ನ ಮಡಗೂಱ್ ನೆಲಂ ಮಾ
ನೋನ್ನತ ನೀನೀಯೆ ಬಂದುದೆನಗಿದನೆನತೆಂ
ದೇನ್ನಿನಗೆ ಬಗೆಯುಲಪ್ಪುದೆ
ನಿನ್ನನೆ ನೀಂ ಬಗೆಯು ಬಗೆಯದಿರ್ ಪೆಱಪೆಱತಂ ೪೦

ಎನಲೊಡಮಂತಃಕರಣದೊ
ಳಿನಿಸಾನುಂ ನಿಂದುದೊಂದು ಮಾನಕಷಾಯಂ
ಮುನಿಪತಿಗೆ ಪೋಗೆ ಪುಟ್ಟಿದು
ದನಂತವಸ್ತುಪ್ರಕಾಶಿ ಕೇವಲಬೋಧಂ ೪೧

ಆಗಳ್ ದೊರೆಕೊಂಡಿರೆ ದೇ
ವಾಗಮಮೇಕಾತಪತ್ರಮೆಸೆದಿರೆ ಕರಮಿಂ
ಬಾಗಿರೆ ಚಾಮರಯುಗ್ಮಮ
ದಾಗಳುಮಿರೆ ದಿವ್ಯವಿಷ್ಟರಂ ಮಣಿಖಚಿತಂ ೪೨

ಜಯ ನಿನದಂ ಸುರದುಂದುಭಿ
ಚಯನಿನದಂ ಪುಷ್ಪವರ್ಷಮೊರ್ಮೆಯೆ ಸಕಲೋ
ರ್ವಿಯನೆಯ್ದೆ ಪರ್ವುತಿರೆ ಚಿ
ತ್ರಿಯ ಸರಿಯಂತೆಱಗಿ ಪೋದುದಮರ ಸಮಾಜಂ ೪೩

ವ|| ಅಂತು ಬಾಹುಬಲಿ ಕೇವಳಿಯುಂ ಕೈಲಾಸಶೈಲದೊಳಾದಿ ದೇವರ ಸನ್ನಿಧಿಯೊಳಿರ್ದಂ. [ಇತ್ತ] ಭರತೇಶ್ವರನುಮಾಮುನೀಶ್ವರನಂ ಪೂಜಿಸಿ

ಪೆಸರ್ಗಂ ತೇಜಕ್ಕಮೊಂದೋಜೆಗಮಹಿತ ಮಹೀಪಾಳಕರ್ ಬೆಚ್ಚೆ ಬಾಯ್ಕೀ
ಳಿಸಿ ಹೈಮಕ್ಷ್ಮಾಧರೇಂದ್ರಂ ಬರೆಗಮಖಿಲಷಟ್ಖಂಡ ಭೂಭಾಗಮಂ ಷ
ಷ್ಟಿ ಸಹಸ್ರಾಬ್ದಂಗಳಿಂ ದಿಗ್ವಿಜಯದೊಳೊಗೆದಾನಂದ ಭೇರೀರವಂ ಘೂ
ರ್ಣಿಸೆ ಸಾಕೇತಕ್ಕೆ ವಂದಂ ಸುಕವಿಜನಮನೋಮಾನಸೋತ್ತಂಸ
ಹಂಸಂ ೪೪

ಸಾಹಸಭೀಮ ವಿಜಯಂ

(ಗದಾಯುದ್ಧಂ)

೧ ಪೀಠಿಕೆ

ಶ್ರೀಯುವತೀಪ್ರಿಯಂ ಬಲಯುತಂ ಬಲಿದರ್ಪಹರಂ ಜಿತಾರಿದೈ
ತೇಯನನಂತ ಭೋಗನಿಲಯಂ ಪ್ರತಿಪಾಲಿತ ಧರ್ಮಚಕ್ರನ
ಜ್ಜಾಯತನೇತ್ರನಾದಿಪುರುಷಂ ಪುರುಷೋತ್ತಮನೀಚಳುಕ್ಯನಾ
ರಾಯಣ ದೇವನೀಗೆಮಗೆ ಮಂಗಳಕಾರಣಮುತ್ಸವಂಗಳಂ ೧

ಕೃತಿ ನೆಗಟ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ
ಕೃತಿಯಂ ವಿರಚಿಸಿದನಲಂ
ಕೃತಿಯಂ ಕವಿರತ್ನನೆಂದೊಡೇವಣ್ಣಿಪುದೋ ೨

ಆರಾತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ ೩

ರತ್ನ ಪರೀಕ್ಷಕನಾಂ ಕೃತಿ
ರತ್ನ ಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇೞ್ ಪರೀಕ್ಷಿಸಂಗೆಂಟೆರ್ದೆಯೇ ೪

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂ
ತೊಳಕೊಂಡತ್ತೆನೆ ಸಿಂಹಾ
ವಳೋಕನಕ್ರಮದಿನಱಿಪಿದಂ ಕವಿರನ್ನಂ ೫

೨

ದುರ್ಯೋಧನನ ಕೆಚ್ಚು

ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ

ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ ೧

ವ|| ಅಂತು ಬೆಮರ್ತುಮ್ಮಳಿಸಿ ಸ್ಥೈರಿಸಲಾಱದೆ ಜಲಮಂತ್ರಮನೇನುಮಂ ಬಗೆಯದೆ ಕೋಪೋದ್ರೇಕಮನೆ ಬಗೆದು—

ಸಲಿಲಸ್ತಂಭನ ವಿದ್ಯಾ
ಬಲಮನಪೇಕ್ಷಿಸಿದನೆನ್ನದುರಗಪತಾಕಂ
ಬಲಹಾನಿಯಾಗೆ ಕೊಳದೊಳ್
ಮುಳುಗಿರ್ದಪನೆಂದು ನಗರೆ ಕೂರದರೆನ್ನಂ ೨

ಶಲ್ಯಂ ಸತ್ತಿಂ ಬಱಿಯುಮ
ಖಲ್ಯಂ ಕೊಳದೊಳಗೆ ಪೊಕ್ಕು ಮೆಯ್ಗರೆದಯ್ ಚಿಃ
ಖಲ್ಯನೆನೆ ಬಾರ್ತೆಗೆಟ್ಟುದ
ಮೂಲ್ಯ ಯಶೋರತ್ನಮೆಂಬುದಂ ಮಾಸುವೆನೇ ೩

ತೃಣವಲ್ಲಘು ಜೀವಿತರ
ಕ್ಷಣಾರ್ಧದಿಂ ಕುಲದ ಚಾಗಮನಾಂತುಂ
ಗುಣಹಾನಿಯಾಗಿ ಪುರುಷರ
ಗಣನೆಗೆ ವಂದೆನ್ನನಾನೆ ಲಘುಮಾಡುವೆನೇ ೪

ಮುನಿವಂ ಮೂದಲಿಸಿಯುಮಿ
ನ್ನೆನಿತುಂ ಪೊಕ್ಕಿರ್ಪೆನೆಂದು ಚಿತ್ತಕ್ಷೋಭಂ
ತನಗಾಗೆ ಜಲಚರಕ್ಷೋ
ಭನಿನಾದಂ ಪೊಕ್ಕು ಪೊಣ್ಮೆ ವಿಭುವಕ್ಷೋಭಂ ೫

ವ|| ಆಗಳಾ ಜಲಸ್ತಂಭ ಮಂತ್ರಮೆಲ್ಲಮವಿನೀತನಪ್ಪ ರಾಜಪುತ್ರನೊಳಾಳೋಚಿಸಿದ ಮಂತ್ರದಂತೆ ಪರಿಣಾಮ ರಮಣೀಯಮಾಗದೆ ಕಿಡೆಯುಮಹಂಕಾರಂಗಿಡದೆ—

ನಿಜಮಕುಟಸ್ಫುರನ್ಮಣಿಗಣಚ್ಛವಿಯಿಂ ಸುರಚಾಪಲೀಲೆ ಪಂ
ಕಜವನದೊಳ್ ಮನಂಗೊಳಿಸೆ ತನ್ನಯ ಮೇಗೊಗೆದಿರ್ದನೀಲನೀ
ರಜವನದಿಂ ಕಱಂಗಿ ಕಮಲಾಕರದಿಂ ಪೊರಮಟ್ಟನಾಗಳಾ
ಭುಜಯುಗತೋರಣಾಯಿತಗದಾಪರಿಘಂ ಫಣಿರಾಜಕೇತನಂ ೬

ರಸೆಯಿಂ ಕಾಲಾಗ್ನಿರುದ್ರಂ ಪೊರಮಡುವವೊಲಂತಾ ಸರೋಮಧ್ಯದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊರಮಟ್ಟಿಲ್ಲಿದಂ ಭೀಮನೆಂದೆ
ಣ್ದೆಸೆಯಂ ನೋಡುತ್ತೆ ಮತ್ತದ್ಭುತನಟನಿಟಿಲಾಲೋಲಕೀಲಾಕ್ಷಿವೊಲ್ದ
ಳ್ಳೆಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ ೭

ವ|| ಅಂತಿರ್ದ ದಂದಶೂಕ ಪತಾಕನ ಸೆರಗಿಲ್ಲದ ಮೆಯ್ಗಲಿತನಕ್ಕೆ ಮೆಚ್ಚಿ ತಲೆಯಂ ತೂಗಿ ನಿಜಭುಜಪ್ರತಾಪನಿರ್ಜಿತ ನಿಖಿಲ ಭೀಮಸೇನಂ ಭೀಮಸೇನಂ ಕೌರವನಿದಿರ್ಗೆವಂದು—

ನಿನ್ನನುಜನರುಣಜಲಮಂ
ಮುನ್ನಂ ತವೆ ಪೀರ್ದೊಡಂಜಿ ನೀಂ ಪುಗೆ ಕೊಳನಂ
ಬೆನ್ನನೆ ಬಂದಾತಂ ಶೌ
ರ್ಯೋನ್ನತನೀಯಿರ್ದನಲ್ತೆ ಸಾಹಸಭೀಮಂ ೮

ವ|| ಎಂದು ನೆಱನನುಂಟುಮಾಡಿ ಮೂದಲಿಸಿ ನುಡಿಯೆ ದುರ್ಯೋಧನನತಿಕ್ರೋಧಾನಲನಾಗಿ

ಯಮರಾಜ ಪ್ರಿಯಸೂನುಗಂ ನಿನಗಮಾ ಗಾಂಡೀವಧನ್ವಂಗಮಾ
ಯಮಳರ್ಗಂ ಪ್ರಿಯೆಯಪ್ಪ ಕೃಷ್ಣೆಯ ಕಚಪ್ರಾರಂಭಮಂ ಬಾಹುವಿ
ಕ್ರಮಿ ದುಶ್ಶಾಸನ ನಿನ್ನ ಮುಂದೆ ತೆಗೆವಂದೆಲ್ಲಿರ್ದೆಯಿ ಗಂಡಗ
ರ್ವಮುಮಂದೆಲ್ಲಿಗೆ ಪೋಯ್ತು ಷಂಡ ನಿನಗಿಂತೀಗಂಡನಾರ್ ಮಾಡಿದರ್ ೯

ಅನಿಲಾತ್ಮಜ ನಿಮ್ಮಯ್ವರ
ವನಿತೆಯನೊರ್ವಳನೆ ತಂದನಲ್ಲಿಂ ದುಶ್ಶಾ
ಸನನೆಟಿದು ತಂದನಖಿಳಾ
ವನಿಯುಮನಂದೆನಗೆ ಕೀರ್ತಿಯಂ ಲಕ್ಷ್ಮಿಯುಮಂ ೧೦

ಅಸುರಂ ವಸುಧಾತಳಮಂ
ರಸಾತಳಕ್ಕುಯ್ಯೆ ಹರಿ ತರಲ್ ಪೊಕ್ಕವೊಲೀ
ವಸುಮತಿಯನೆತ್ತೆ ನಿನ್ನಯ
ದೆಸೆಯಿಂ ತರೆ ಪೊಕ್ಕೆನಂಜಿ ಪೊಕ್ಕೆನೆ ಕೊಳನಂ ೧೧

ಎಸರನಿಡುವಕ್ಕಿಗರ್ಚುವ
ಬೆಸನಂ ಕಯ್ಗಱಿವ ಕಂಚುಗರ್ಚುವ ಬೆಸನಂ
ಬೆಸನಲ್ಲದೆ ಮತ್ಸ್ಯನ ಬಾ
ಣಸಿಗಂಗಾರಿತ್ತರೆಲವೊ ನಿನಗೀ ಬೆಸನಂ ೧೨

ವ|| ಎಂದು ಮುಟ್ಟಿ ಮೂದಲಿಸಿ ನುಡಿಯೆ ಭೀಮಸೇನಂ ಮುಗುಳ್ನಗೆನಕ್ಕು—

ಪಿರಿಯಣ್ಣನ ನನ್ನಿಯನಾ
ದರದಿಂ ಕಾಯಲ್ಕೆ ಪೆಱರ್ಗೆ ಬಾಣಸುಗೆಯ್ದೆಂ
ಕುರುವಂಶಜ ಕೇಳ್ ನಿನ್ನೀ
ಶರೀರಮಾಂಸದೊಳೆ ಮರುಳ್ಗೆ ಬಾಣಸುಗೆಯ್ವೆಂ ೧೩

ನೆನೆ ಚಿತ್ರಾಂಗದನಿಂದಮಂದು ನಿನಗಾದಾಪತ್ತನಾ ಬನ್ನಮಂ
ನೆನೆ ನೀಂ ಗೋಗ್ರಹಣ ಪ್ರಪಂಚದೊಳೆ ಮೆಯ್ವೆತ್ತಿರ್ದುದಂ ನಿನ್ನತ
ಮ್ಮನ ಕೆನ್ನೆತರನೀಂಟುವಲ್ಲಿ ಭಯದಿಂದಳ್ಕುತ್ತೆ ಬೆನ್ನಿತ್ತುದಂ
ನೆನೆ ಪಿಂತಿಕ್ಕಿದ ನಿನ್ನ ಮುನ್ನಿನ ಕವಲ್ಬನ್ನಂಗಳಂ ಕೌರವಾ ೧೪

ಜತು ಗೇಹಾನಲದಾಹದಿಂ ವಿಷವಿಶೇಷಾಲಿಪ್ತಗುಪ್ತಾನ್ನದಿಂ
ಕೃತಕದ್ಯೂತ ವಿನೋದದಿಂ ದ್ರುಪದಜಾಕೇಶಾಂಬರಾಕೃಷ್ಟಿಯಿ
ಧೃತರಾಷ್ಟ್ರಾತ್ಮಜ ಪಾಂಡುರಾಜಸುತರಂ ಮುನ್ನಂ ಕೊಲಲ್ ಕೋಱಿದಯ್
ಗತಕಾಲಂ ಲಯಕಾಲಮಾಯ್ತು ನಿನಗಿನ್ನಾಯ್ತಂತ್ಯಕಾಲಂ ಗಡಾ ೧೫

ವ|| ಎಂದುರಗಧ್ವಜನಂ ಮರ್ಮೋದ್ಘಾಟನಂಗೆಯ್ದು ಮೂದಲಿಸಿದನಿತಱೊಳೆ ನಿಂದುರಗಧ್ವಜಂ ಮುನಿದನಿಬರ ಮೊಗಮಂ ನೋಡಿ—

ಇರಲಿಂತೀ ಮಾದ್ರಿಪುತ್ರರ್ ಬಡವುಗಳವರೇಗೆಯ್ವರಿಂ ಧರ್ಮಪುತ್ರಂ
ಬೆರಸೀಗಳ್ ಬರ್ಕೆಭೀಮಂ ಹರಿಸುತನೊಡನೀ ಮೂವರುಂ ಬರ್ಕೆ ಮೇಣಾ
ಯ್ವರುಮಿಂ ಬರ್ಕೆ ಕೃತಾಂತಾತ್ಮಜಪವನಜ ಗಾಡೀವಧನ್ವರ್ಕಳೀ ಮೂ
ವರೊಳೊರ್ವಂ ಕೃಷ್ಣಂ ಬರ್ಕೆ ಪೊಣರಲನಿಬರುಂ ಬರ್ಕೆ ಮೇಣ್
ಬನ್ನಮಿಾವೆಂ ೧೬

ವ|| ಎಂದುರಗಧ್ವಜಂ ಗರುಡಧ್ವಜನಂ ಸಂಬೋಧಿಸಿ ನುಡಿಯೆ—

ವನರುಹನಾಭಂ ದುರ್ಯೋ
ಧನನೆಂದೊಡೆ ಕೇಳ್ದು ಭೀಮಸೇನನ ಜಡಿದಂ
ವಿನಯಮನೆ ಮೆರೆವ ದುರ್ಯೋ
ಧನನಂ ನೀನೆನ್ನ ಮುಂದೆ ನುಡಿವುದೆ ಭೀಮಾ ೧೭

ವ|| ಎನೆ ಧರ್ಮನಂದನಂ ಧೃತರಾಷ್ಟ್ರನಂದನಂ ಮುನ್ನೆ ಗೆಯ್ದ ಅಧರ್ಮಮಂ ನೆನೆಯದೆ ನಿರ್ಮಲಕ್ಷತ್ರಧರ್ಮಮನೆ ನೆನೆದು—

ಆಗದು ಸಮರಂ ಗುಣಯುತ
ನಾಗು ಮಹಾಭೋಗಿಯಾಗು ನಿನ್ನಾಳ್ವಮಹೀ
ಭಾಗಮುಮಂ ಸಕಲ ಮಹೀ
ಭಾಗಮುಮಂ ನೀನೆ ಕೊಂಡು ಸುಖಮಿರಲಾಗಾ ೧೮

ಧರಣೀಚಕ್ರಮನೊಪ್ಪುಗೊಳ್ ಬಗೆಯದಿರ್ ವಿದ್ವೇಷಮಂ ನಮ್ಮನ
ಯ್ವರನಿನ್ನಾಳ್ವಿಸಕೆಯ್ಸಿಕೊಳ್ ನೆನೆಯದಿರ್ ಕಿಚ್ಚೊಕ್ಕಿನೊಳ್ ತೊಟ್ಟುಕೊ
ಳಿರದೆಮ್ಮೊಂದುದ ನಿಂಬುಕೆಯ್ ಮನದೊಳೊಳ್ಪಿಂ ಶಾಂತಿ ವಿಶ್ರಾಂತಿ ಸೋ
ದರನೆಂಬಂತುಪಶಾಂತಿಯಂ ಕುರುಕುಲಕ್ಷ್ಮಾಪಾಲ ಚೂಡಾಮಣೀ ೧೯

ಶ್ರೀ ಜಗನ್ನಾಥವಿಜಯ

ರುಕ್ಮಿಣೀಕಲ್ಯಾಣ

ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿಕ್ಷೇಪ ವ
ಕ್ಷೋರಂಗಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದು ಭೂ
ಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ೧

ಜನನುತರಾಜಹಂಸನಯನಂ ಕಮಳಾವಸಥಂ ಕಳಾನಿಕೇ
ತನನೆನಿಸಿರ್ದ ಪೆಂಪುಱಮೆವೆತ್ತೊಡಮೇನೊ ಹಿರಣ್ಯಗರ್ಭನೆಂ
ದೆನಿಸಿಯುಮುದಾರನೆಂಬ ರಜವೊಂದದ ಸತ್ವನಿಧಾನನೆಂಬ ಪೆಂ
ಪನುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ ೨

ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜ ಪ್ರತಿಷ್ಠಾ
ನಿರತಂ ಲೀಲಾಕ್ರಮೋದಂಚಿತ ನಿರವಧಿಗಾಂಗೇಯಕಂ ದ್ವಿಟ್ಪುರಧ್ವಂ
ಸರತಕ್ರೋಧಂ ವೃಷಾಂಕಂ ವಿಬುಧನುತನುಮಾಕಾಮಿನೀ ಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗ ತ್ರಿಣೇತ್ರಂ ೩

ಸ್ತುತಿಗೆಯ್ವೆಂ ಕೃತಪಂಚಮಶ್ರುತಿ ಪುರಾಣವ್ಯಾಸನಂ ವ್ಯಾಸನಂ
ಕೃತಿಲೋಕ ಶ್ರುತಿ ಪೂರಕಲ್ಪಕವಿತಾಗೀರ್ಬಾಣನಂ ಬಾಣನಂ
ಚತುರೋಕ್ತಿ ಪ್ರಚುರಾರ್ಥ ಕಾವ್ಯಜನಿತೋರ್ವಿಹರ್ಷನಂ ಹರ್ಷನಂ
ಶತ ಪತ್ರಾಕ್ಷ ಕಥಾಮೃತಚ್ಯುತಬುಧಸ್ತೋಮಾಘನಂ ಮಾಘನಂ ೪

ಉತ್ಸವ ಕರಮೆನೆ ಬೆಳಿಪ ಶ
ರತ್ಸಮಯದೊಳಿಂದುಕಾಂತಿ ದಳವೇಱುವವೋಲ್
ವತ್ಸಳರೆನಿಸುವ ಬುಧರಿನ
ಮತ್ಸರರಿಂ ಕತ್ರಿ ಕೃತಾರ್ಥಮಕ್ಕುಮಮೋಘಂ ೫

ಕಥೆ ವಿಷ್ಣುಪುರಾಣಂ ಸ
ತ್ಕೃತಿ ವೇಟ್ದಿಂ ಸುಕವಿರುದ್ರನೀ ಕೃತಿಗೆ ಕಥಾ
ಪತಿ ಕೃಷ್ಣಂ ಕೃತಿಯುಂ ಭೂ
ನುತಮೆ ಜಗನ್ನಾಥವಿಜಯಮೆನೆ ಮೆಚ್ಚದರಾರ್ ೬

ಶ್ರೀಪಾದ ಕಲ್ಪಪಾದಪ
ಮಾಪನ್ನಾಶ್ರಿತ ಸುಖಪ್ರದಂ ಭುಜಭುಜಗಂ
ವೈಪಕ್ಷ ಜೀವ ಪವಮಾ
ನಾಪಹಮೆನೆ ಕೃಷ್ಣನಿರ್ದನಾ ದ್ವಾರಕೆಯೊಳ್ ೭

ವ|| ತದನಂತರಂ—

ದೇವಜ್ಯೋತ್ಸ್ನನ ಬೆಸದಿಂ
ರೈವತಕಂ ತಂದು ತನ್ನ ಮಗಳಂ ಕುಡಲಾ
ರೇವತಿಯೊಳ್ ಬಲರಾಮಂ
ವೈವಾಹೋತ್ಸವದೆ ನೆರೆದು ಸುಖದಿಂದಿರ್ದಂ ೮

ವ|| ಅನಂತರಮೊಂದು ಸಮಯದೊಳ್—

ಮದಿರಾಪಾಂಗ ವಧೂವಿಳಾಸರಸತೋಯಂ ಸಂಚಲಚ್ಚಾಮರೋ
ನ್ಮದಹಂಸಂ ಪ್ರತಿಹಾರಸಾರಸರವಂ ನಾನಾಮಹೀಪಾಲಮೌ
ಳಿದಳತ್ಕೋಕನದಂ ಸಭಾಂಬುರುಹಷಂಡಂ ರುಕ್ಮಿಣೀಲಕ್ಷ್ಮಿಗಾ
ಸ್ಪದಮಪ್ಪಂತೆವೊಲೊಪ್ಪುವೋಲಗದೊಳಿರ್ದಂ ಯಾದವಾಧೀಶ್ವರಂ ೯

ವ|| ಆಗಳ್—

ಬಿಸಿಲಂ ಬೆಳ್ದಿಗಂಳೊಟ್ಟೈಸಿದುದೊ ಪಗಲೊಳಂ ಚೋದ್ಯಮೆಂಬಂತುಚೆಲ್ವಾ
ಗಸದಿಂ ತಳ್ಪೊಯ್ವುದುಂ ಕಂಡಿದು ಖಚರದುಕೂಲಾಂಬರದ್ಯೋತ
ಮೋ ವ್ಯೋ
ಮಸರಿಡ್ಡಿಂಡೀರ ಪಿಂಡಪ್ರಭೆಯೊ ದಿಗಿಭದಂತಾವಳೀ ಚ್ಛಾಯೆಯೋ ಭಾ
ವಿಸಲೆಂದಾ ವೇಗದೊಳ್ ವಿಸ್ಮಯರಸವಿಸರ ಸ್ಯಂದಿಯಾದಂ ಮುಕುಂದಂ ೧೦

ಕಣ್ಣುಳ್ಕೆಯುಮಾಶ್ಚರ್ಯವಿ
ಷಣ್ಣರದೆಂತಾನುಮರೆಬರೀಕ್ಷಿಸೆ ನಭದೊಳ್
ತಿಣ್ಣಮೆನಲ್ ಪಸರಿಸಿದ-
ಕ್ಷುಣ್ಣ ಪ್ರಭೆಯೊಳಗೆ ಪೊಳೆದುದೊಂದಾಕಾರಂ ೧೧

ವ|| ಅನ್ನೆಗಂ—

ಶಾರದ ಪಾಂಡುಮೇಘಮೆ ತಟಿಲ್ಲತೆಯುಂ ಭಗಣಂಗಳಂ ಸ್ಫುರ
ತ್ತಾರಕ ರಾಜಮಂಡಲಮನಾಂತಿಟಿವಂತಿರೆ ಪೊನ್ನಮುಂಜೆ ಮು

ಕ್ತಾರುಚಿರಾಕ್ಷಮಾಲೆ ಶಶಿಕಾಂತ ಕಮಂಡಲು ತನ್ನ ಪಾಂಡುರಾ
ಕಾರದೊಳೊಪ್ಪೆ ನಾರದನದೇನಿಟಿತಂದನೊ ನೀರಬಾಧ್ವದಿಂ ೧೨

ವ|| ಅಂತು ಸೊಗಯಿಸಿ ನಭೋಂತರದಿಂ ಸಭಾಂತರಕ್ಕವತರಿಸಿದಾಗಳ್

ನೀಲೀಪಟವಂ ದೆಸೆವೆ
ಣ್ಗೋಲೈಸೆ ನಿಜಾಂಗಕಾಂತಿ ಕೌಸ್ತುಭರುಚಿ ತ
ಳ್ತಾಲಿಂಗಿಸೆ ಮುನಿಯಂ ವನ
ಮಾಲಿ ಕನತ್ಪೀತವಸನನೊಸೆದಿದಿರೆಳ್ದಂ ೧೩

ವ|| ಅಂತು ಮೃಗೇಂದ್ರ ಪೀಠದಿಂದಿದಿರೇಳ್ಪುದುಂ—

ಯದುವಂಶೋತ್ಪನ್ನನಾದಂ ಜಲಧಿಶಯನನೆಂಬೊಂದಭಿಜ್ಞಾನದಿಂ ನಾ
ರಾದನಾ ಕೃಷ್ಣಂಗೆ ಮುನ್ನಂ ಮನದೊಳಜಿಗಿದಂ ಕೃಷ್ಣನುಂ ರುದ್ರಮುದ್ರಾ
ಸ್ಪದನೆಂದಾನಮ್ರನಾದಂ ಮುನಿಗೆ ನೆಗಟ್ದುದಂತಾಮುನೀಂದ್ರಂಗಮಾಶ್ರೀ
ಸದನಂಗಂ ಮಾನಸಂ ಕಾಯಕಮೆನಿಪಸಕೃತ್ತಥ್ಯಮಿಥ್ಯೋಪಚಾರಂ ೧೪

ಪೂಜಾಸತ್ಕೃತನಾಗಿ ಸ
ರೋಜಾಸನತನಯನಿರೆ ವಿಶಿಷ್ಟಾಸನದೊಳ್
ರಾಜೀವನಯನನಿರ್ದಂ
ರಾಜಿಸೆ ನಿಜಮೂರ್ತಿ ತನ್ಮಹಾಸ್ಥಾಯಿಕೆಯೊಳ್ ೧೫

ವ|| ಅನಂತರಂ,

ಪೂರಿಸುವ ನೆವದೆ ಮುಂ ಪೀ
ದರ್ಾರುಚಿಮತ್ಪಾಂಚಜನ್ಯರಶ್ಮಿಯನತ್ಯು
ದ್ಗಾರಿಪವೊಲ್ ದಂತದ್ಯುತಿ
ರಾರಾಜಿಸೆ ಮುಖದಿನುಣ್ಮೆ ನುಡಿದಂ ಕೃಷ್ಣಂ ೧೬

ಭವದೀಯಾಗಮವಿಂದು ಯಾಗಮುಹದಂತೀಂದತ್ತು ಸ್ವೈಪಂ ತ್ವದಂ
ಘ್ರಿವನೇಜಾತ ಪರಾಗಮಾಗಿಸಿದುದುರ್ವೀರಾಗಮಂ ಯುಷ್ಮದೀ
ಯವಿಲೋಕಂ ಯದುಲೋಕಮಂ ವೃಜಿನದಿಂ ಮೆಯ್ವಿಂಗಿಸಿತ್ತೀ ಸಭಾ
ಭವನಕ್ಕಿತ್ತುದು ನಿಮ್ಮ ವಾಕ್ಸುಧೆ ಸುಧಾಶ್ರೀಯಂ ರದಜ್ಯೋತ್ಸ್ನೆಯಿಂ ೧೭

ವ|| ಎಂದು ಉಪೇಂದ್ರಂ ಮುನೀಂದ್ರಂಗೆ ನುಡಿಯೆ—

ಆ ಮುನಿಪ ವದನ ಚಂದ್ರಸು
ಧಾಮಳರುಚಿ ಮುಖದಿನುಣ್ಮಿದಪುದೆನೆ ದಶನೋ

ದ್ದಾಮ ಧವಳಾಂಶು ಪಸರಿಸೆ
ತಾಮರಸಾಕ್ಷಂಗೆ ಮುಸಿಪನಂದಿಂತೆಂದಂ ೧೮

ದರಹಾಸಜ್ಯೋತ್ಸ್ನೆಯಿಂ ದರ್ಪಕವಿಶದಯಶಂ ಕೊರ್ವೆ ಲಾವಣ್ಯದಿಂದಂ
ಸ್ಮರತೇಜಂ ಪೆರ್ಚೆ ಕಣ್ಗೊಂಡವಳ ಧವಳ ನೇತ್ರಾಂಚಲಾಲೋಕಮಾತ್ರಂ
ನೆರವಾದತ್ತಂಗಜಂಗೀ ತ್ರಿಜಗಮುಮಿದಿರಿಲ್ಲೆಂಬಿನಂ ಪೂವಿನಂಬಂ
ತಿರುವಾಯೊಳ್ಪೂಡಿ ಪುಷ್ಪಾಯುಧನಿರೆ ಕೆಲದೊಳ್ ಲೀಲೆಯಿಂ
ಬಾಲೆಯಿರ್ಪಳ್ ೧೯

ವಶವರ್ತಿ ಮಾಟ್ಕುಮಂಗಜ
ವಿಶಿಖದಿನೀಕ್ಷಿಸಿದ ವಿಟರನವಯುವದೊಳಮುಂ
ಗಶಲಾಕೆಯೊಳಂ ಪ್ರತ್ಯೇ-
ಕಶೋಭೆ ಸಮುದಾಯ ಶೋಭೆಗಳ್ ರುಕ್ಮಿಣಿಯಾ ೨೦

ವ|| ಅಂತು ಸಕಲ ಲಕ್ಷಣೋಪಲಕ್ಷಿತಾವಯವ ಸಂಪನ್ನೆಯಪ್ಪ ಕನ್ನೆಯ ರೂಪ
ಮನಾಪಾದ ಮಸ್ತಕಾಗ್ರಂಬರಂ ಪೇಟ್ದು ಮತ್ತಿಂತೆಂದಂ—

ಈಕೆಯ ರೂಪಿನ ಪರಿಯುಂ
ಕೋಕನದಜನಂದು ಕಂಡೊಡಂತಾಗೌರೀ
ಶ್ರೀಕಾಂತೆಯರಾಕೃತಿಯುಂ
ಪ್ರಾಕೃತಮೆನೆ ಮಾಡನೆನಿಸಿ ರುಕ್ಷ್ಮಿಣಿಯೆಸೆಗುಂ ೨೧

ಆ ರಮಣೀ ಶಿಖಾಮಣಿಗೆ ನೀಂ ಬಗೆ ಸೋಲ್ತೊಡವಳ್ಗೆ ಸೋಲದೀ
ನಾರಿಗೆ ಸೋಲಮುಂ ಪಡೆಯುವೇಟ್ಪುದದೆಂತೆನೆ ರುಕ್ಮಿ ಮಾಟ್ಪ ಕೈ
ವಾರದೆ ಚೈದ್ಯನಾರಮಣಿಗುಂಗುರವಿಟ್ಟು ವಿವಾಹಲಗ್ನಮುಂ
ಪಾರುತುಮಿರ್ದನಿಂ ಸೆರಗುವಾರದೆ ಚಿಂತಿಸಿದರ್ಕುಪಾಯಮುಂ ೨೨

ಅನುರಾಗಮುರ್ವಿಗುರ್ವುಗೆ
ಜನಿಯಿಸುಗಾನಂದವಮರಸಮಿತಿಗೆ ಶಿಶುಪಾ
ಲನಭೀಷ್ಟಸಿದ್ಧಿ ತೊಲಗುಗೆ
ನಿನಗಕ್ಕೆ ವಿವಾಹ ಮಂಗಳಂ ರುಕ್ಮಿಣಿಯೊಳ್ ೨೩

ವ|| ಎಂದು ಪರಸಿ ಸರಸಿಜಾಕ್ಷನನುಜ್ಞೆಯಿಂ ನಾರದಂ ನೀರದಪಥಕ್ಕೆ
ನೆಗೆವುದುಂ—

ತಾಂ ಗಡ ಕುಡುವಂ ಶಿಶುಪಾ
ಲಂಗೆ ಗಡಂ ಪೂಣ್ದು ರುಕ್ಮಿ ರುಕ್ಮಿಣಿಯಂ ಲ

ಗ್ನಂ ಗಡ ಸಮೀಪಮಾಂ ವಿಜ
ಯಾಂಗನೆವೆರಸಿಂದೆ ತಂದಪೆಂ ರುಕ್ಮಿಣಿಯಂ ೨೪

ವ|| ಎಂದು ಮನದೊಳ್ ಮಂತಣಮಿರ್ದು—

ಗೃಹರಕ್ಷೆಗೆ ಸಾತ್ಯಕಿಯಂ
ಮಹೀಧರಂ ನಿಲಿಸಿ ತಳರ್ದನಗ್ರಜಸಹಿತಂ
ಬಹಿರುದ್ಯಾನಾಲೋಕ
ಸ್ಪೃಹೆಯಿಂ ತಳರ್ವಂತು ರುಕ್ಮಿಣೀಹರಣಾರ್ಥಂ ೨೫

ವ|| ಅಂತು ತಳರ್ದು ಪರಿಣಯೋತ್ಸವೋತ್ಸುಕನಾಗಿ ಶಿಶುಪಾಲದಾನವಂ ಬಂದಿರ್ದ ಭೀಷ್ಮಕಪುರಕ್ಕಭಿಮುಖನಾಗಿ—

ಅನಿಲಜವಂ ಗರುಡಜವಂ
ಮನೋಜವಂ ಕಿಱಿದು ತನ್ನ ಜವದಿಂದೆನೆ ಕುಂ
ಡಿನಪುರದ ಬಹಿರ್ವನಮಂ
ದನುಜಾರಿವರೂಥಮೆಯ್ದೆ ವರ್ಪವಸರದೊಳ್ ೨೬

ಪೊದೆಯಿಸಿದತ್ತೊ ಚಿತ್ರಪಟದಿಂ ಪರಿನಿರ್ಮಿಸಿದತ್ತೊ ಪಂಚರ
ತ್ನದಿನಮರೇಂದ್ರಚಾಪನಿಕುರಂಬಕದಿಂ ಪಣೆದತ್ತೊ ಚಿತ್ರಮಿಂ
ತಿದು ಬಗೆಗೆಂಬಿನಂ ತಳಿರ ಪೂವಿನ ತುಂಬಿಯಕಾಯ ಪಣ್ಣ ಬ
ಣ್ಣದಿನೆಸೆದಿತ್ತು ಕೀರಪಿಕ ಹಂಸನಿನಾದ ವಿಡಂಬನಂ ಬನಂ ೨೭

ವ|| ಆ ಮನೋಹರೋದ್ಯಾನಮಂ ಪೊಕ್ಕು ಪಂಕಜಾಕ್ಷಂ ನಿರೀಕ್ಷಿಸುತುಂ ಬರ್ಪಲ್ಲಿ—

ಪಾವನವನದೊಳ್ ನಿರ್ಮಲ
ಜೀವನವನಜಾತಷಂಡ ಮಾರುತಲೀಲಾ
ಧಾವನ ವನಮಧ್ಯಮದೇಂ
ದೇವನ ವನಮಾಲೆಯಂ ತೆಱಂಬೊಳೆಯಿಸಿತೋ ೨೮

ವ|| ಆ ಪುಂಡರೀಕಷಂಡಮಂ ಪುಂಡರೀಕಲೋಚನಂ ಕಂಡು ಮನಂಗೊಂಡು—

ಸರಸಿಯೊಳಪೊಕ್ಕು ಪದನಖ
ಕಿರಿಣದಿನಿರ್ಮಡಿಸಿ ಜಲಮನಾಸ್ಯಾಂಬುಜದಿಂ
ಪರಿಮಳಮನಿತ್ತು ವಾರಿಗೆ
ಕರದೊಳ್ ಲೀಲಾಬ್ಜಮೆಸೆಯೆ ಪೊಱಮಟ್ಟಾಗಳ್ ೨೯

ಕಲಕೀರಾಲಾಪಮುಂ ಕೋಕಿಲಕಲರವಮುಂ ಭೃಂಗಝುಂಕಾರಮುಂ ಚಂ
ಚಲಕಾಂಚೀಕೂಜಿತಂ ಕಂಕಣಝುಣಝುಣಿತಂ ಸಿಂಜಿನೀಸಿಂಜಿತಂ ಮಾ
ರ್ಮಲೆಯುತ್ತುಂ ಕಂತುಸೇನಾಕಳಕಳರುತಿಯಿಂದೆತ್ತಲುದ್ಯಾನಮುಂ ತೀ
ವಲದಂ ಕೇಳ್ದಂಗನಾ ಭೂಷಣರಣಿತಮಿದೇಸೆಂದು ವಿಭ್ರಾಂತನಾದಂ ೩೦

ವ|| ಅಂತು ವಿಸ್ಮಿತಸ್ವಾಂತನಾಗಿ ವನಮಾಲಿ ತನ್ನ ಸಮೀಪದೊಳಿರ್ದ ವನ ಪಾಲನಂ ಸ್ನಿಗ್ಧಮಧುರಾಲೋಕನಾವಾಕ್ಯಂಗಳಿಂ ಸಂಭಾಷಿಸಿ ಬೞಿಯಂ ಮತ್ತಿಂತೆಂದಂ—

ವಿವಿಧಾಲಂಕೃತ ನಿಸ್ವನಂ ನೆಗೞ್ವಿನಂ ಭೃಂಗೋತ್ಕರಂ ಬೆರ್ಚಿ ಪಾ
ಱುವಿನಂ ಪುಷ್ಪಪರಾಗಮಲ್ಲುಗುವಿನಂ ಪೂದೊಂಗಲಲ್ಲಾಡಿ ತೋ
ಱುವಿನಂ ಕಣ್ಮಲರ್ವೆಳ್ಪು ಕೆಂದಳದ ಕೆಂಪೋರೊಂದನೊಟ್ಟೈಸಿ ಪೊ
ಣ್ಮುವಿನಂ ಲೀಲೆಯಿನೀ ಪ್ರದೇಶದೊಳದಾರ್ ತನ್ವಂಗಿಯರ್
ಕ್ರೀಡಿಪರ್ ೩೧

ವ|| ಎಂದು ಬೆಸಗೊಳ್ವುದುಂ ಚಕ್ರಿಗವಕ್ರಶೀಲಂ ವನಪಾಲನಿಂತೆಂದಂ ಆ ಕುಸುಮಿತ ವನಾಂತರದೊಳ್ ಕತಿಪಯ ಪರಿಚಾರಿಕಾಸಖೀಜನಂ ಬೆರಸು ಭೀಷ್ಮಕರಾಜಪುತ್ರಿ ರುಕ್ಮಿಣೀದೇವಿ ಪುಷ್ಪಾಪಚಯವಿನೋದಮುಂ ನೆಗೞು ತಿರ್ದಪಳ್. ಆ ಮಂದಗಮನೆ ಲೀಲೆಯಿಂದೀಗಳೀ ಪೂಗೊಳಕ್ಕೆ ಬರ್ಪಳೆಂದು ಬಿನ್ನವಿಸುತಿರ್ಪನ್ನೆಗಂ—

ಚಾರುಲತಾವನಾಂತರದೊಳೋರಗೆವೂಗಳನಾಯ್ದು ಕೊಯ್ದಳಂ
ಕಾರಮನಾಲತಾಂತತತಿಯಿಂ ಸಮೆದಾಂತ ಬೆಡಂಗು ಕಣ್ಗೊಳಲ್
ವಾರವಿಳಾಸಿನೀತತಿ ಲತಾವನದಿಂ ಪೊರಮಟ್ಟುದಂದು ಸಂ
ಚಾರಿಲತಾವನಂ ವನಲತಾವನದಿಂ ಪೊರಮಟ್ಟುದೆಂಬಿನಂ ೩೨

ಅಮಿತ ವಿಳಾಸದಿಂ ಮದನಭೂಭುಜನೋಲಗದಂಗನಾ ಸಮೂ
ಹಮನಿಟೆಪಂಗನಾಸಮಿತಿ ಸುತ್ತಲುಮೆಯ್ತರೆ ಬರ್ಪ ರುಕ್ಮಿಣೀ
ರಮಣಿ ವಿಲೋಚನೋತ್ಸವಮನಿತ್ತಳುಪೇಂದ್ರನೊಳಂಗಜನ್ಮಜಂ
ಗಮಲತಿಕಾವನಂಬೆರಸು ಬಂದಪಳೋ ವನದೇವಿಯೆಂಬಿನಂ ೩೩

ವ|| ಆಗಳಾವನರುಹಾಕ್ಷನಾ ಮನೋಹರಿಯಂ ನಿರೀಕ್ಷಿಸುತಿರ್ದು (ನಿಜಾಂತ ರಂಗದೊಳ್) ಆ ಸೊಬಗರೂಪೆಯ ರೂಪಯೌವನ ವಿಳಾಸವಿಭ್ರಮಂಗಳಂ ಮನದೆಕೊಂಡು—

ನೀಲ ಸರೋರುಹಾರುಣ ಸರೋರುಹ ಪಾಂಡುಸರೋರುಹ ಪ್ರಭಾ
ಮಾಲೆಯನೀಟ್ದುಕೊಂಡುವೆನೆ ಬೀಱಿದುದೀತನಪಾಂಗವೆಂಬಿನಂ
ಶ್ರೀಲಲನಾಧಿನಾಥನಧಿಕೋತ್ಸವದಿಂ ವಿಲಸತ್ತ್ರಿವರ್ಣಮಂ
ಲೋಲದಪಾಂಗಮಾಲೆಯನನಂಗಲತಾಂಗಿಯ ಮೇಲೆ ಸೂಸಿದಂ ೩೪

ಶಂಬರವೈರಿ ತನ್ನೆಸೆವದೃಷ್ಟಿ ಸುಧಾರಸವೃಷ್ಟಿಯೊಳ್ ತಗು
ಳ್ದಂಬಿನ ವೃಷ್ಟಿಯಂ ಕಱೆವಿನಂ ವನಮಾಲೆ ಕಟಾಕ್ಷಮಾಲೆಯಿಂ
ದಂಬುಜನೇತ್ರೆಯಂ ಬಳಸುವಾಗಳನಂಗತರಂಗಿಣೀತರಂ
ಗಂ ಬಳಸಿರ್ದ ಪದ್ಮಿನಿಯ ಭಂಗಿಯನಾ ಲಲಿತಾಂಗಿ ತಾಳ್ದಿದಳ್ ೩೫

ಮನಸಿಜನಂಬುನಾಂಟೆ ತನುವಂ ಮನಪೆಚ್ಚಱದಂತೆ ವಾರಿಜಾ
ಕ್ಷನೊಳಿರೆ ರುಕ್ಮಿಣೀರಮಣಿ ಚಿತ್ರದ ಲೆಪ್ಪದ ಕಲ್ಲ ಪೆಣ್ಣ ರೂ
ಪೆನೆ ಮರವಟ್ಟಳಾವಳನನಂಗ ಶರಕ್ಕೆಡೆ ಮಾಡದಾವಳಂ
ನೆನೆಯಿಸಿಕಾಡದಾವಳನದಿರ್ಪುದು ಕೃಷ್ಣನ ರೂಪವಿಭ್ರಮಂ ೩೬

ಬಾಲೆಯನೇತ್ರದಿಂದಮರ್ದಿನೊಳ್ದೊರೆಮಾಲೆ ಪೊದಟ್ದು ನೀಳ್ದು ಬಂ
ದೀಲಲಿತಾಂಗನಂ ಬಳಸಿದತ್ತೆನೆ ಕೃಷ್ಣನ ಮೇಲೆ ಬಾಲೆ ಕ
ಣ್ಬೋಲದಿನಂದು ಬಿತ್ತರಿಸಿದಳ್ ನಗೆವೀಱುವ ಮುದ್ದುವೀಱುವಾ
ಲೋಲತೆವೀಱುವುಜ್ವಲತೆವೀಱುವ ಮುಗ್ಧ ಕಟಾಕ್ಷಮಾಲೆಯಂ ೩೭

ವ॥ ಆ ಸಮಯದೊಳ್—

ಪದಪಿಂದೀಕೆಯ ರೂಪನೀಕ್ಷಿಸಲೊಡಂ ಕಣ್ಬೋಲವೆನ್ನೊಳ್ ಪೊದ
ಟ್ದುದವಿತ್ತೆಂಬಿನಿತಲ್ಲದೆನ್ನನಮರ್ದಿಂದೋಲಾಡಿಪಂತೀಕ್ಷಿಪೀ
ಪದದೊಳ್ ತನ್ನೊಡವಂದ ಪೊಗಣೆ ನಡಲ್ ಮಚ್ಚಿತ್ತಮಂನಟ್ಟ ಪಾಂ
ಗದ ಪಾಂಗಿಂದಮೆ ಕನ್ನೆ ಕನ್ನಡಿಸಿದಳ್ ತನ್ನೊಂದಭಿಪ್ರಾಯಮಂ ೩೮

ವ॥ ಎಂದರವಿಂದಲೋಚನಂ ಮನದೊಳ್ ವಿಭಾವಿಸುತ್ತಿರ್ಪನ್ನೆಗಂ—

ಮನವೊಲ್ದುದ್ದಂಡದಂಡಾಬ್ಜದ ಕೊಡೆವಿಡಿದುತ್ತುಂಗವಕ್ಷೋಜೆಯರ್ ಬ
ರ್ಪನೆಗಂ ಪೊಂಬಾಳೆಯಿಂ ಬಾಳೆಯರನವರತಂ ಚಾಮರಂ ಬೀಸುತುಂ ಬ
ರ್ಪನೆಗಂ ಲೀಲಾಬ್ಜದಿಂ ಸುಯ್ಗೆಱಪಳಿಗಳನಬ್ಜಾಕ್ಷಿಯರ್ ಸೋವುತುಂ ಬ
ರ್ಪನೆಗಂ ಬಂದಳ್ ಲತಾಕೋಮಲೆ ಮದನಜಯಶ್ರೀಯೆ
ಬರ್ಪಂದದಿಂದಂ ೩೯

ವ|| ಅಂತು ನಡೆತಂದು—

ಲೋಲಕಟಾಕ್ಷಮಾಲೆ ವನಮಾಲೆಗೆ ಚಂದ್ರಿಕೆವೀಱೆ ಕೈಯ ಪೂ
ಮಾಲೆಗೆ ಭೃಂಗಮಾಲೆ ಮೊಱೆದೆಯ್ದೆ ಶಿರೀಷದ ಮಾಲೆಯುಂ ಪ್ರಭಾ
ಮಾಲೆಯಿನೇೞಿಸುತ್ತಿರೆ ಭುಜಂ ನಖಮಾಲೆ ಮಯೂಖ ಮಾಲೆಯುಂ
ಸಾಲಿಡೆ ಬಾಲೆ ಬಂದು ವನಮಾಲಿಗೆ ಮಾಲೆಯನೊಲ್ದು ಸೂಡಿದಳ್ ೪೦

ವ|| ಅಂತು ನಡೆತಂದು ತನಗೆ ರುಕ್ಮಿಣೀದೇವಿ ಮಾಲೆಯಂ ಸೂಡೆ ಪರಿಪೂರ್ಣ ಮನೋರಥನಾಗಿ ರಥಾಂಗಪಾಣಿ ನಿಜರಥಮನಾರಥಾಂಗೋತ್ತುಂಗಸ್ತನೆಯನೇಱಿಸಿ—

ಉಱದಾನುಯ್ವೆಪೆನೀ ಸಮಸ್ತಗುಣಮಾಲಾರಾಮೆಯಂ ರಾಮೆಯಂ
ಮಱುವಕ್ಕಂ ಪೆಱಗೆಯ್ದೆ ನಿಂದು ಕುಡುವೆಂ ಸಂಗ್ರಾಮಮಂ ಗ್ರಾಮಮಂ
ಪೊಱಮಟ್ಟೆನ್ನೊಳಿದಿರ್ಚಿ ತೋಱುಗೆ ನಿಜಾಸ್ತ್ರಾದಾನಮಂ ದಾನಮಂ
ಬಱಿಕೆಯ್ಗುಂ ರಿಪುವೀರರಂ ವಿಬುಧವೃಂದಾನಂದಕಂ ನಂದಕಂ ೪೧

ವ|| ಎಂದು ವಿಧೂತನಂದಕಂ ದ್ವಾರಕಾಭಿಮುಖನಾಗಿ ಸಮರಮಂ ಪಾರ್ದು ಮೆಲ್ಲಮೆಲ್ಲನೆ ನಡೆಯುತಿರ್ಪುದುಮಿತ್ತಂ—

ತ್ವರಿತಂ ಸೋಲಿಸಿ ಕನ್ನೆಯಂ ಮುರಹರಂ ಕೊಂಡೊಯ್ದ ವಾರ್ತಾಪರಂ
ಪರೆಯಂ ಕೇಳ್ದು ವನೇಭ ಬೃಂಹಿತನಿನಾದಂ ಗೇಳ್ದ ಸಿಂಗಂ ನಗಾಂ
ತರದಿಂ ಲಂಘಿಸುವಂತೆ ವಿಷ್ಟರದಿನೆಟ್ಟಿಂ ಮೂರ್ಧ್ನರತ್ನಾಂಶು ಕೇ
ಸರನುತ್ಪಾತ ನಿಶಾತ ಖಳ್ಗನಖರಂ ರಕ್ತೇಕ್ಷಣಂ ರಾಕ್ಷಸಂ ೪೨

ವ|| ಅಂತು ಶಿಶುಪಾಲಂ ಸಿಡಿಲ್ದೇೞೆ ತದೀಯಮಿತ್ರಂ ಭೀಷ್ಮಕರಾಜಪುತ್ರನಿಂತೆಂದಂ—

ನೀಂ ನಡೆವನ್ನಮುಂಟೆ ಸಮರಂ ಶಿಶುಪಾಲ ಚತುರ್ಬಲ ಪ್ರಯು
ಕ್ತಂ ನಡೆದಾನೆ ಕನ್ನೆಯುಮನಾತನುಮಂ ಪಿಡಿದಪ್ಪೆನೆಂದುದ-
ರ್ಪೋನ್ನತಿಯಿಂದೆ ರುಕ್ಮಿ ಬರೆ ನೋಡಿ ದರಸ್ಮಿತನಾಗಿ ರಾಮನಂ
ಕನ್ನೆಗೆ ಕಾಪುವೇೞ್ದು ರಥದಿಂದಿೞಿದೊರ್ವನೆ ಶೌರಿ ತಾಗಿದಂ ೪೩

ವ|| ಆಗಳ್—

ಮೊದಲೊಳೆ ಕಾಣಲಾಯ್ತರಿಬಲಂ ಪಡಲಿಟ್ಟುದನಂತೆ ಕೇಳಲಾ
ದುದು ಸುರದುಂದುಭಿಧ್ವನಿಯನಲ್ಲದೆ ನಿಟ್ಟಿಸಲಾದುದಿಲ್ಲ ತಾ
ಗಿದ ಪೊಣರ್ದಿಕ್ಕಿ ಗೆಲ್ದ ಪರಿಯಂ ಮನಮೊಲ್ದೊಡೆ ಕೊಂಡು ಪೋರ್ವನ
ಲ್ಲದೊಡರಿಸೇನೆಯಂ ಕ್ಷಣದಿನಿಕ್ಕುವನಿಂತುಟೆ ಲೀಲೆ ಕೃಷ್ಣನಾ ೪೪

ವ|| ಅಂತು ಚತುರಂಗಬಲಮುಱಿಯೆ ರುಕ್ಮಂ ತನ್ನ ಭುಜಮಲಮನೆ ನಚ್ಚಿ ಬಿಚ್ಚಳಿಸಿ—

ಲೋಳಮಣಿಕುಂಡಲಂ ರಣ
ಲೋಳ ನಿಳಾತಳಕೆ ಪಾಯ್ದು ರಥದಿಂದೊರೆಯಿಂ
ಬಾಳಂ ಕಿೞ್ತಿಯ್ದುವಿನಂ
ಬಾಳಂ ಪಿಡಿವಡೆವ ಮಾೞ್ಕೆಯಿಂ ಪಿಡೆವಟ್ಟಂ ೪೫

ತೇರೊಳ್ ರುಕ್ಮಿಣಿ ಭುಜದೊಳ್
ವೀರಾಂಗನೆ ಪಾದಪೀಠದೊಳ್ ರುಕ್ಮಿಯಿರಲ್
ಶೌರಿಯುಳೊಲವುಂ ನಲವುಂ
ಕಾರುಣ್ಯಮುಮೊಡನೆ ಪೆರ್ಚುತಿರ್ದುವಳುಂಬಂ ೪೬

ವ|| ಅಂತು ಚಾಣೂರವೈರಿ ಕಾರುಣ್ಯದಿಂ ಪ್ರಸನ್ನಚಿತ್ತನಾಗಿರಲ್ ಕನ್ಯಾಗ್ರಜನ್ಮನಂತಾ ಕನ್ಯಾರತ್ನಮನೊಡಂಬಟ್ಟು ಕೊಟ್ಟು ಬೀೞ್ಕೊಂಡು ಕುಂಡಿನೀಪುರಕ್ಕೆ ಪೋದಂ. ಇತ್ತ ಪುರುಷೋತ್ತಮಂ ಪ್ರಳಂಬಪ್ರಸೂದನ ಚೋದಿತಸ್ಯಂದನಂ ಭೀಷ್ಮಕನಂದನೆವೆರಸು ಬಂದು ದ್ವಾರಾವತಿಯ ಪೊಱವೊೞಲ ನೇೞ್ತರ್ಪ ಸಮಯದೊಳ್ ತನ್ನ ಬರವಿಂಗಷ್ಟಶೋಭಾವಿಶಿಷ್ಟತರಮಾಗಿ ರಾಜಿಸುವ ನಿಜರಾಜಮಂದಿರಮಂ ಪುಗುವಲ್ಲಿ

ಮಂಗಳ ಭೂಷಣಾವಳಿಯ ಬೆಳ್ಪು ಮುಗುಳ್ನಗೆವೆಳ್ಪು ಸನ್ಮಿತಾ
ಪಾಂಗದ ಬೆಳ್ಪು ಪೊಂದಳಿಗೆ ಸೂಸಿದ ಸೇಸೆಯ ಬೆಳ್ಪು ತಳ್ತಿರಲ್
ಜಂಗಮ ಪುಷ್ಪವಲ್ಲರಿಗಳೆಂಬಿನೆಗಂ ನಡೆತಂದು ಯಾದವೋ
ತ್ತುಂಗನ ಮೇಲೆ ಬಿತ್ತರಿಸಿದರ್ ಧವಳಾಕ್ಷತಮಂ ಲತಾಂಗಿಯರ್ ೪೭

ವಿಗಳದ್ಧಮ್ಮಿಲ್ಲದಿಂ ಮಲ್ಲಿಗೆಯುಗೆ ತೊಡವಿಂ ಮಂಜು ಗುಂಜಾರವಂ ಕೈ
ಮಿಗೆ ಬಂದಾನಂದದಿಂ ನೋೞ್ಪಬಲೆಯರ ವಿಲೋಲತ್ಕಟಾಕ್ಷಚ್ಛಟಾಶ್ರೇ
ಣಿಗಳಂ ಕೈಕೊಂಡಳುಂಬಂ ತೆಱೆಮಸಗಿದನಂಗಾಮೃತಾಂಭೋಧಿವೊಲ್ ತ
ನ್ನಗರಂ ಬೇೞ್ಕೊಂದು ಚೆಲ್ವಂ ಕುಡೆ ನೃಪಗೃಹಮಂ ಬಂದು ಪೊಕ್ಕಂ
ಮುಕುಂದಂ ೪೮

ಪಂಪರಾಮಾಯಣ

೧

ಶ್ರೀ ಕೇಳೀನಿಲಯಂ ನಿಜಾಂಘ್ರಿಕಮಲಂ ವಿದ್ಯಾನಟೀ ನಾಟ್ಯವೇ
ದೀಕಲ್ಪಂ ಮುಖಚಂದ್ರಬಿಂಬಮಖಿಲೇಂದ್ರೋತ್ತಂಸ ಮಾಣಿಕ್ಯದೀ
ಪಾಕೀರ್ಣಂ ಹರಿಪೀಠಪಾರ್ಶ್ವಮೆನಿಪಂ ಪೂಜಾರ್ಹನಾರ್ಹಂತ್ಯ ಲ
ಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಮಾೞ್ಕಿಷ್ಟಾರ್ಥ ಸಂಸಿದ್ಧಿಯಂ ೧

ಪರಮಬ್ರಹ್ಮ ಶರೀರಪುಷ್ಟಿ ಜನತಾಂತರ್ದೃಷ್ಟಿ ಕೈವಲ್ಯಬೋ
ಧರಮಾಮೌಕ್ತಿಕ ಹಾರಯಷ್ಟಿ ಕವಿತಾವಲ್ಲೀಸುಧಾವೃಷ್ಟಿ ಸ
ರ್ವ ರಸೋತ್ಪಾದ ನವೀನಸೃಷ್ಟಿ ಬುಧಹರ್ಷಾಕೃಷ್ಟಿ ಸರ್ವಾಂಗ ಸುಂ
ದರಿ ವಿದ್ಯಾನಟಿ ನಾಟಕಂ ನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್ ೨

ಉಪದೇಶಂಗೆಯ್ದು ಕಾವ್ಯಚ್ಛಲದಿನಖಿಲಧರ್ಮಂಗಳಂ ಲೋಕಮಂ ಧ
ರ್ಮ ಪಥ ಪ್ರಸ್ಥಾನದೊಳ್ ಯೋಜಿಸಿ ಪರಮ ಪುರಾಣಂಗಳಂ
ಪೇಳ್ದು ಕಲ್ಪಾಂ
ತ ಪರೀತ ಖ್ಯಾತಿಯಂ ತಾಳ್ದಿದ ಪರಮಕವಿಜ್ಯೇಷ್ಠರಾದರ್ ತದೀಯಾಂ
ಘ್ರಿ ಪಯೋಜಂಗಳ್ ಮದೀಯಾಶಯಮಣಿಭವನಕ್ಕಕ್ಕೆ
ಪುಷ್ಪೋಪಹಾರಂ ೩

ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ
ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು ಕಾ
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾ
ದೇಯಮೆನಿಕ್ಕುಮೇವಿಷಯಮೊಪ್ಪದೊಡಾವುದು ಮೊಪ್ಪಲಾರ್ಕುಮೇ ೪

ವಿಪುಲಾಚಲದೊಳ್ ವೀರಜಿ
ನಪಾರ್ಶ್ವದೊಳ್ ಗೌತಮಂ ಗಣಾಗ್ರಣಿ ಮಗಧಾ
ಧಿಪನಱಿಯೆ ನೆಱಿಯೆ ಪೇಳ್ದುದ
ನ್ನಪೂರ್ವಮೆನೆ ರಾಮಕಥೆಯನಭಿವರ್ಣಿಸುವೆಂ ೫

೨

ಸೀತಾಹರಣಂ

ನಿಯಮದಿನಿರ್ದನಂ ನಿರಪರಾಧನನನ್ನೆಯದಿಂದಮೆನ್ನ ತಂ
ಗೆಯ ಮಗನಂ ವಿದಾರಿಸಿದನಂ ತಱಿದಾತನಮೆಯ್ಯ ರಕ್ತಮಾ

ರಿಯನೆಱೆದಾಱಿಪೆಂ ಖರನ ಶೋಕಕೃಶಾನುವನೆಂದು ಕಾಯ್ದುದು
ರ್ಜಯನಸುರಾಧಿಪಂ ಜಡಿದನಾಸುರಮಂ ನಿಜಚಂದ್ರಹಾಸಮಂ ೧

ಒದವಿದ ಕೋಪವಹ್ನಿಯುರಿಯುಂ ಪೊಗೆಯುಂ ನೆಗೆವಂತೆ ಪದ್ಮರಾ
ಗದ ಹರಿನೀಲದುನ್ಮುಖ ವಿಭೂಷಣ ರಶ್ಮಿ ಪಗಂಡುಗೊಳ್ವಿನಂ
ಕದನಮದೋದ್ಧತಂ ಖಚರನಾಯಕರಂ ಬರವೇಟ್ಟು ಸಿಂಹಪೀ
ಠದಿನಿರದೆಟ್ಟು ನಸ್ತಮಿತ ಪುಣ್ಯದಶಾನನನಾ ದಶಾನನಂ ೨

ಸೆಡೆಯೆ ಹಿಮಪ್ರಭಂ ನಿಜಯಶಃಪ್ರಭೆಯಿಂದಿನನಂಶುಮಾಲೆ ಕೀ
ಟ್ಟಿಡೆ ಬಲಗಯ್ಯ ಬಾಳ ಪೊಳೆಪಿಂ ಕಡುಗೆಟ್ಟಲೆ ದೇಹದೀಪ್ತಿಯಿಂ
ದೊಡರಿಸೆ ರಾಹು ತನ್ನ ಹರಿನೀಲ ವಿಮಾನಮನೇಱುವಂತಿರಾ
ಗಡೆ ಕಡುಕೆಯ್ದು ಪುಷ್ಪಕ ವಿಮಾನಮನೇಱಿದನಿಂದ್ರ ವಿದ್ವಿಷಂ ೩

ಪ್ರತಿಕೂಲಾನಿಲನಿಂ ಪತಾಕೆ ಮಗುಳ್ದಿಂಬಂತಾಗೆ ಕಯ್ಸನ್ನೆಯಿಂ
ಶ್ರುತಿಯಂ ಸಾರ್ದರೆ ಪೋಪುದಲ್ತುನಯಮೆಂಬಂತಾಗಿ ಘಂಟಾ ರಣ
ತ್ಕೃತಿ ಸಾರ್ದಂದುದು ಪುಣ್ಯದೇವತೆಯ ಕಣ್ಣೀರೆಂಬಿನಂ ಮೇಘ ಸಂ
ಹತಿಯಿಂದಲ್ಲುಗೆ ಮುತ್ತು ಪುಷ್ಪಕ ವಿಮಾನಂ ದಂಡಕಾರಣ್ಯಮಂ ೪

ವ॥ ಆ ಸಮಯದೊಳ್ ದಶಾಸ್ಯನೊಂದು ತಣ್ಪುಟ್ಟಿಲ ತಾಣದೊಳ್ ಬೞಿಸಿಡಿಲ ಬೞಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು—

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ೫

ತಳತಳಿಸಿ ಪೊಳೆಯೆ ಸೀತೆಯ
ಚಳ ನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳಮಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್ ೬

ಹಾರ ಮರೀಚಿ ಮಂಜರಿ ಸುಧಾರಸ ಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರಸುಖದಾಯಕಮಿಾದೊರೆತಲ್ಲಮೀಕೆ ಶೃಂ

ಗಾರ ಸಮುದ್ರಮುಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದಸೀಕ್ಷಿಸಿ ಕಣ್ಣ ಜಿದಾರೆ ಮನ್ಮಥಂ ೭

ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟಪ್ರತಿಪಾಲನ ಕ್ಷಮತೆಯಂ ಕಯ್ಗಾಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ೮

ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕೈ ನೀ
ಡುವ ಗಾಂಪನಂತೆ ರಘುವೀ
ರವಧೂ ಜನಕಜೆಗೆ ಮನದೊಳಳಿಪಂ ತಂದಂ ೯

ಪರವಧುಗಾಸೆಗೆಯ್ವಧಿಕ ಪಾತಕನೊಂದು ರಘುಪ್ರವೀರನೊಳ್
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮ ಸತ್ವ ಗುಣ ಹಾನಿಯೆ ಸೂಚಿಸದೇ ವಿನಾಶಮಂ ೧೦

ವ|| ಅಂತು ನೆನೆಯಲೊಡಮವಲೋಕಿನೀವಿದ್ಯೆ ಮನದೊಡನೆಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾ ಸಿಂಹಾಸನಕ್ಕಧಿಪತಿಯುಮಿಕ್ಷ್ವಾಕು ವಂಶ ಸಂಭವನುಮಪ್ಪನರಣ್ಯ ತನೂಭವಂ ದಶರಥ ನರನಾಥಂ ತದಪತ್ಯರಿವರ್ ಈ ಕಾಲದ ಬಲದೇವ ವಾಸುದೇವರ್ ದೇವತಾ ಧಿಷ್ಠಿತಂಗಳಪ್ಪವಜ್ರಾವರ್ತ ಸಾಗರಾವರ್ತ ಚಾಪರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್, ಮಹಾಬಲ ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾಪುರವರೇಶ್ವರನಪ್ಪ ಹರಿವಂಶದ ಜನಕನತನೂಭವೆ ರಥನೂಪುರ ಚಕ್ರವಾಳಪುರಮನಾಳ್ವ ಚಂಡಬಲಪರಾಕ್ರಮನನಪ್ಪಪ್ರಭಾಮಂಡಲನ ತಂಗೆ ಸೀತಾದೇವಿಯೆಂಬಳೆಂಬುದುಮಿಾಕೆಯ ನೀತನಿಂದಗಲ್ಚುವುಪಾಯಮಾವುದೆನೆ ದೇವತೆ ಚಕಿತಚಿತ್ತೆಯಾಗಿ—

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕ ಬಲರ್
ಕಾರಣಪುರುಷರಿವರ್ ನಿ
ಷ್ಕಾರಣಮಿವರೊಳ್ ವಿರೋಧಮಂ ಮಾಡುವುದೇ ೧೧

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ

ನೀವಿಷಯಕ್ಕೆಱಗುವುದುಂ
ಕಾವರೆ ಕಣಿಗೊಂಡರೆಂಬ ನುಡಿಗೆಡೆಯಕ್ಕುಂ ೧೨

ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವೈ ದಶಾಸ್ಯ ಪೆಱನಾವಂ ನಿ
ನ್ನನ್ ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ ೧೩

ಪದಿನಾಲ್ ಸಾಸಿರ ಮುಖ್ಯನಾಯಕರಸಂಖ್ಯಾತಂ ಬಲಂ ಖೇದದಿಂ
ದಿದಿರಾದರ್ ಖರದೂಷಣರ್ ಬಗೆದನಿಲ್ಲತ್ತಲ್ ಭರಂಗೆಯ್ದು ಕಾ
ದಿದಪಂ ಲಕ್ಷ್ಮಣನಿತ್ತಲೀಕೆಯೊಡನೀತಂ ವೀತ ಶಂಕಂ ವಿನೋ
ದದೊಳಿರ್ದಂ ರಘುವೀರನಿನ್ನರಿವರೊಳ್ ವಿದ್ವೇಷಣಂ ದೂಷಣಂ ೧೪

ಆನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೇೞ್ದೆ ಪೇೞ್ದುದನೇಗೊಳ್
ಏನೆಂದು ಕೇೞ್ ನುಡಿವಯ್
ಮಾನವರಾಂತಪರೆ ಮರುಳೆ ಲಂಕಾಪತಿಯಂ ೧೫

ವ|| ಎಂಬುದುಂ ವಿದ್ಯಾದೇವತೆ ಕನಲ್ದು—

ಜನಕಜೆಯನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ
ತನ ಕಯ್ಯೊಳವಲ್ತು ಪುರಾ
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ ೧೬

ಗೆಲಲೆನಗೆ ರಿಪುಬಲಂ ಬ
ಲ್ವಲಮಾದೊಡೆ ಸಿಂಹನಾದಮಂ ಮಾೞ್ಪಿಂ ಬೆಂ
ಬಲಮಾಗಿ ಬರ್ಪುದೆಂದೀ
ಬಲದೇವಂಗಱಿಪಿ ವಾಸುದೇವಂ ಪೋದಂ ೧೭

ವ|| ಎಂದು ರಾವಣಂಗೆ ಪೇೞ್ದುದುಮವಂ ರಣಕ್ಷೋಣಿಗೆ ಪೋಗಿ ಲಕ್ಷ್ಮಣಂ ಕೇಳದಂತು ವೈಕುರ್ವಣ ಶಕ್ತಿಯಿಂ ಸಿಂಹನಾದಂಗೆಯ್ಯೆನೆ ವಿದ್ಯಾದೇವತೆ ಪೋಗಿ ಅಂತೆಗೆಯ್ವುದುಮಾ ಧ್ವನಿಯಿಂ ಕೇಳ್ದು—

ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂ
ಹರವಂದೋಱಿದನಾಹವಂ ವಿಷಮಮೆಂಬೀ ವಿಸ್ಮಯಂ ಚಿತ್ತದೊಳ್

ದೊರೆಕೊಂಡತ್ತು ರಘೂದ್ವಹಂಗಮುೞಿದಂದೆಂತಕ್ಕುಮೋ ಜಾನಕೀ
ಹರಣಂ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ ೧೮

ಕಾಪಂ ಪೇೞ್ದು ಜಟಾಯುವ
ನೋಪಳನಿರವೇೞ್ದು ವೈರಿಬಲಮಂ ತವಿಸಲ್
ಪೋಪಂತಿರೆ ದಂಡಧರಂ
ಚಾಪಧರಂ ಬಲನವಂಧ್ಯಕೋಪಂ ಪೋದಂ ೧೯

ವ|| ಅನ್ನೆಗಮಿತ್ತಲ್—

ಅೞಿಪಿ ಪರವಧುಗಧೋಗತಿ
ಗೆೞಿವುದನಭಿಸಯಿಸುವಂತೆ ಸೀತೆಯ ಸಾರ
ಣ್ಗೆೞಿದಂ ನಭದಿಂ ಖಚರಂ
ಪೞಿಗಂ ಪಾಪಕ್ಕಮಂಜದವರೇಗೆಯ್ಯರ್ ೨೦

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುೞಿವಂ ಕಡಂಗಿ ಕಾಳೋರಗನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ ೨೧

ವ|| ಅಂತು ಪಿಡಿದು ನಿಜವಿಮಾನದೊಳಿಟ್ಟು—

ದಶಮುಖನುನ್ಮುಖನಳಿಪಿಂ
ಶಶಿಮುಖಿಯಂ ಜನಕಸುತೆಯನಾವರಿಸೆ ಚತು
ರ್ದಶ ಭುವನಮನಪವಾದಂ
ಶಶಿಕಲೆಯಂ ಸೈಂಹಿಕೇಯನುಯ್ವಂತುಯ್ದಂ ೨೨

ವ|| ಆಗಳದಂ ಕಂಡು ಜಟಾಯು ಕೋಪಾನಲ ವಿಸ್ಫುಲಿಂಗದಂತಾರಕ್ತಂಗಳಾದ ಕಣ್ಗಳಿಂ ನುಂಗುವಂತೆ ನೋಡಿ—

ಪತಿ ಕಾಪುವೇೞ್ದು ಪೋದಂ
ಸತಿಯಂ ಕಳ್ದುಯ್ದಪಂ ಖಳಂ ಮಾರ್ಕೊಂಡು
ದ್ಧತನಂ ಮದೀಯ ತುಂಡಾ
ಹತಿಯಿಂ ಶತಖಂಡಮಾಗೆ ಮಾೞ್ಪೆನೆನುತ್ತುಂ ೨೩

ಖರನಖರಂಗಳಿಂ ನಿಶಿತಚಂಚುಗಳಿಂದಿಱಿಯಲ್ ಕಱುತ್ತು ಸಾ
ರ್ತರೆ ನಸುನಕ್ಕು ಪೊಯ್ಯೆ ಕರದಿಂ ಗಮನೋತ್ಸುಕನಿಂದ್ರವೈರಿ ತ
ನ್ನೆರಡುಮೆಱಂಕೆಗಳ್ ಮುಱಿದಿಳಾತಳದೊಳ್ ಕೆಡೆದತ್ತು ವಜ್ರದಿಂ
ಸುರಪತಿ ಪೊಯ್ಯೆ ಬೆಟ್ಟುಕೆಡೆದಂತೆ ಜಟಾಯು ನಭೋ ವಿಭಾಗದಿಂ ೨೪

ಮನಮೆಳದಾಗೆ ಮನ್ಯುಮಿಗೆ ತಳ್ತಿಮೆಯಿಂ ಕರೆಗಣ್ಮಸೂಸೆ ಕ
ಣ್ಬನಿ ಗಳಕಂದಳಂ ಬಿಗಿಯೆ ಗದ್ಗದನಿಸ್ವನಮುಣ್ಮ ಹಾ ರವಂ
ಜನಿಯಿಸೆ ಸೀತೆ ಭೀತೆ ದೆಸೆಗೆಟ್ಟೆರ್ದೆಗೆಟ್ಟೞಿ ಪೊಣ್ಮದತ್ತು ಮಾ
ರ್ದನಿ ದೆಸೆಯೊಳ್ ದಿಗಂಗನೆಯರುಂ ಬಿಡದಂದೊಡಱ ನಟ್ಟ್ವಮಾಱ್ಕೆಯಿಂ ೨೫

ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚೆ ಶೋಕವಾ
ತಂಕವೊಡರ್ಚೆ ಪುಷ್ಪಕವಿಮಾನದ ರತ್ನ ವಿಚಿತ್ರ ಪುತ್ರಿಕಾ
ಸಂಕುಲಮುಱ್ತೊಡಱ್ತುವು ಬೆಮರ್ತೊಡೆ ಕೂಡೆ ಬೆಮರ್ತುವಾಗಳಾ
ಲಂಕೆಯ ಸೂಡನುನ್ನತಿಯ ಕೇಡನವಂಗೆ ನಿವೇದಿಪಂತೆವೋಲ್ ೨೬

ಬಲೆಗೊಳಗಾದ ಸೋಗೆನವಿಲಂತೆ ಭಯಾಕುಲೆ ತನ್ನ ಚಿತ್ತದೊಳ್
ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯದರ್ಶನ
ಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸುಮುಚ್ಚಿವೋಗಿ ತ
ಣ್ಣೆಲರಲೆಪಿಂದೆ ಮೂರ್ಛೆದಿಳಿದಳ್ ಮಗುಳ್ದುಂ ಪೊಱಪೊಣ್ಮೆ ಹಾ ರವಂ ೨೭

ಕ್ರೂರಾತ್ಮಂ ವಂಚಕನವಿ
ಚಾರಿ ದುರಾಚಾರಿ ಬಗೆಯದುಯ್ದಪನೆನ್ನಂ
ಹಾ ರಾಮಾ ಹಾ ರಾಮಾ
ಬಾರಿಪರಾರೆಂದು ಸೀತೆ ಶೋಕಂಗೆಯ್ದಳ್ ೨೮

ವ॥ ಅಂತು ಶೋಕಂಗೆಯ್ವ ಸೀತೆಯುಂ ದಶಾಸ್ಯನನಂತವೀರ್ಯ ಕೇವಲಿಗಳ ಚರಣೋಪಾಂತದೊಳ್ ಕಯ್ಕೊಂಡ ಪರಾಂಗನಾ ವಿರತಿವ್ರತದ ಭಂಗಮುಂ ಬಗೆಯದುಯ್ದನನ್ನೆಗಮಿತ್ತಲ್—

ದೇವೇಂದ್ರನ ವಜ್ರಮನೆ
ನ್ನೀ ವಜ್ರಾವರ್ತ ಚಾಪಮಂ ಮೀಱುವನಿ
ನ್ನಾವನೆನುತ್ತುಂ ಸಂಗ್ರಾ
ಮಾವನಿಗನುಜನ ಕೆಲಕ್ಕೆ ರಾಮಂ ಬಂದಂ ೨೯

ವ|| ಅಂತು ಬರ್ಪುದುಂ ಲಕ್ಷ್ಮಣನಪಾಯಬಹುಳಮಪ್ಪ ಗಹನದೊಳ್ ದೇವ ಸೀತಾದೇವಿಯನಗಲ್ದೇಕೆ ಬಿಜಯಂಗೆಯ್ದಿರೆಂಬುದುಂ ನಿನ್ನ ಸಿಂಹನಾದಮಂ ಕೇಳ್ದು ಬಂದೆನೆನೆ ಭವದೀಯ ಪ್ರಸಾದದಿನೆನಗೆ ಬಲ್ಸಲಮಪ್ಪ ಬವರಮಿಲ್ಲ ದಾವನಾನುಮೊರ್ವಂ ಮಾಯಾವಿಯ ಮಾಟ ಪುಕ್ಕುಮದುಕಾರಣಂ ಬೇಗಂ ಬಿಜಯಂಗೆಯ್ವುದಾನೀ ಬವರಮಂ ತೀರ್ಚಿ ನಿಮ್ಮ ಬೆನ್ನನೆ ಬಂದಪ್ಪೆನೆಂದು ಬಿನ್ನವಿಸೆ—

ತೋಱಿದನಿಲ್ಲ ಸಿಂಹರವಮಂ ಗಡ ಲಕ್ಷ್ಮಣನೆನ್ನ ಚಿತ್ತದೊಳ್
ತೋಱಿದುದಿಲ್ಲ ಬಿಟ್ಟು ಬರಲಾಗದು ಸೀತೆಯನೆಂಬ ನಿರ್ಣಯಂ
ಬೇಱೆ ಕಡಂಗಿ ಕೆತ್ತಿದಪುದೆನ್ನೆಡಗಣ್ ತಡವಿಲ್ಲದಚ್ಚಿಗಂ
ತೋಱಿದೆ ಮಾಣದಿಂತಿದೆನುತುಂ ಮಗುಳ್ದಂ ಮನುವಂಶಮಂದನಂ ೩೦

ವ|| ಅಂತು ಬಂದು ಲತಾಭವನದೊಳ್ ಮನೋವಲ್ಲಭೆಯಂ ಕಾಣದೆ ಶಿಖಿಮುಖಕ್ಕೆ ವಂದ ಪಾದರಸದಂತೆ ನಿಜ ನಿಸರ್ಗ ಧೈರ್ಯಗುಣಮ ದೃಶ್ಯಮಾಗೆ—

ಹಾ ಹಾ ಜನಕಸುತೇ ವೈ
ದೇಹೀ ವೈದೇಹಿಯೆಂದು ಪುದಿದಿರೆ ಮನಮಂ
ಮೋಹತಮಂ ದೀಪಂ ವಾ
ತಾಹತಿಯಿಂ ನಂದುವಂತೆ ಮೂರ್ಛೆಗೆ ಸಂದಂ ೩೧

ನಸು ಬಿಸುಪೇಱೆ ಮೆಯ್ ಮಗುಟೆ ಕೆತ್ತುವ ತಾಣಮೆ ಕೆತ್ತೆ ಮಂದಮಾ
ಡುಸಿರ್ಗಳೆ ನಾಸಿಕಾಮುಕುಲದಿಂದಿನಿಸುಂ ಪೊಱಪೊಣ್ಮೆ ತಳ್ತು ಸಂ
ದಿಸಿದೆಮೆ ಬಿರ್ಚೆ ಕಣ್ಮಲರ್ಗಳುಳ್ಪಲರುತ್ತಿರೆ ಜಾನಕೀಯೆನು
ತ್ತುಸಿರ್ದುಸಿರ್ದೆಟ್ದನಾ ರಘುಕುಲಾಂಬರ ಚಂಡಮರೀಚಿ ಮೂರ್ಛೆಯಿಂ ೩೨

ವ|| ಅಂತೆೞ್ಚತ್ತು ಸುತ್ತಲುಂ ತೊೞಲ್ದಱಸುತ್ತುಮಡವಿಯೊಳಗನೆ ಬರುತ್ತು ಮಿರ್ಪಾಗಳೊಂದೆಡೆಯೊಳಸುವಿಯೋಗ ಸಂಕಟದಿಂ ಸರಂಗೆಯ್ವ ಜಟಾಯು ವಂ ಕಂಡು ಸೀತಾಹರಣಮಿದರ್ಕೆ ಮರಣ ನಿಮಿತ್ತಮಾದುದೆಂದುಬ್ಬೆಗಂಬಟ್ಟು ಸಂಸಾರವಿಷಮವಿಷಾಪಹಾರಮಂ ಪಂಚನಮಸ್ಕಾರಮದರ್ಕೆ ಪೇೞ್ದು ಮರ ಗತಿಯನೆಯ್ದಿಸಿ ವೈದೇಹಿಯನಾವನಾಂತರದೊಳೆಲ್ಲಿಯುಮಱಸಿ ಕಾಣದೆ

ಕಳಹಂಸಾಲಸಯಾನೆಯಂ ಮೃಗಮದಾಮೋದಾಸ್ಯ ನಿಶ್ವಾಸೆಯಂ
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತ ಕೋ

ಕೆಳವೋ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
ತಳೆಯಂ ಕೈರವನೇತ್ರೆಯಂ ಪಿಕರವ ಪ್ರಖ್ಯಾತೆಯಂ ಸೀತೆಯಂ ೩೩

ಕಳರುತಿ ಮತ್ತಕೋಕಿಲಮನೀಕ್ಷಣಮುತ್ಪಲಮಂ ವಿನೀಲ ಕುಂ
ತಳಮಳಿಮಾಲೆಯಂ ಕಚಭರಂ ನವಿಲಂ ನಡೆ ಹಂಸಿಯಂ ತಳಂ
ತಳಿರ್ಗಳನಾನನಂ ಕಮಲಮಂ ನಳಿತೋಳ್ಲತೆಯಂ ಲತಾಂತ ಕೋ
ಮಳೆ ಮಱಿಗೊಂಡು ಮೆಯ್ಗರೆದು ಕಾಡುವ ಕಾರಣಮೇನೊ ಜಾನಕೀ ೩೪

ವ|| ಎಂದು

ಎನಿತಾನುಂ ತೆಱದಿಂ ಪಲುಂಬಿ ಪಲವಾಡುತ್ತುಂ ಮನಸ್ತಾಪದಿಂ
ತನು ಸಂತಾಪಮನಪ್ಪುಕಯ್ಯೆ ಬಱಲುತ್ತುಂ ಕಂತುಸಂತಾಪದಿಂ
ದೊನಲುತ್ತುಂ ಕನಲುತ್ತುಮುಂದವಿರಳಪ್ರಸ್ಯಂದಿ ಬಾಷ್ಪೋದಕಾ
ನನನಾ ಕಾನನದೊಳ್ ತೊಱಲ್ದು ರಘುರಾಮಂ ಸೇದೆವಟ್ಟೆರ್ಪಿನಂ ೩೫

ವ|| ಅನ್ನೆಗಮಿತ್ತಲ್ ರಾಮಾನುಜಂ ಖರದೂಷಣರಂ ಸೂರ್ಯಹಾಸಾಸಿಯಿಂ ತಲೆಪಾಱೆ ಬೀಱಿ ಪೊಯ್ದು ಗೆಲ್ಲಂಗೊಂಡು ವಿರಾಧಿತನೆಂಬ ಖೇಚರನಂ ಪಾತಾಳಲಂಕೆಗಧಿಪತಿ ಮಾಡಿ ಬರುತ್ತುಂ—

ಮದಜಲ ಧಾರೆಯಿಲ್ಲದ ದಿಶಾಗಜದಂತೆ ಸುಧಾಂಶು ಲೇಖೆಯಿ
ಲ್ಲದ ನಭದಂತೆ ಕಲ್ಪಲತೆಯಿಲ್ಲದ ನಂದನದಂತೆ ವೇಲೆಯಿ
ಲ್ಲದ ಕಡಲಂತೆ ಕೇಸರಿಣಿಯಿಲ್ಲದ ಕೇಸರಿಯಂತೆ ಸೀತೆಯಿ
ಲ್ಲದ ರಘುವಂಶ ರಾಮನಿರೆ ನೋಡಿದನಾಕುಲನಾಗಿ ಲಕ್ಷ್ಮಣಂ ೩೬

ವ|| ಅಂತು ಮನದೊಳಲ್ಲಾಡುತ್ತುಮೆಯ್ದೆವಂದು ಮದಂಬಿಕೆಯಂ ಕಂಡೆನಿಲ್ಲೆತ್ತ ಲಿರ್ದಪಳೆಂಬುದುಮಾನ್ ನಿನ್ನಲ್ಲಿಗೆ ಬಂದ ಪಿಂದೆ ಸಿಂಹ ಶರಭಾದಿರೌದ್ರ ವನಚರಂಗಳುಯ್ದುವೆಂದಱಿಯೆನಾವನಾನುಮೊರ್ವಂ ಮಾಯಾವಿ ಕಳ್ದು ಯ್ದನೆಂದಱಿಯೆನಿನ್ನೆವರಮರಣ್ಯದೊಳ್ ತೊಱಲ್ದೆಲ್ಲಿಯುಮಱಿಸಿ ಕಂಡೆ ನಿಲ್ಲೆಂದು ನೊಂದು ನುಡಿವನ್ನೆಗಮಿದಿರಾಗಿ ಬರ್ಪ ಬಲಮಂ ಕಂಡಿದಾರಬಲ ಮೆನೆ ಲಕ್ಷ್ಮೀಧರನಿದು ವಿರಾಧಿತನೆಂಬ ವಿದ್ಯಾಧರಂ ಧುರದೊಳೆನಗೆ ಸಹಾಯ ನಾಗಿ ಪಾಱಿಯಂ ಪಾಳಿಸಿದ ನೀಗಳ್ ದೇವ ನಿಜಚರಣ ಸೇವಾಸಕ್ತ ಚಿತ್ತನಾಗಿ ಬರುತಿರ್ದಪನಾತನ ಬಲಮೆಂದಱಿಪುವನ್ನೆಗಮೆಯ್ದೆವಂದು ರಾಘವನ ಪಾದೋಪಾಂತದೊಳ್ ಮೆಯ್ಯನಿಕ್ಕೆ ಲಕ್ಷ್ಮೀಧರಂ ಜಗನ್ಮಾತೆಯಂ ಸೀತಾದೇವಿಯನಾವನಾನುಂ ಕಳ್ದುಯ್ದು ಕಾನನದೊಳಗಿರ್ದಪನಾದೆಸೆ ಗಗ್ರಜಂ ವ್ಯಗ್ರನಾಗಿರ್ದಪನೆನೆ ವಿರಾಧಿತಂ ಮತ್ಕುಲಾಗತಮುಂ ನಿಸರ್ಗ

ದುರ್ಗಮುಮುಮಪ್ಪ ಪಾತಾಳಲಂಕಾಪುರದೊಳಿರ್ದು ಸೀತಾದೇವಿಯರ ಅಣ್ಣನಪ್ಪ ಪ್ರಭಾಮಂಡಲನಂ ಬರಿಸಿ ಇದರ್ಕೆ ತಕ್ಕುದಂ ನೆಗಟಲಕ್ಕು ಮದರ್ಕಾನೆ ಸಾಲ್ವೆನಲ್ಲಿಗೆ ಬಿಜಯಂಗೆಯ್ವುದೆಂದು ರಾಮಲಕ್ಷ್ಮಣರಂ ರಥಮನೇಱಿಸಿಕೊಂಡು ಚತುರಂಗಬಲ ಸಹಿತಂ ಮಹಾ ವಿಭೂತಿಯಿಂ ಪಾತಾಳಲಂಕಾಪುರಮಂ ಪೊಕ್ಕಂ.

ಶಬರ ಶಂಕರ ವಿಳಾಸ

೧

ಶ್ರೀಮತ್ಕಲ್ಯಾಣರೂಪಂ ಶರಭವನಗಜೋತ್ಸಂಗನಭ್ರಾಂತಯೋಗಾ
ರಾಮಾಂಚತ್ಪಾದಪದ್ಮಂ ಸುರುಚಿಗಣಪವಿಭ್ರಾಜಿತಂ ಸಾರಸತ್ವಂ
ವ್ಯಾಮಿಶ್ರಾಹೀನ ಚಂಚತ್ಕಟಕನಧಿಕದಿವ್ಯಾಗಮಂ ಸ್ವಸ್ಥಲೋಕ
ಸ್ತೋಮಂ ಭ್ರಾಜಿಷ್ಣುವೆಮ್ಮಂ ಪೊರೆಗೆ ವಿತತಭಾಸ್ವತ್ಪ್ರಕಾಶಂ ಗಿರೀಶಂ ೧

ಸುರರಮಣೀ ಕದಂಬಕಬರೀಭರಕಾಂತಿಕಳಿಂದ ಜಾಂಬುವಿ
ಸ್ಫುರಿತ ಪದಾಂಬುಜಾತೆ ಕರಿರಾಣ್ಮುಖಷಣ್ಮುಖಮಾತೆ ಸದ್ಗುಣಾ
ಭರಣೆ ಕೃಪಾಸುಧಾರಸತರಂಗಿಣಿ ಸಾರಕಳಾ ಧುರೀಣೆ ಶಾಂ
ಕರಿ ಪೊರೆಯನ್ನನ್ವಿತಶುಭೋದಯೆ ಶೈಲಜೆ ಸರ್ವಮಂಗಳೇ ೨

ಗುರು ಸೋಮನಾಥ ಹರಿಹರ
ಹರಕವಿ ಪದ್ಮರಸಮುಖ್ಯರಂ ಬಲವಂದಾ
ದರದಿಂದೆ ಮಣಿದು ನೆಗಳ್ದಪೆ
ಸುರತರ ಶಿವಲೀಲೆ ಮಿಸುಪ ಸತ್ಕೃತಿಯನಿದಂ ೩

೨

ಪಾಶುಪತಾಸ್ತ್ರ ಪ್ರದಾನ

ಅತಿಬಳಮೂಕ ದಾನವನೆನಿಪ್ಪವನೊರ್ವನಖರ್ವಗರ್ವ ಸಂ
ಯುತನವನೀಧರೇಂದ್ರದ ನಿತಂಬದಿಱುಂಬಿನೊಳಿರ್ದು ನಿರ್ಜರ
ಪ್ರತತಿಯ ಪರ್ಬಿದಬ್ಬರಮನಾಲಿಸಿ ತಿಂದಪೆನೀ ಸುಪರ್ವಸಂ
ತತಿಯನೆನುತ್ತೆ ತಾಳ್ದು ಪೊಱಮಟ್ಟನುದಗ್ರವರಾಹ ರೂಪಮಂ ೧

ಬಡಬಜ್ವಾಲೆಯ ವಿಸ್ಫುಲಿಂಗತತಿಯೆಂಬಂತಿರ್ಪಕಣ್ ಚಕ್ರದಿ
ರ್ಕಡೆಯಂ ಬಾಯೊಳಿಱುಂಕಿದಂತೆ ಪೊಳೆಪಿಂ ಕೊಂಕಿರ್ದ ಕೂರ್ದಾಡೆ ಬಲ್
ಸಿಡಿಲುದ್ಯದ್ಧ್ರುವಮಾಳ್ದ ಭೀಕರಮುಖಂ ಕಲ್ಪಾಬ್ದಮಂ ಪೋಲ್ವ ಕಾ
ರೊಡಲತ್ಯದ್ಭುತಮಾಗೆ ಬಂದುದು ಮಹಾರೋಷಾಕರಂ ಸೂಕರಂ ೨

ಖರಖುರಘಾತದಿಂದೆ ಪುಡಿಯೇೞೆ ಶಿಲಾತಳವೊತ್ತಿಮೆಟ್ಟಿಮೆ
ಯ್ಯೊರಸೆ ಬೃಹತ್ಕುಜಪ್ರತತಿ ನುರ್ಗೆ ವಿಜೃಂಭಣಮಾಳ್ದು ಗರ್ಜಿಸು
ತ್ತುರುತರ ಪರ್ವತಂ ಪ್ರತಿರವಂಗುಡೆ ಬೆರ್ಚಿಸಿ ತನ್ನಗೇಂದ್ರಕಂ
ದರ ಮೃಗರಾಜಿಯಂ ಜವದಿನೇೞ್ತರುತಿರ್ದುದು ಸೊರ್ಕಿದೆಕ್ಕಲಂ ೩.

ವ|| ಆ ಕಟಕದೊಳಿಂತು ಬರ್ಪ ಕಿಟಿಯಂ ಕಿಟ್ಟನೆ ಕಂಡು—

ಎಲೆ ಎಲೆ ಪಂದಿ ಪಂದಿ ಮಿಗೆಬಂದುದು ಬಂದುದು ಭಿಲ್ಲರೆಲ್ಲರಂ
ಬಲಿಗೊಳಲೆಂದು ಮೃತ್ಯು ಕಿಟಿರೂಪಮನಾಳ್ದವೊಲೊತ್ತು ಪತ್ತುನಿಲ್
ತೊಲಗದಿರಟ್ಟು ಕುಟ್ಟುತಿವಿಕೊಲ್ ತಱಿಗೋಣ್ಮಱಿಕುತ್ತುಸೀಳ್‌ಪಳಂ
ಚಲಸದೆ ಪೊಯ್ ಕುರುತ್ತಿಱಿಯೆನಿಪ್ಪ ರವಂ ಪಿರಿದಾಯ್ತು
ಬೇಡರೊಳ್ ೪

ವ|| ಎಂದು ಸಂರಂಭದಿಂ ಮುಟ್ಟೆ ಮೂದಲಿಸುತ್ತೊಟ್ಟಜೆಯಿಂ ತೊಟ್ಟ ಸಿಟ್ಟಿಗಳಂ ತಾಳ್ದು ಕಟ್ಟುಬ್ಬಟೆಯಿಂ ಕವಿದ ದಿಟ್ಟಬಿಯದರ ಪರ್ಬಿದಬ್ಬರಮನಾಲಿಸಿ ಕನಲ್ಕೆಮಿಗೆ ದಾಡೆಯಂ ಮಸೆದಂಡುಗೊಂಡು ತೃಣಮಂ ತುಂಡಿಸಿ ಬಾಲಂ ನಿಮಿರೆ ಕಾಲಂ ತೂಗಿ ಪಟುತರ ಶೌರ್ಯದಿಂ ಪುಳಿಂದನಿಳಿಂಪರ್ಗಭಿಮುಖಮಾಗಿ ನಿಂದು—

ನಡುಗೆ ಧರಿತ್ರಿ ದಿಕ್ಕರಿಗಳಳ್ಕೆ ಭಯಂಗೊಳೆ ಸತ್ತ್ವಸಂಕುಳಂ
ಪಡಲಿಡೆ ಶೈಲಶೃಂಗತತಿ ತುಳ್ಕೆ ಮಹಾಬ್ಧಿ ಕರಾಳಘೋಷದಿಂ
ಘುಡುಘುಡಿಸುತ್ತೆ ದಾಡೆಗಡಿದುರ್ಬೆ ಕಡಂಗುತೆ ಕಾಯ್ದುವೆತ್ತು ಕಣ್
ಗಡೆ ಕಿಡಿಸೂಸೆ ನೋಡಿದುದು ನಿಂದು ಪುಳಿಂದರನುಗ್ರಸೂಕರಂ ೫.

ವ|| ಮತ್ತಂ—

ತಿರುಗುತ್ತೊಂದೆರಡಡಿಯಂ
ಭರದಿಂದೋಡುತ್ತೆ ನಿಲುತೆ ಘೂರ್ಮಿಸುತುಂ ಕೊ
ಕ್ಕರಿಸುತಿದಿರಾಂತು ವಿಸಟಂ
ಬರಿದುದು ಸುರರಿದಿರೊಳರರೆ ಘೋರ ವರಾಹಂ ೬.

ಮುತ್ತಿದರಮರ್ತ್ಯಲುಬ್ಧಕ
ರತ್ತಂ ಘಡ ಘಡಯೆನುತ್ತೆ ಕೂರ್ಗಣೆವೞೆಯಂ
ಸುತ್ತಿಱಿದು ಕಱಿದರಾದೊದ
ರುತ್ತಸಿಯಂ ಜಡಿದು ಝುಂಕಿಸುತ್ತಿದಿರಾದರ್ ೭

ಪಟುಕೋಪಾಟೋಪ ಬದ್ಧ ಭ್ರುಕುಟಿ ವಿಚಳಿತಶ್ಮಶ್ರುಘರ್ಮಾಂಬು ಭಾಸ್ವ
ನ್ನಿಟಿಲಂ ಶೋಣಾಕ್ಷಿಕೋಣಂ ಪೆದೆಯನೆಱೆದು ಗಾಂಡೀವದೊಳ್
ತೊಟ್ಟು ರೌದ್ರೋ
ತ್ಕಟ ವೃತ್ತಂ ಜ್ಯಾರವಂಗೆಯ್ದಡಸಿ ಪಿಡಿದು ನಿಂದಾರ್ದು ಶಾತಾಸ್ತ್ರಮಂ ಸಂ
ಘಟಿಸುತ್ತುಂ ಮಾಣದೆಚ್ಚಂ ಕಪಟಶಬರನಂ ಕೊಳ್ವೆನುತ್ತುಗ್ರ ಪಾರ್ಥಂ ೨೮

ಗಿರಿಯಗ್ರದೊಳುಱೆ ಕಱೆವಂ
ಶರವೃಷ್ಟಿಯನಾತ್ಮಜನಕನಿಂದ್ರನೆನುತ್ತುಂ
ಪುರುಡಿಸಿ ಶರವೃಷ್ಟಿಯನಾ
ಗಿರಿಶಾಗ್ರದೊಳೆಯ್ದೆ ಕಱೆದನರ್ಜುನನದಟಿಂ ೨೯

ಧರೆಯೆತ್ತಾಗಸಮೆತ್ತ ತಳ್ತ ದೆಸೆಯೆತ್ತೆಂಬಂತೆ ಮುತ್ತಂ ಧನು
ರ್ಧರಪಾರ್ಥಂ ಬಿಡದೆಚ್ಚ ಮಾರ್ಗಣಕದಂಬಂ ಧಾರೆಯಿಂ ಪೊಣ್ಮೆ ದ
ಳ್ಳುರಿ ವಿದ್ಯುದ್ದ್ಯುತಿವಿಸ್ಫುಲಿಂಗತತಿ ಸುತ್ತಂ ಸೂಸೆ ಪಾಯ್ತಂದು ನಿ
ರ್ಭರದಿಂ ತೀವಿದುದಂಬಿನಂಬುಧಿಯುಳುಂಬಂ ಮುತ್ತಿದತ್ತೆಂಬಿನಂ ೩೦

ಮಂಜಿನ ಪುಂಜವೊತ್ತರಿಸಿ ಮುತ್ತಿ ಮುಸುಂಕೆ ಭಯಾರ್ತಿಗೊಳ್ವನೇ
ಕಂಜಸಖಂ ಪತಂಗತತಿ ಪಾಯ್ದೊಡೆ ಬೆರ್ಚುಗುಮೇ ದವಾಗ್ನಿ ವಾ
ತಂ ಜವದಿಂ ಪಳಂಚೆ ಗಿರಿ ಕಂಪನವಾಂಪುದೆ ಪಾಂಡುಪುತ್ರನಾ
ತಂ ಜಡಿದೊತ್ತೆ ಜಾಱೆ ಪೆಱಸಾರ್ವನೆ ಧೀರಧನಂಜಯಾಂಬಕಂ ೩೧

ವ॥ ಆಗಳ್—

ಮುಳಿದು ಗಜಾಸ್ಯನಬ್ಬರಿಸಿದಂ ಕೆರಳ್ದಂ ಗುಹನಲ್ಲಿ ರೋಷಮು
ಜ್ಜ್ವಳಿಸಿ ಗಣಾಳಿ ಗರ್ಜಿಸಿದುದಾ ನರನೇಱ್ಗೆ ಚಿತ್ರಮಿಂತಿದೇಂ
ಕಳಕಳಮೆನ್ನ ಭಕ್ತನಿವನೀತನೊಳಾಂಪ ವಿನೋದಮುಂಟು ನಿ
ಶ್ಚಳತೆಯೊಳಿರ್ಪುದೆಂದವರ್ಗೆ ನೇಮಿಸಿದಂ ಕರುಣಾಬ್ಧಿ ಶಂಕರಂ ೩೨

ವ॥ ಅನಂತರಮಾ ಶಬರಶಂಕರಂ ಪ್ರಚಂಡ ಧನುರ್ದಂಡಮಂ ಕೆಯ್ಕೊಂಡುತಿರು
ಪೊಯ್ದು ಜೇವೊಡೆದು ಬಾಣಮಂ ಪೂಡಿತೆಗೆ ನೆಱೆದೆಚ್ಚಾಗಳ್—

ನರನೆಚ್ಚ ಕಣೆಗಳಂ ಕ
ತ್ತರಿಸಿದುವವನೊಡಲನಂಟದಿಳೆಗೆಱಗಿದುವೀ
ಶ್ವರನಾಣತಿಯಿಂದಾತನ
ಪೊರೆಯೊಳ್ ಪುರಮಥನನೆಚ್ಚ ಪೊಸ ಕೂರ್ಗಣೆಗಳ್ ೩೩

ನಡುಗಿದುದಿಳೆ ಗಿರಿಶಿಖರಂ
ಕಡೆದುದು ಕದಡೆಟ್ದು ಜಡಧಿ ತುಳ್ಕಿದುದುಡುಗಳ್
ಬಿಡದುಳ್ಕಿದುವಹಿಪತಿ ಪೆಡೆ
ಯುಡುಗಿದನಿನಬಿಂಬಮುದಿರ್ದುದಳ್ಕಿದರಹಿತರ್ ೧೧

ಗಣತತಿ ಕಿಟಿಯಂ ಸದೆಯಲ್
ಕಣೆದುಡುತಿರೆ ಪುರ್ಬಿನಿಂದೆ ಜರ್ಬುತೆ ನಿಲಿಸು
ತ್ತ್ರಣಿಯುರಮುಭವಂ ತೆಗೆದಂ
ಡೊಣೆಯಿಂ ಪೊಗರುಗುವ ನಿಶಿತತರಮಾರ್ಗಣಮಂ ೧೨

ವ॥ ಅಂತುಮಾ ಕೂರ್ಗಣೆಯಂ ಮಾಣದೆ ಬಾಣಾಸನದ ತಿರುವಾಯೊಳ್ ಪೂಡಿ ನೀಡಡಿಗೊಂಡಾಕರ್ಣಾಂತಂ ಸೆಳೆದು ಸುರರಂ ಪಿಂಗದೆ ನುಂಗಲೆಟ್ತಿರ್ಪ ಮಿಟ್ತುವಿನಂತದಿರದಿದಿರ್ಚಿ ಗರ್ಜಿಸುತ್ತುಂ ಬರ್ಪ ಬಲ್ವಂದಿಯನಭೀಕ್ಷಿಸಿ—

ಪಂದಿಯಿದಂದಿನಗ್ಗದ ಗಜಾಸುರನಿಂ ಮದವತ್ತರಕ್ಷು ಸಂ
ಕ್ರಂದನವೈರಿಯಿಂ ಬಲದೊಳುಗ್ರತರಾಕೃತಿಯೊಳ್ ಪೊದಟ್ದು ನಿ
ಷ್ಪಂದ ಪರಾಕ್ರಮ ಸ್ಥಿತಿಯೊಳಿರ್ದುಡಿ ವೆಗ್ಗಳಮುಪ್ಪುದಿಂದಿದಂ
ಕೊಂದಪೆನಾನೆ ಮಿಕ್ಕಮರ ಸಂತತಿಗಿಂತಿದು ವಧ್ಯಮುಕ್ಕುಮೇ ೧೩

ವ॥ ಎಂದು ಬಗೆದಂತಕಾಂತಕಂ ಪ್ರತಿಜ್ಞಾರೂಢನಾಗಿ—

ಪ್ರಕಟಪಟು ರೋಷಬದ್ಧ
ಭ್ರುಕುಟಿ ಕರಾಳಾಸ್ತ್ರದಿಂದೆ ತೆಗೆನೆಱೆದೆಚ್ಚಂ
ಪ್ರಕುಟಿಲದಂಷ್ಟ್ರಾಭೀಷಣ
ವಿಕಟಾಂಗನನಾ ವರಾಹನಂ ಪುರಮಥನಂ ೧೪

ಎಚ್ಚೊಡಿಳೆಯುದಿರೆ ಶರಮಿರ
ದುಚ್ಚಳಿಸಿದುದೊಡಲದಱ ಕೆನ್ನೀರ್ ಭರದಿಂ
ಬೆಚ್ಚನೆ ಪಾಯ್ತರೆ ಕಣ್ಣರೆ
ಮುಚ್ಚುತ್ತುಂ ಮೂರ್ಛೆವೋದುದಲ್ಲಿ ವರಾಹಂ ೧೫

ವ॥ ಅಂತು ಹಮ್ಮೃದಂಬೋಗಿ ವಜ್ರಿವಜ್ರನಿರ್ಘಾತದಿನುರುಳ್ದನೀಲಾಚಲದಂತೆ ಪೊಡವಿಯೊಳ್ ಕೆಡೆದಿನಿಸಾನುಂ ಬೇಗದಿನೆಚ್ಚತ್ತು ಮದಮುಡುಗಿ ಬೇರ್ವರಿವ ಭೀತಿಯಿಂ ಬೆಂಗೊಟ್ಟು ಪರಿದು—

ಇಱಿಬರಿಯಂ ತರಿ ಕೊರಲಂ
ಮುಱಿ ಮೂಳಿಯನಡಗನುಗಿಯೆನುತ್ತ ಸವಸದಿಂ
ನೆಱೆ ಸುತ್ತಿದರಿರದೊತ್ತಿದ
ರುಱೆ ಮುತ್ತಿದರಮರಲುಬ್ಧಕರ್ ಪಟು ಕಿಟಿಯಂ ೮

ವ|| ಆಗಳವರ ಸಂರಂಭಮಂ ಕಂಡು ರೋಷಾವೇಶಮಂ ಕೆಯ್ಕೊಂಡು ದಾಡೆಗಡಿದು ಮಾರ್ಮಲೆತು ಮಾಮುಸಕಂ ಮಸಗಿ,—

ಒದೆದು ಧರಿತ್ರಿಯಿಂ ನೆಱೆ ಪುಟಂ ನೆಗೆದವ್ವಳಿಸುತ್ತೆ ತುಂಡಮಂ
ಬಿದಿರ್ದು ಕಡಂಗಿ ಗರ್ಜಿಸಿ ಘನಾಘನನಿಸ್ವನದಿಂ ತುಡುಂಕಿ ಪೊ
ಯ್ದುದು ಕುಡಿದಾಡೆಯಿಂದಿಱಿದುದೆತ್ತಿದುದಿರ್ಬಗಿಯಾಗೆ ಕಾಯಮೊ
ಟ್ಟಿದುದವರಟ್ಟೆಯಂ ಕೊಱಿದು ತಿಂದುದು ತೇಗಿದುದುಗ್ರ ಸೂಕರಂ ೯

ಎಚ್ಚಂಬುಗಳವು ರೋಮಮ
ನುಚ್ಚಳಿಸಲ್ಕಾಱದಲ್ಲಿ ತೊಡರ್ದಿರೆ ಕೊಡವು
ತ್ತಚ್ಚರಿಯ ಮುಳ್ಳಪಂದಿವೊ
ಲಚ್ಚಗಮಂ ಮಾಡಿ ಮಡಿಸಿದತ್ತದು ಸುರರಂ ೧೦

ವ|| ಆಗಳಿಚ್ಚಂಬಂ ಬಗೆಗೊಳದೆ, ಕನಲ್ಕೆಯಿಂ ಬಱಿಸಂದು ಬವರಿವರಿದು ತುಱುಗಿ ತುಡುಂಕುವ ಜಾಯಿಲಂಗಳಂ ಲೆಕ್ಕಿಸದೆ, ಮಿಡಿಯಿಂಶಿರಂಬರ ಮೆತ್ತಿ ಸೀಳ್ದು ಸದೆವ ಸಮದಸೂಕರನ ಸಮಸಮರಾಟೋಪಮಂ ಸೈರಿಸಲಾರದೆ ಕಣ್ಗೆಟ್ಟು ಬೆನ್ಗೊಟ್ಟೋಡಿಬರ್ಪಮರವ್ಯಾಧ ಸಂಘದ ಭಿಷಂಗಮಂ ಪಿಂಗಡೆಯೊಳಂಗನೆವೆರಸಿ ಬನದೊಳೊರ್ವನೆ ಬಿನದಿಪ ಕಪರ್ದಿ ಕಂಡು, ಕರುಣಂ ಪುಟ್ಟಿ, ಜವದಿಂದವರ್ಗಂಜದಿರಿಮೆಂದಭಯಹಸ್ತಮಂ ನೆಗಪಿ ಮಡಿದಮರರ್ಗಸುವಿತ್ತು ಸಕ್ಷತಾಂಗರನಕ್ಷತಾಂಗರನಾ ಕ್ಷಣಂ ನೆಗೞ್ದು, ನೆಗೞ್ತೆವೆತ್ತ ನಿಜವಾಮಕರಕಲಿತ ಪ್ರಚಂಡ ಕೋದಂಡ ಕೋಟಿಯೊಳ್ ಮಂಜುಸಿಂಜಿನಿಯಮರ್ಚಿ, ಕೆಯ್ಕೊಂಡು ತನ್ನನಗಲ್ದಲ್ಲಲ್ಲಿ ಸಂಚರಿಪ ಮನ್ನಣೆಯ ಗಣನಿವಹಂ ಕಳಕಳಮಂ ಕೇಳ್ದು ನಡೆತಂದೊಡನೇೞ್ತರೆ, ಮುಂದಣ್ಗೆ ಸಾರ್ದಮರರಂ ಬೆನ್ಗೊಳ್ವ ಸಂವರ್ತ ಸಮಯ ಯಮಮಹಿಷೋಪಮಾನಮಾದ ಭೀಕರಾಕಾರ ಮೂಕಾಸುರನಂ ತೊಟ್ಟನೆ ಕಟ್ಟಿದಿರೊಳ್ ಕಂಡು, ಕಾಯ್ಪುಗೊಂಡು ಚಂಡ ಧನುರ್ಗುಣಮಂ ನೀವಿ ಜೇವೊಡೆಯಲೊಡನೆ—

ರ್ಬಿನ ಕೊನೆಸನ್ನೆಯಿಂ ಗೊರವ ನಿನ್ನಯ ಶೌರ್ಯಮದಿರ್ಕೆ ಖಡ್ಗಮಿಾ
ಧನುಶರಮೆತ್ತ ನಿನ್ನ ತಪಮೆತ್ತ ವಿಚಿತ್ರಮಿದಲ್ತೆ ಧಾತ್ರಿಯೊಳ್ ೨೧

ವ|| ಎಂದೇಳಿದಂಗೆಯ್ದು ನುಡಿದ ಕಪರ್ದಿಯ ಕಟೂಕ್ತಿಯಂ ಕೇಳ್ದು—

ವಿಪಿನಚರ ನಿನಗೆ ತಕ್ಕುದು
ಚಪಲ ಮೃಗವ್ರಜದ ಬೇಂಟೆಯುಜ್ಜುಗಮೆಮ್ಮಾ
ತಪದ ವಿಚಾರಂ ತಕ್ಕುದೆ
ವಿಪರೀತಂ ನಿನ್ನ ನುಡಿಯನೊಲ್ವರೆ ಬಲ್ಲರ್ ೨೨

ಎಂದವನುಕ್ತಿಯಂ ಗಿರಿಶನಾಲಿಸಿ ತಾಪಸ ಲೇಸನಾಡಿದಯ್
ಕುಂದದೆ ಬೇಂಟೆಯುಜ್ಜುಗಮಿದೆಮ್ಮಯ ಕಜ್ಜ ಮಿದಪ್ಪುದಪ್ಪುದಾ
ವಂದದಿನಿಂತು ನಿನ್ನ ವೊಲದಾವನೊ ಶಾಂತಿ ಸಮಗ್ರನುಗ್ರಶೌ
ರ್ಯಂ ದಿಟಮಸ್ತ್ರಶಸ್ತ್ರಧರನಾದ ತಪಸ್ವಿಧರಾತಳಾಗ್ರದೊಳ್ ೨೩

ವ|| ಎಂದು ನುಡಿಯಲೊಡನೆ—

ಕಟಕಿಯಿದೇಂ ಪುಳಿಂದ ಬಿಡು ನಿನ್ನದುರುಕ್ತಿಯನೆಮ್ಮ ವೃತ್ತಿಯಂ
ಪಟುತಪಮಾಂತ ತಾಪಸರೆ ಬಲ್ಲರುದಾರ ಜಟಾ ಮೃಗಾಜಿನ
ಸ್ಫುಟಭಸಿತಂಗಳಂ ಶರಶರಾಸನ ಖಡ್ಗಮನಾಂತು ತಾಪಸೋ
ತ್ಕಟ ಮೃಡನಿರ್ಜನಾ ಮೃಡನ ಶಿಷ್ಯತೆಯಾಂತೆನಗೇನಿದೊಪ್ಪದೇ ೨೪

ನೀನೆನ್ನೊಳಾಹವಕ್ಕೆ ಸ
ಮಾನನೆ ತೊಲಗಾಂಪ ಧೀರನಂ ಬರಿಸೀಗಳ್
ಕಾನನಚರ ಸಮರದೊಳಭಿ
ಮಾನಮನುೞಿಯೆನೆ ಮಹೇಶ್ವರಂ ಮುಗುೞ್ದಿಂದಂ ೨೫

ಏನಾದೊಡೇನೊ ನಿನ್ನ ತ
ಪೋನೀತಿಯದಂತದಿರ್ಕೆ ನಿನ್ನ ಧನುರ್ವಿ
ದ್ಯಾನಿಪುಣತೆಯೆಂತೆಂತನು
ಮಾನಮದೇಂ ತೋರ್ಪುದೆನ್ನೊಳಡಗಿನಿಸರಿವೆಂ ೨೬

ವ|| ಎಂದು ಧೂರ್ಜಟಿ ಗಭೀರಧ್ವನಿಯಿಂ ಗಜರಿ ಗರ್ಜಿಸಿ ನುಡಿಯೆ—

ಒಳಸೋರ್ದುದು ಶಾಂತಿ ರಸಂ
ಮೊಳೆತುದು ಕೋಪಾಗ್ನಿ ಪೊಗೆದುದುಸಿರೊಳ್ ನಿಡುಗ
ಣ್ಗಳ ಕಡೆಯೊಳ್ ಕಿಡಿಗೆದರ್ದುದು
ಬೞ್ಕಲರ್ದುದು ಮೊಗದೊಳಚಲರಿಪು ನಂದನನಾ ೨೭

ಮಡು ಗಿಡು ಸರು ದರಿ ಪಳ್ಳಂ
ಸಿಡುಂಬು ಮೆಳೆ ಬಳ್ಳಿ ಪುಲ್ ಪೊದಱ್ ಬೆಟ್ಟುಗಳಿ
ಟ್ಟೆಡೆ ಕುತ್ತುಮುನಾನಲ್ಗಳೊ
ಳೆಡೆವಿಡದೋಡಿತ್ತು ಪಂದಿ ಜವದಿಂದಾಗಳ್ ೧೬

ಬೆಂಬೞಿವಿಡಿದಟ್ಟುತ್ತುಂ
ತಾಂ ಬರೆವರೆ ಬಿಡದಧಿಜ್ಯಧನು ಶಬರೇಶಂ
ಮುಂಬರಿದರ್ಜನನಿರ್ದ ಬ
ನಂ ಬೊಕ್ಕದು ಪಂದಿ ಸುೞಿದುದಾತನ ಬೞಿಯೊಳ್ ೧೭

ವ|| ಅಗಳ್ ಬೞಿವಿಡಿದು ಬಳಸಿ ಕವಿದು ಕುಬುಬೆಂದು ಬೊಬ್ಬಿಱಿವ ಸುರಕಿರಾತ ನಬ್ಬರಮಂ ಕೇಳ್ದಿದೆತ್ತಣದೆಂದು ಯೋಗಿ ಯೋಗಮನುಪಶಮಿಸಿ, ಕಣ್ದೆಱೆದು ಮುಂದಿರ್ದ ಭೀಕರಾಕೃತಿವೆತ್ತ ಮಹಾವರಾಹಂ ನೋಡಿ, ಬನದ ತಪಸ್ವಿಗಳ್ಗುಪಹತಿಗೆಯ್ವುದಿದಂ ತವಿಪುದೆನಗೆ ಕರ್ತವ್ಯಮಕ್ಕುಮೆಂದು ನಿಜಕ್ಷಾತ್ರಧರ್ಮಮಂ ಬಗೆದು, ಮೂಡಿಗೆಯಿಂ ತೋಡಿದಲ್ಲ ಚಂಡಕಾಂಡ ಮನುಗಿದು, ಗಾಂಡೀವಿ ಗಾಂಡೀವದಿರ್ದೆಸೆಯ ಕೊಪ್ಪನಾರಯ್ದು ಪೆದೆಯಂ ತೊಡರ್ಚಿ ಜೇವೊಡೆದು ಪೂಡಿ ನೀಡಡಿಗೊಂಡು ತೆಗೆನೆಱೆದುನಿಂದು—

ಕೆಡೆಕೆಡೆಯೆಂದಾರ್ದೆಚ್ಚಂ
ಘುಡುಘುಡಿಪ ಮಹಾವರಾಹನಂ ಕೂರ್ಗಣೆಯಿಂ
ಕಡುಗಲಿ ಪಾರ್ಥಂ ನೆಱನಂ
ನಡೆಗೋಣಡಿಗೊಂಡು ಪಂದಿ ಕೆಡೆದತ್ತಾಗಳ್ ೧೮

ಜವದಿನಲ್ಲಿಗೆ ಬಂದು ಶಂಕರನೆಂದನೀ ಕೀಟಿಯೆಮ್ಮದಾಂ
ತವಿಸಿದೆಂ ತೆಗೆಯೆಂದು ಭೂತಗಣಕ್ಕೆ ಪೇಳ್ವುದುಮಾಲಿಸು
ತ್ತವಿಕಲಂ ಕೆಡೆದತ್ತಿದೆನ್ನಯ ಬಾಣದಿಂ ಕಡೆಸಾರ್ ಬಿಡೆಂ
ದವನನೀಶ್ವರನೆಂದು ಬಲ್ಲನೆ ಪಾರ್ಥನೊತ್ತಿ ಕೆರಳ್ಚಿದಂ ೧೯

ಎಲೆ ಶಬರ ಕಾಡ ಬಡನರಿ
ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮಂ ದೋ
ರ್ಬಲಮುಮಂ ಮೆಱೆಗುಮುದಲ್ಲದೆ
ಚಲದಂಕನೊಳೆನ್ನೊಳಿಂತುಮೇಂ ಮೆಱೆದಪುದೆ ೨೦

ಎನೆ ನಸುನಕ್ಕು ಮಾರರಿಪುವಾತನ ಧೈರ್ಯಮನಾತನೇೞ್ಗೆವೆ
ತ್ತನುಗತಶೌರ್ಯಮಂ ಬೞಿಯೊಳಿರ್ಪಗಜಾತೆಗೆ ಸೂಚಿಸುತ್ತೆ ಪು

ಶರವೃಂದಂ ಮಾಣದೆಲ್ಲಂ ಕಡಿವಡೆದಿಳೆಯೊಳ್ ಬೀೞೆ ಕರ್ಣಾರಿಕೋಪಾ
ತುರಚಿತ್ತಂ ಮತ್ತಮೆಚ್ಚಂ ಕಿವಿವರೆಗುಗಿದುದ್ದಂಡ ಕಾಂಡಂಗಳಂ ಶಂ
ಕರನಾ ಬಾಣಂಗಳಂ ಖಂಡಿಸಿ ಮಗುೞ್ದು ನಿಜಾಸ್ತ್ರಂಗಳಿಂದೆಚ್ಚನಾಗಳ್
ಬೆರಲಿತ್ತುತ್ತೆಯ್ದೆ ಕೊಂಡಾಡಿದನವನ ಮಹಾಶೌರ್ಯಮಂ
ಪಾಂಡುಪುತ್ರಂ ೩೪

ಎಲೆ ಶಬರ ನಿನ್ನ ಪೃಥು ಭುಜ
ಬಲಮೊಳ್ಳಿತ್ತೆಸುಗೆ ಪೊಸತು ಬಿಲ್ಲಾಳ್ತನದೊಳ್
ಕಲಿ ನೀನಲ್ಲದೆ ಪೆಱರಾರ್
ಚಲದಿಂ ಸಮನೆನಿಸಿ ಕಾದಿದಯ್ ಬಿಡದೆನ್ನೊಳ್ ೩೫

ಅರರೆ ಭವದೀಯ ಸಾಹಸ
ದಿರವತಿಶಯಮೆಂದು ಪೊಗೞ್ದು ತೊಟ್ಟೆಚ್ಚಂದ
ಳ್ಪುರಿ ಸೂಸುವ ಧಾರೆಯಿಂ ಕಿಡಿ
ಸುರಿವ ನಿಶಾತಾಸ್ತ್ರ ಬೃಂದಮಂ ಕಲಿಪಾರ್ಥಂ ೩೬

ಶಿವನಿಂ ದಿವ್ಯತರಾಸ್ತ್ರಮಂ ಪಡೆಯಲೀಟ್ಟಂದಂದು ಪಾರ್ಥಂ ಮಹೋ
ತ್ಸವದಿಂದಂ ತನಗುಳ್ಳ ಸರ್ವಶರಮಂ ದೇವೇಶ ನೋಡೆಂದು ತೋ
ರ್ಪವೊಲೆಚ್ಚಂ ಕಡಿದಾ ಕಳಂಬಮನಿತಂ ನಿನ್ನಿಷ್ಟಮಾದಸ್ತ್ರಮಂ
ತವೆ ನೋಡೆಂದವನಲ್ಲಿ ತೋಱುವವೊಲಾತಂಗೆಚ್ಚನುಗ್ರಾಂಬಕಂ ೩೭

ವ|| ಅಂತೆಚ್ಚಪುಳಿಂದ ಪುರಾಂತಕನ ಬಿಲ್ಬಿನ್ನಣಕ್ಕೆ ಬೆರಗುವಟ್ಟು—

ನರಸುರದಾನವಾದಿಗಳೊಳಿನ್ನ ಶರಾಹತಿಗೊಡ್ಡಿ ನಿಲ್ವರಿ
ಲ್ಲರಿದರಿದಾರ್ಪುಗುಂದದಿದಿರೊಳ್ ನೆಱೆನಿಂದೆ ಕಿರಾತರಲ್ಲಿ ನೀ
ನುರುತರ ಸಾಹಸಾಂಕನೆನಿಪಯ್ ನಿನಗಾರ್ ಸರಿವರ್ಪರಳ್ಳದೋ
ಸರಿಸದೆ ನಿಲ್ವುದಿನ್ನುಮೆನುತಂ ಪೊಗೞ್ದಾತನನೊಲ್ದು ಫಲ್ಗುನಂ ೩೮

ಎನಿತಂ ತಾನೆಚ್ಚನಸ್ತ್ರಪ್ರಕರಮನಭಿಮಂತ್ರಾನ್ವಿತಂಗೆಯ್ದು ಕೂರ್ಪಿಂ
ದನಿತಂ ಕಾಲಾಂತಕಂ ನುಂಗಿದನಸವಸದಿಂದಂತದಂ ಕಂಡುಮಿಾ ಶ
ಕ್ತಿನಿಯುಕ್ತಂ ವ್ಯಾಧನಲ್ಲಾವನೊ ತಿಳಿದಪೆನೆಂಬೀ ವಿಚಾರಕ್ಕೆ ಪಕ್ಕಾ
ದನೆ ಪಾರ್ಥಂ ಕ್ಷಾತ್ರದುಸ್ತ್ರಾಮಸಮಡಸಿದವಂಗಕ್ಕುಮೋ ಸದ್ವಿವೇಕಂ ೩೯

ಸವೆದುದು ನಿಷಂಗಶರತತಿ
ಸವೆಯದು ಕೋಪಾಗ್ನಿ ತಿಳಿವು ಮಸುಳ್ದುದು ಸಮರೋ

ತ್ಸವಮತಿ ಸಲೆ ಕಳೆಯೇಱಿದು
ದವಂಗೆ ಪಶುಪತಿಯ ಮಾಯೆಯುಂ ಮಿಾಱುವರಾರ್ ೪೦

ಶಂಕರನಂಘ್ರಿ ಪಂಕಜದ ಸೇವೆಗೆ ಕಂಟಕನಾದನೇ ಪುಳಿಂ
ದಂ ಕರಮಿಾತನುರ್ಕನಗಿವೆಂ ಬಿಡೆನೆಂದು ಜಯೋದ್ಯಮಕ್ಕೆ ನಿಃ
ಶಂಕತೆವೆತ್ತು ನಿರ್ಭರದೆ ಗರ್ಜಿಸಿ ಮುಂಬರಿದೆತ್ತಿ ಚಾಪದಿಂ
ದಂ ಕಲಿಪಾರ್ಥನಪ್ಪಳಿಸಿದಂ ಪಱಿ ಪೊರ್ದದ ಚಂದ್ರಮೌಳಿಯುಂ ೪೧

ದಂಡೆಗೊಳುತ್ತ್ರದಂ ಪೊಳೆದು ಚಿಮ್ಮಿದನೀಶ್ವರನಲ್ಲಿ ನೋಣದಂ
ಕಂಡು ಕನಲ್ಕೆಯಿಂ ಮಗುೞ್ದು ಬಳ್ಕಿದನೀ ಹತಿಗೆಂದು ಚಂಡ ಕೋ
ದಂಡಮನೆತ್ತಿಪೊಯ್ದನವನೀಶನ ಪೇರುರಮಂ ಕಪರ್ದಿ ಮುಂ
ಕೊಂಡು ಮೃದುಸ್ಮಿತಂ ಮಿನುಗೆ ತದ್ಧನುವಂ ಸೆಳೆದಂ ಕರಾಗ್ರದಿಂ ೪೨

ವ|| ಅಂತುಮಾ ಗಾಂಡೀವ ಕೋದಂಡಮನುದ್ದಂಡಚಂಡಿಕಾರಮಣಂ ಸೆಳೆದು
ಕೊಳ್ವುದುಮತಿರೋಷಕಷಾಯಿತ ಕಟಾಕ್ಷನಾಗಿ—

ತಿಳಿವಣಮಿಲ್ಲದೆಟ್ಟಿರದ ತಾಮಸಪಂಕದೊಳಾೞ್ದಡಾಯುಧಂ
ದಳೆದೊರೆಯಿಂದೆ ಕಿೞ್ತು ಜಡಿದಾರ್ದು ಪಳಂಚೆ ಕಿರಾತ ಬೀಱಿನು
ತ್ತೊಳಱಿ ಕಡಂಗಿ ಪೊಯ್ದನಭವಾಂಗಮನರ್ಜುನನಾಪುರಾರಿ ಕೆಯ್
ಚಳಕದಿನೀೞ್ದು ಕೊಂಡನದನಾಗಳೆ ಕೆಯ್ ಬಱಿದಾಯ್ತು ಪಾರ್ಥನಾ ೪೩

ಶರತತಿಯೆಲ್ಲಂ ಬಯಲಾ
ಯ್ತುರುಧನುವುಂ ಪೋಯ್ತಡಾಯುಧಂ ಜಗುೞ್ದುದು ಕೋ
ಡಿರದುದಿರ್ದಿಭದವೊಲಿರ್ದಂ
ನರನೀಶ್ವರನೊಡನೆ ಸದರಮಪ್ಪುದೆ ಸಮರಂ ೪೪

ಶರಚಾಪಾಯುಧಮೆಲ್ಲಮುಂ ಜಗುೞ್ದೊಡೇಂ ಬೆನ್ನಿತ್ತನೇ ಸಾಧ್ವಸಾಂ
ಕುರಮಂ ತಾಳ್ದನೆ ಪಾರ್ಥನಂದಮಮ ಶೌರ್ಯೋದ್ರೇಕದಿಂದುರ್ಬಿ ಪೆರ್
ಮರಗೊಂಬಂ ಮುಱಿದಿಟ್ಟನಾತ್ಮಕರದಿಂ ಕಿೞ್ತೆತ್ತಿ ಕಲ್ಗುಂಡ ಬಲ್
ಸರಿಯಂ ಸೂಸಿದನಂತದಂ ಕಡಿದನೊಂದೆಂಬಿಂದೆ ಮೃತ್ಯುಂಜಯಂ ೪೫

ವ|| ಅಂತು ಕಡಿದು—

ಎಲೆ ಗೊರವ ಚಾಪಬಾಣಾ
ವಲಿಯಂ ಖಡ್ಗಮುಮನಕಟ ನೀಗಿದೆ ನಿನ್ನೀ

ಚಲವುಂ ಬಲವುಮುನಿನ್ನೊಂ
ದಲಗುಳ್ಳೊಡೆ ತಂದು ತಾಳ್ದು ಮೆಱೆ ಬೞಿಕೆನ್ನೊಳ್ ೪೬

ಇಲ್ಲದೊಡಿಲ್ಲೆನ್ನಿತ್ತ್ರಪೆ
ನಿಲ್ಲಿಯೆ ನಿಂತಾಯುಧಂಗಳಂ ಪಿಡಿ ರಣದೊಳ್
ಗೆಲ್ಲಲ್ಕೆ ಸಾರ್ದ ಕಲಿ ನೀ
ನೆಲ್ಲಂದದಿನೆನ್ನೊಳಾಂತು ಗೆಲ್ವುದೆ ಕಜ್ಜಂ ೪೭

ವ|| ಎನೆ ಧನಂಜಯಂ ದರಸ್ಮಿತಾಸ್ಯನಾಗಿ—

ಇನಿತೊಂದುರ್ಬಟೆಯೇಂ ಪುಳಿಂದ ಬಿಡು ನಿನ್ನೀ ಬಿಂಕಮಂ ಮಾಣ್ಗೆ ಶ
ಸ್ತ್ರ ನಿಶಾತಾಸ್ತ್ರ ನಿಕಾಯದಿಂ ನೆಗಟ್ವ ಯುದ್ಧಂ ಮುಷ್ಟಿಯುದ್ಧಕ್ಕೆ ನಿಂ
ದನುವಾಗೀಗಳೆ ತೋರ್ಪೆನೆನ್ನ ಬಲವದ್ದೋರ್ದಂಡ ಶೌರ್ಯ ಪ್ರವ
ರ್ತನಮಂ ನೋಡುಗೆ ನಿನ್ನ ನಚ್ಚಿನ ಕಿರಾತವ್ರಾತಮೆನ್ನಂದಮಂ ೪೮

ವ|| ಎಂದು ನುಡಿದ ಸಂಕ್ರಂದನ ನಂದನನ ನಿರರ್ಗಳ ನಿಸ್ಸಹಾಯ ಪರಾಕ್ರಮೋಕ್ತಿಗೇಳ್ದು ನೆರೆದ ಗಣ ಸಂದೋಹಮುಂದಾಶ್ಚರ್ಯಮಂ ತಾಳ್ದು ನೆಲವೆರ್ಚೆ ಪೊಗೞುತ್ತಿರೆ ಬೞಿ ನಿಂದಿರ್ದ ಗಿರಿನಂದನೆಯೊಡನೆ ಗಿರೀಶ ನಿಂತೆಂದಂ—

ಎಲೆ ಗಿರಿಜಾತೆ ನೋಡಿವನ ಸಾಹಸಮಂ ಸಲೆ ನಾಲ್ಕು ತಿಂಗಳುಂ
ವಿಲಸಿತ ಜೀರ್ಣಪರ್ಣಮನೆ ಮೆಲ್ದುಱಿದೊಪ್ಪುವ ನಾಲ್ಕು ತಿಂಗಳ
ಗ್ಗಲಿಸಿದ ವಾಯುವಂ ಸವಿದು ನಿಗ್ರಹಿಸಿರ್ದ ಶರೀರದಿಂದದೇಂ
ಕಲಿಯೊ ಕಡಂಗಿ ಕಾದಿದನಿವಂ ಸಮದಂಡಿಯೊಳೆನ್ನೊಳರ್ಜುನಂ ೪೯

ಕಾದುವ ಕೆಯ್ದು ಪೋದುದೆನುತಳ್ಕಿದನೇ ಭುಜಶೌರ್ಯಶಕ್ತಿಗೆಂ
ಟಾದುದೆ ಸಾರವೀರರಸಮೇಂ ಬಿಸಿಗುಂದಿದುದೇ ಸಹಾಯಮಂ
ಸಾದರಮೊಚ್ಚತಂ ಪಡೆವೆನೆಂಬಭಿಲಾಷೆಯನಾಳ್ದುದೇ ಮನಂ
ಕಾದಲೆ ನೋೞ್ಪುದೀತನ ಸಮಗ್ರಪರಾಕ್ರಮಮುರ್ವಿ ಪೆರ್ಚುಗುಂ ೫೦

ಕುಲಗಿರಿ ಸಂಚಲಿಸಿದೊಡಂ
ಜ್ವಲದೌರ್ವಂ ತಂಪನಾಳ್ದೊಡಂ ರವಿಬಿಂಬಂ
ಸಲೆ ಕರ್ಗಿದೊಡಂ ರಣದೊಳ್
ಕಲಿಪಾರ್ಥಂ ಭೀತಿವಟ್ಟು ಬೆನ್ಗೊಟ್ಟಪನೇ ೫೧

ಹರಿಯಂಶೋದ್ಭೂತನೀತಂ ಶುಭಗುಣನಿಧಿಮತ್ಪಾದಭಕ್ತಂ ಸಪತ್ನೋ
ತ್ಕರಸಂಹಾರಾರ್ಥಮೆನ್ನೊಳ್ ಪಡೆಯಲೆಳಸಿ ದಿವ್ಯಾಸ್ತ್ರಮಂದಲ್ ತಪಸ್ಸಂ
ಚರಣಂಬೆತ್ತಿಲ್ಲಿ ನಿಂದಂ ಕಿಟಿಯ ಕತದೆ ಮದ್ವೇಷಮಂ ತಾಳ್ದಿದಂ ಸಂ
ಗರಮಂ ಕೆಯ್ಕೊಂಡಿವಂಗಿತ್ತಪೆನಿವನೆಳಸಿರ್ದಸ್ತ್ರಮಂ ಶೈಲಪುತ್ರೀ ೫೨

ಶರದಭ್ಯರ್ಥನದಿಂ ತಪಃಸ್ಥಿತಿಯೊಳಿರ್ದಂ ಶಾಂತಿಯಂ ಮಾಣ್ದು ಸೂ
ಕರನಂ ಬಾಣದಿನೆಚ್ಚದಂ ಬಯಸುತೆನ್ನೊಳ್ ಕಾಳೆಗಂಗೆಯ್ದನೀ
ನರನೆಂದಾತನ ದೋಷಮಂ ನೆನೆಯದಾದಂ ಕೀರ್ತಿಸುತ್ತಿರ್ದನೀ
ಶ್ವರಿಯೊಳ್ ಶಂಭುಗೆ ಭಕ್ತವತ್ಸಲತೆ ಸಲ್ಗುಂ ಮೇಣ್ ಪೆಱರ್ಗಕ್ಕುಮೇ ೫೩

ವ|| ಎನಿಸಿ ಭಕ್ತಜನ ಪ್ರಣಯಲೀಲಾಲಸಂ ಶೂಲಧರನೊಯ್ಯನೆ ಪೊಗೞ್ದನಂತರಂ ಮುಷ್ಟಿಯುದ್ಧಸನ್ನದ್ಧನಾಗಿ ನಿಂದ ಪಾರ್ಥನಿದಿರ್ಗೆವಂದೋರೊರ್ವರುದೀರ್ಣರೋಷಾವೇಶಪರುಷಪಾಟಲಿತಕಟಾಕ್ಷದಿನಡರೆ ನೋಡಿ ಬಾಹಾಸ್ಫಾಲನಂಗೆಯ್ಯಲೊಡನೆ—

ತುಳ್ಕಿದುದಂಬುಧಿ ತಾರೆಗ
ಳುಳ್ಕಿದುವಾಗಸದೆ ನಡುಗಿದತ್ತಿಳೆ ಫಣಿಪಂ
ಬಳ್ಕಿದನಗಶಿಖರಂಗಳ್
ಕಳ್ಕನೆ ಕೆಡೆದುವು ತದೀಯಪಟುನಿಸ್ವನದಿಂ ೫೪

ವ|| ಅನಂತರಮಿರ್ಬರುಂ ನಿರ್ಭರದಿಂದುರ್ಬಿ ಬೊಬ್ಬೆಗೊಟ್ಟಬ್ಬರಿಸಿ ಗಜರಿ ಗರ್ಜಿಸಿ ಕಡಂಗಿ ಕೆಯ್ವಿಡಿದು ಪಳಂಚಿ ಪತ್ತಿ—

ಕುಲಗಿರಿಯುಗ್ಮಮಾಳ್ದ ಪುರುಷಾಕೃತಿಯಿಂದೆ ಪಳಂಚುವಂತಿರು
ಜ್ಜ್ವಲ ಬಡಬಾಬ್ಧಿವಹ್ನಿಯುಗಮಾಂತು ನರಾಂಗಮನಣ್ಮಿಕಾದುವಂ
ತಲಘುಮೃಗಾಧಿಪದ್ವಯಮೊಡಂಬಡೆ ಮಾನವವೇಷಮುರ್ತು ಸಂ
ಚಲಿಸದೆ ಪೋರ್ವವೊಲ್ ಪೊಣರ್ದರುರ್ಬಿ ವೃಷಧ್ವಜಮುರ್ಕಟ
ಧ್ವಜರ್ ೫೫

ಪಿಡಿಯೆ ಕರಾಗ್ರಮಂ ಬಿಡಿಸುತೌಂಕೆ ಬಿದಿರ್ಚುವ ತಟ್ಕೈಗೆಯ್ಯೆಮೆಯ್
ಗೊಡಪಿ ತೆರಳ್ಚುವವ್ವಳಿಸೆ ಸಿಲ್ಕದೆ ಲಂಘಿಪ ಸಂಚಿನಿಂದೆ ಪೊ
ಯ್ದೊಡೆ ಪೊಳೆವಾರ್ಪಿನಿಂದೆಱಗೆ ಚಿಮ್ಮುವ ಬಾಹುಗಳಿಂದೆ ಕಂಠಮಂ
ತೊಡರೆ ಕುನುಂಗಿ ಪಯ್ಸರಿಪ ಬಿನ್ನಣಮೊಪ್ಪೆ ಕಡಂಗಿ ಕಾದಿದರ್ ೫೬

ನಿಡುಸುಯ್ಯಿಂ ಭುಗಿಲೆನೆ ಪೊಱ
ಮಡೆ ಪೊಗೆ ಮಿಗೆ ಮುಷ್ಟಿಯುಗಳ ಘಟ್ಟನದಿಂ ಕೆಂ
ಗಿಡಿ ಕೆದಱೆ ಗರ್ಜನಕ್ಕಿಳೆ
ನಡುಗೆ ಮಹಾಹವಮನೆಸಗಿದರ್ ಧುರಗಲಿಗಳ್ ೫೭

ಪದಘಾತಕ್ಕೆ ಧರಾತಳಂ ಕುಸಿಯೆ ಕೂರ್ಮಂ ಕುರ್ಗೆ ಭೋಗೀಂದ್ರನ
ಗ್ಗದ ದೀರ್ಘಸ್ಫಟೆ ಕಂಠದೊಳ್ ನೆಲಸೆ ಬಾಹುಭ್ರಾಂತಿ ಸಂಘಾತವಾ
ತದ ಘಾತಕ್ಕೆ ಪಯೋಧರಂ ಕೆದಱೆ ಬಾನೊಳ್ ಜೀರ್ಣಪರ್ಣಂದಲೊ
ಡ್ಡಿದ ವಿದ್ಯಾಧರಪುಷ್ಪಕಂ ಜಗುಳೆ ಯುದ್ಧಂಗೆಯ್ದರೀಶಾರ್ಜುನರ್ ೫೮

ತೊಡೆಯುಂ ಪೊಡೆಯುಂ ಭುಜಮುಂ
ಮುಡುಪಂ ಪೇರುರಮನಳಿಕಮಂ ನೆತ್ತಿಯುಮಂ
ಪೆಡತಲೆಯುಂ ಬರಿಯುಂ ಕಾ
ಯ್ಪಿಡಿದೊರ್ವರಣ್ಮಿ ಪೊಡೆದರ್ ಕಲಿಗಳ್ ೫೯

ವ|| ಮತ್ತಮಾಗಳ್—

ಮಾಣದೆ ಮತ್ತೆಱಗಿದನಾ
ಸ್ಥಾಣುವನಬ್ಬರಿಸಿ ಸಿಡಿಲ ಮಾಱ್ಕೆಯೊಳಭವಂ
ಕಾಣುತದಂ ಸ್ಥೈರಿಸುತುಂ
ಕೇಣಂಬಡೆದೊತ್ತಿ ಮೆಟ್ಟಿದಂ ಗಾಂಡಿವಿಯಂ ೬೦

ಒಕ್ಕುದು ನೆತ್ತರ್ ಬಾಯಿಂ
ಮಿಕ್ಕಲರ್ದುಸಿರಿಡುವ ಮೂಗಿನೆರಡುಂ ಕಡೆಯಿಂ
ದಕ್ಕಟ ತಪ್ಪಾಯ್ತೆನುತುಂ
ಮುಕ್ಕಣ್ಣಂ ಮುಱುಗಿ ಮನದೆ ಸಿಡಿಮಿಡಿಗೊಂಡಂ ೬೧

ವ|| ಅಂತು ಮರುಗಿ ಕರುಣಾಕರಂ ಕಪರ್ದಿ ಕೆಯ್ದೆಗೆದು ನಿಂದಾಗಳ್—

ಬಱಿತುದು ಧೈರ್ಯವಾರ್ಧಿಬಱಿನಾದುದು ಪೆರ್ಚಿದಶಕ್ತಿಬಿಂಕಮುಂ
ತೊಱೆದುದು ಚಿತ್ತವೃತ್ತಿ ನೆಱೆನೆರ್ಗಿದುದಿಂದ್ರಿಯರಾಜಿ ಬೀತುದೆ
ಟ್ಟಱುವೊಳಸೋರ್ದುದುತ್ಸವಮುಡಂಗಿದುದುನ್ನತಿ ಕುಂದನಾಳ್ದಿನೆಂ
ಬೆಱಕದ ದೇವಮಾವರಿಸೆ ನೊಂದು ಪಲುಂಬಿದನಾ ಧನಂಜಯಂ ೬೨

ಅಳ್ಳಱಿದುದು ಮಾನಸಮಂ
ತಳ್ಳಂಕಂ ತನುಬೆಮರ್ತುದಾಹವದೆಸಕಂ

ಪೊಳ್ಳಾದುದು ಚಿಂತೋದ್ಗಮ
ಮುಳ್ಳಲದುರ್ಗದವಂಗೆ ಸೋಲದಿಂ ಸುಖವೊಳವೇ ೬೩

ಒಳಗೊಳಗಟಲ್ದು ಚಿಂತಾ
ಕುಳತೆಯನೊಳಕೊಂಡು ಬೇಡನಿವನೆನ್ನಿಂದ
ಗ್ಗಳಿಸಿದೆನೆ ಮತ್ಪರಾಕ್ರಮ
ಮೊಳಸೋದುದೆ ಚಿತ್ರಮೆಂದವಂ ಖತಿಗೊಂಡಂ ೬೪

ಶಿವಪದ ಭಕ್ತಿಯಂ ತೆಱದೆನೋ ಶಿವಸಿಂದೆಯನೆಯ್ದೆ ಕೇಳ್ದೆನೋ
ಶಿವ ನಿಜಭಕ್ತರಂ ಪೞದೆನೋ ಶಿವ ಪೂಜೆಯುಗೆಯ್ಯದನ್ನಮಂ
ಸವಿದೆನೊ ಶೈವಸುವ್ರತಮನಾಳ್ದೆಡೆವಿಟ್ಟೆನೊ ಪೂರ್ವಜನ್ಮದೊಳ್
ಶಿವಶಿವ ತಾನದಲ್ಲದೊಡೆ ಸಾರ್ಗುಮೆ ಸಂದೆನಗೀ ಪರಾಭವಂ ೬೫

ಎಲ್ಲಂದದಿನಾಹವದೊಳ್
ಗೆಲ್ಲಂ ಶಬರಂಗೆ ಸೋಲಮೆನಗಾಯ್ತು ಕಟ
ನ್ನೆಲ್ಲಿಯದು ವಿಜಯನಾಮು ಸ
ಮುಲ್ಲಸಿತಖ್ಯಾತಿಯೆಂದು ಬಿಸುಸುಯ್ವುತ್ತುಂ ೬೬

ಎತ್ತಣ ಬನಮೆತ್ತಣ ಕಿಟಿ
ಯೆತ್ತಣ ಕಾಟ್ಬಿಯದನಾಗಮಂ ಶಿವ ಶಿವ ಮೇ
ಣೆತ್ತಣ ಕಾಳೆಗದುಜ್ಜಗ
ಮೆತ್ತಣ ಪರಿಭವಮಿದೆನಗೆ ಸಾರ್ದುದು ಚಿತ್ರಂ ೬೭

ಈತಂ ನರನಕ್ಕುಮೊ ಪಡಿ
ಮಾತೇಂ ಮುಗುಟ್ದಾನೆ ಶಬರನಪ್ಪೆನೊ ರಣಸಂ
ಜಾತ ಜಯಲಕ್ಷ್ಮಿಯಗ್ಗದ
ಬೂತಾಟಮೊ ತಿಳಿಯೆನೆಂದವಂ ಚಿಂತಿಸಿದಂ ೬೮

ವ|| ಎಂದು ಪಲವಂದದಿಂ ಪಲುಂಬಿ ವಿರೂಪಾಕ್ಷನುಪೇಕ್ಷೆಯಿಂದೀ ಪರಾಜಯಂ ತಗಳ್ದುದೆಂದು ನಿಜಾಂತರಂಗದೊಳ್ ಬಗೆದು ಕರುಣಾಬ್ಧಿಯಪ್ಪ ಶಂಕರನಂ ಕಿಂಕರತೆಯಿಂ ಶರಣ್ಬೊಕ್ಕು, ತತ್ಕಾರುಣ್ಯಂಬಡೆದು ಪಗೆಯಂ ಪರಾಭವಿಪೆನೆಂದು ಕೌಂತೇಯಂ ಚಿಂತಾಪಂಕಮಂ ವಿವೇಕಜಳದಿಂ ತೊಳೆದು ವಿಮಳಮನಸ್ಕನಾಗಿ—

ಪರಮ ಶಿವಾಗಮೋಕ್ತವಿಧಿಯಿಂ ಮಣಲಿಂ ನೆಗೞ್ದೊಂದು ಲಿಂಗಮಂ
ನಿರುಪಮಭಕ್ತಿಯಿಂ ತಿರಿದು ಪಡ್ಡಳಿ ಬಂದುಗೆ ಕಕ್ಕೆ ಮುತ್ತ ಪಾ
ದರಿಗಳ ಪೂಗಳಂ ಮೃದುಳಬಿಲ್ವದಳಂಗಳನಲ್ಲಿ ತಂದು ಶಂ
ಕರನನೊಱಲ್ದು ಪೂಜಿಸಿದನರ್ಥಿತವೈರಿಜಯಂ ಧನಂಜಯಂ ೬೯

ನಿನ್ನ ಪದಭೃತ್ಯನೆನಿಸಿ
ರ್ದೆನ್ನಂ ಗೆಲ್ದಂ ಕಿರಾತನೀತನನೀಗಳ್
ಬನ್ನಂ ಬಡಿಸುತೆ ಸೋಲಿಪ
ಪನ್ನತಿಕೆಯನಿತ್ತು ಪೊರೆ ಕೃಪಾಳುಗಳರಸಾ ೭೦

ಎನ್ನಾಳ್ದಂ ನೀನಿರುತಿರೆ
ಬನ್ನಮಿದೆನಗಾಗೆ ಕೊಱತೆಯಾವಂಗೆಂಬಾ
ಬಿನ್ನಣಮಂ ತಿಳಿದೆನ್ನಂ
ಮನ್ನಿಸಿ ರಿಪುಜಯಮನಿತ್ತು ಪೊರೆ ಪುರಮಥನಾ ೭೧

ವ|| ಎಂದು ಪಲವಂದದಿಂ ನುತಿಸಿ ದೈನ್ಯಂದೋಱಿ ಪಾರ್ಥಂ ಪ್ರಾರ್ಥಿಸಿ ಶಬರಂ
ಗಭಿಮುಖನಾಗಿ ನಿಂದು ನಿರೀಕ್ಷಿಸಿ ನಿಜಭುಜಾಸ್ಫಾಲನಂಗೆಯ್ದು—

ಇನ್ನಱಿಯಲ್ಕೆ ಬರ್ಪುದೆಲೆ ಧೂರ್ತಕಿರಾತ ಭವತ್ಪರಾಕ್ರಮ
ಪ್ರೋನ್ನತಿಯೆಟ್ಟರಂ ಪೊಱಮಡೆನ್ನಧಿನಾಥಮಹೇಶನೊಲ್ಮೆದಲ್
ಸನ್ನಿದಮಾದುದಿಂದೆನಗೆ ನಿನ್ನಸುವಂ ನೆಱಪೀರ್ವೆನಾವದೇ
ವನ್ನಿನಗೋತುಬರ್ಪನವನಂ ಸದೆದಿಕ್ಕುವೆನೀಕ್ಷಣಾರ್ಧದೊಳ್ ೭೨

ವ|| ಎಂದು ರೋಷಾರುಣೇಕ್ಷಣದಿನಭೀಕ್ಷಿಸುತ್ತಿರೆಯಿರೆ—

ಮಣಲ ಲಿಂಗದ ಮಸ್ತಕಾಗ್ರದ ಪುಷ್ಪಮಂಜರಿ ಮಾಣದಾ
ಕ್ಷಣಮೆ ತಳ್ತಡದಾ ಕಿರಾತನ ಮಂಡೆಯಲ್ಲಿರೆ ಕಂಡು ಕಾ
ರಣಮಿದೇಂ ಪೊಸತೆಂದು ಸಾದ್ಭುತಮಾನಸಂ ಮುಗುೞ್ದೀಕ್ಷಿಸು
ತ್ತಣೆಯರಂ ಬಿಡದಿತ್ತ ಲಿಂಗದ ಶೂನ್ಯಶೀರ್ಷಮನರ್ಜುನಂ ೭೩

ಇದನಿನ್ನುಂ ಮಗೞ್ದೊರ್ಮೆ ನೋೞ್ಪೆನೆನುತಂ ಪೂಗೊಂಚಲಂ ತಂದು ಸೂ
ಡಿದನಾ ಲಿಂಗದ ಮಸ್ತಕಾಗ್ರದೊಳೆ ಸಮ್ಯಗ್ಭಕ್ತಿಯಿಂದಾಗಮೋ
ಕ್ತದ ಮಾರ್ಗಂಬಿಡಿದೊಲ್ದು ಪೂಜಿಸಿ ಕರಂ ಕೊಂಡಾಡಿ ಮೆಯ್ಯಿಕ್ಕಿ ನೋ
ಡಿದನಿತ್ತಲ್ ಶಬರೋಕ್ತಮಾಂಗದೆಡೆಯಂ ಪ್ರಾಂಚದ್ಗುಣಂ ಫಲ್ಗುಣಂ ೭೪

ಕಂಡನಖಂಡ ಪುಷ್ಪಭರಮಂಜರಿಯಂ ಶಬರೋತ್ತಮಾಂಗದೊಳ್
ಮಂಡಿತ ಲಿಂಗ ಮಸ್ತಕದೊಳಂತದನೀಕ್ಷಿಸಿ ಕಾಣದಾದನಾ
ಖಂಡಲಸೂನುವದ್ಭುತರಸಂಬಡೆದಾೞ್ದಿ ಭಯಾಬ್ಧಿಯಲ್ಲಿ ಮುಂ
ಕೊಂಡು ಮುಱುಂಗಿ ತೇಲ್ದುವವನೀಕ್ಷಣಯುಗ್ಮಪಯಶ್ಚರದ್ವಯಂ ೭೫

ಹರಹರ ದೇವದೇವನಿವನಲ್ತೆ ಶಿವಂ ಭುವನೈಕ ವಲ್ಲಭಂ
ಗುರು ಸಕಲಾಮರರ್ಗೆ ಶಬರಾಕೃತಿಯಿಂ ಮದನುಗ್ರಹಾರ್ಥಮೀ
ಪರಿ ನಡೆತಂದನಲ್ತೆ ತಪದುಬ್ಬೆಗದುದ್ಭ್ರಮೆ ನೆತ್ತಿವತ್ತೆ ಸೈ
ತಿರದೆ ಮರುಳ್ತನಂದಳೆದಿದಿರ್ಚಿದೆನೆನ್ನವೊಲಜ್ಞನಾವನೋ ೭೬

ವ|| ಎಂದು ಬಗೆದಾಗಳ್—

ಪಡಿದೆಱೆದಂತೆ ಪಾಱೆತೆರ್ದೆ ಜವ್ವನೆ ಜುಮ್ಮನೆ ಮೆಯ್ನವಿರ್ ಪೊದ
ೞ್ದಿಡಿಕಿಱಿದತ್ತು ಘರ್ಮಜಲಮುಣ್ಮಿದುದಂಗದೊಳಾಗ್ರಹ ಗ್ರಹಂ
ಕಡೆದೊಲಗಿತ್ತು ಕೌತಕರಸಂ ಬಗೆಗುರ್ವಿದುದುತ್ಸವಂ ಮಡ
ಲ್ತುಡರ್ದ್ಧು ಭೀತಿ ಬೇರ್ವರಿದುದೇೞ್ಗೆಯನಾಳ್ದುದು ರಾಗಸಂಪದಂ ೭೭

ಬೀತುದು ಬಿಂಕವೋಡಿದುದು ಮೂಢತೆ ಮೂಡಿದುದಶ್ರು ಕಣ್ಗಳೊಳ್
ಕಾತುದು ಭೀತಿವಲ್ಲರಿ ಮನೋಗತಮುಂ ತಱಿಸಂದು ನಿಂದುದು
ದ್ಭೂತ ಮಹಾದ್ಭುತಂ ಮನದೊಳಂಗದೊಳಾಯ್ತು ವಿವರ್ಣವೃತ್ತಿ ಚಿಂ
ತಾತುರನಾಗಿ ಬೆಳ್ಪಳಸಿ ಬೇವಸಮಂ ತಳೆದಂ ಧನಂಜಯಂ ೭೮

ಉಱುವೆಳಗು ಸಂಜೆ ನಸುಮ
ರ್ಬಳುರ್ದಂಬರದಂತೆ ತಿಳಿವು ರಾಗಂ ನೆಗೞ್ದು
ಮ್ಮಳಮನೊಳಕೊಂಡ ಬಗೆಯಿಂ
ತಳವೆಳಗಾಗುತ್ತೆ ಪಾರ್ಥನಂದಿಂತೆಂದಂ ೭೯

ತಿಳಿದೆನೆ ಶಂಭುವೆಂದು ಬಹುಬಾಣದಿನೆಚ್ಚೊಡೆ ತಾಗದಂದದೇಂ
ತಿಳಿದೆನೆ ದಿವ್ಯಮಾರ್ಗಣದಿನಾನಿಸೆ ತಳ್ವದೆ ನುಂಗಿದಂದದೇಂ
ತಿಳಿದೆನೆ ಕೆಯ್ಯ ಚಾಪಮನಡಾಯುಧಮಂ ಸೆಳೆದೀೞ್ದುಕೊಂಡೊಡಂ
ತಿಳಿವೊಳಸಾರ್ದುದಕ್ಕಟ ಪುರಾಕೃತಕರ್ಮದ ಪೆರ್ಮೆಯೆಂತುಟೋ ೮೦

ಆವನ ಮಾಯೆಯಂ ತ್ರಿಜಗಮಾದುದು ಸೂರ್ಯ ಸುಧಾಕರರ್ ಪೊದ
ೞ್ದಾವನ ತೇಜದಿಂ ಬೆಳಗುವರ್ ಭುವನೋತ್ಕರರಕ್ಷೆ ಶಿಕ್ಷೆ ಮೇಣ್
ಆವನಧೀನಮಾವನೊಳೆ ತೋರ್ಪುದು ವಿಶ್ವಮಿದೆಂದುಮಾ ಮಹಾ
ದೇವನೊಳಾಹವಂ ಗಡೆನಗದ್ಭುತಮದ್ಭುತಮೇನನೆಂದಪೆಂ ೮೧

ಪರಮೈಶ್ವರ್ಯಾಸ್ಪದನೊಳ್
ಪರಿಪೂರ್ಣ ಪರಪ್ರಕಾಶನೊಳ್ ಪಶುಪತಿಯೊಳ್
ಪರಶಕ್ತಿಯುಕ್ತನೊಳ್ ಪರ
ತರಮಹಿಮನೊಳಾಂತಿದಿರ್ಚುತೆಚ್ಚಾಡಿದೆನೇ ೮೨

ಶಿವಶಿವ ಸಲ್ಬುದೇ ಸಮರಮಿಂತೆನಗದ್ವಯನೊಳ್ ಮಹೇಶನೊಳ್
ಭವಹರನೊಳ್ ಮಹಾಮಹಿಮನೊಳ್ ಜ್ವಲನಾಕ್ಷನೊಳಕ್ಷಯಾಂಗನೊಳ್
ಪ್ರವಿದಿತನಾದ ಬಿಂದು ಕಳೆಯಿಂ ಮಿಗೆ ಮೀಱಿದನೊಳ್ ಶ್ರುತಿಸ್ಮೃತಿ
ಸ್ತವನಕತೀತನೊಳ್ ಜಗದ ಜೀವರನಾಡಿಪ ಸೂತ್ರಧಾರನೊಳ್ ೮೩

ಹರನೊಲವನಾಂಪ ಬಗೆಯಿಂ
ಪಿರಿದು ತಪಂಗೆಯ್ದು ಬೞಿಕಮದನುಳಿದೀಗಳ್
ಕರಮಜ್ಞತೆಯಿಂ ಪೊಣರ್ದೆಂ
ಹರಚರಣದ್ರೋಹಕಿಂತು ಭಾಜನನಾದೆಂ ೮೪

ಮೂದಲೆಮಾತುಗಳ್ ಗಡ ಮಹಾನಿಗಮೋಕ್ತಿಗತೀತನೊಳ್ ಜಯಾ
ಹ್ಲಾದದ ಝಂಕೆಗಳ್ ಗಡ ಜಗತ್ರಯದುರ್ಜಯನೊಳ್ ಶರೌಘದಿಂ
ಭೇದಿಪ ಬಿನ್ನಣಂ ಗಡ ಜಿತಾಂತಕನೊಳ್ ಮಿಗೆ ಮುಷ್ಟಿಯುದ್ಧದಿಂ
ಕಾದುವ ಕಜ್ಜಮುಂ ಗಡ ನಿರಂಗನೊಳಿಂತಿದು ಚಿತ್ರಮಲ್ಲವೇ ೮೫

ಭಯಭಕ್ತಿಸ್ಪೃಹೆವೆತ್ತುನೋಟ್ಪ ನಯನಂ ರೋಷಾರುಣಾವೇಶದು
ರ್ಣಯಕಿಂಬಾಯ್ತು ಪದಾಬ್ಜಪೂಜನಕೆ ಪಕ್ಕಾಗಿರ್ದ ಕೆಯ್ ಕೆಯ್ದುವಂ
ರಯದಿಂ ತಾಳ್ದಿದಿರಾಂತುದೀಶ್ವರಮಹಾಮಂತ್ರಕ್ಕೆ ಬೀಡಾದ ಜಿ
ಹ್ವೆಯೆ ಮಾಱುತ್ತರವಾಂತುದಕ್ಕಟ ಮಹಾವ್ಯಾಮೋಹಮೇಗೆಯ್ಯದೋ ೮೬

ಎಂದಿಂತು ಚಿಂತಿಸುತೆ ಪಲ
ವಂದದೆ ಬಗೆನೊಂದು ಹಮ್ಮದಂಬೋಗಿರೆ ಪಾ
ರ್ಥಂ ದಯೆಯಿಂದವನಿರ್ದೆಡೆ
ಗಿಂದುಧರಂ ತಳರ್ದು ತಣ್ಪುವೀಱಿದನಾಗಳ್ ೮೭

ಪೊಗೆಯುಳಿದಗ್ನಿಯಂತೆ ಮುಗಿಲೋಡಿದ ಭಾಸ್ಕರನಂತೆ ಮಾಯೆಮೆಯ್
ದೆಗೆದ ನಿಜಾತ್ಮನಂತಿರೊಱೆಯುರ್ಚಿದ ಕೂರಸಿಯಂತೆ ಕಾಂತಿ ಕೆಯ್
ಮಿಗೆ ಶಬರಾಂಗಮಂ ತೊಱೆದು ಪೂರ್ವನಿಜಾಕೃತಿವೆತ್ತಲಂಪಿನಿಂ
ಸೊಗಯಿಸುತಿರ್ದನಾಗಮಶಿರಂ ಪೊಗಱುತ್ತಿರೆ ಚಂದ್ರಶೇಖರಂ ೮೮

ವಿತತಸುಗಂಧಿ ಸಾರಸುರಭೀಕೃತ ದಿಙ್ಮುಖಚಂಚರೀಕ ಸಂ
ಗತಮಕರಂದಪೂರ್ಣ ಸುಮನೋಗಣಪಾಣಿ ವಿಮುಕ್ತ ಭೂರಿದಿ
ವ್ಯ ತರುಲತಾಂತವೃಷ್ಟಿ ಸುರಭೇರಿಯ ನಿರ್ಭರನಾದಮುಣ್ಮೆ ಸ
ನ್ನುತಸುರರಾರ್ದುಘೋಷಯೆನೆ ವಿಜೃಂಭಿಸಿ ಸೂಸಿದುದೀಶ್ವರಾಂಘ್ರಿ
ಯೊಳ್ ೮೯

ಹರಗಣಮುಂ ಸುರಗಣಮುಂ
ಕಿರಾತವೇಷಮುನಗಲ್ದು ದಿವ್ಯಾಭರಣಾಂ
ಬರ ಗಂಧ ಮಾಲಿಕಾಬಂ
ಧುರಮೆಸೆದುದು ಮುನ್ನಿನಂತಿರಭವನ ಪೊರೆಯೊಳ್ ೯೦

ಉಱಿದು ಪುಳಿಂದಿನೀವಿಹಿತ ವಿಭ್ರಮಮುಂ ಸುರಕಾಮಿನೀಜನಂ
ಬಳಸಿರೆ ತಾನುಮಂತೆ ನಗನಂದನೆ ಹಾರಕಿರೀಟ ಕುಂಡಲೋ
ಜ್ಜ್ವಳಕಳಕಾಂಚಿ ಕಂಕಣ ಪದಾಂಗದ ಮುಖ್ಯವಿಭೂಷಣಾಳಿ ಕಣ್
ಗೊಳಿಸಿರೆ ದೇವದೇವನೆಡದೊಳ್ ನೆಲಸಿರ್ದಳುದಾರಶೋಭೆಯಿಂ ೯೧

ವ|| ಆಗಳ್

ಬೆಮರ್ವರ್ಕಳೇವರಂ ಸುರಿವ ಸಂತಸಗಣ್ಬನಿ ತಳ್ತ ಕಂಪನಂ
ನಿಮಿರ್ದಸೆವಂಗರೋಮತತಿ ಕಣ್ಗೊಳಿಸುತ್ತಿರೆ ತಳ್ವದೆಟ್ಟಿ ಸಂ
ಭ್ರಮದ ಪೊದಟ್ಕೆಯಿಂ ಮುದದ ಪೆರ್ಚುಗೆ ಸಂದಣಿಗೊಳ್ವಿನಂ ಪದಾ
ಬ್ಜಮನಮರ್ದಪ್ಪೆ ಮೌಳಿ ಮಣಿದಂ ಮಹಿಯಂ ತನು ಸೋಂಕೆ
ಪಾಂಡವಂ ೯೨

ವ|| ಅಂತೆಱಗಿ ಪರುಜಂ ಸಂಜೀವನಮುಂ ಸವಿದಂತೆ, ಬಡವಂ ಕಡ ವರಂಗಂಡಂತೆ, ಕಡಲೊಳಾಟ್ವಂ ತೆಪ್ಪಮನಪ್ಪಿದಂತೆ, ಜಾತ್ಯಂಧಂ ಕಣ್ಪಡೆದಂತೆ ನಿರತಿಶಯ ಸಂಮುಧಮನೊಳಕೊಂಡು ಕರಾರವಿಂದಂಗಳಂ ಪಣೆಯೊಳಮರ್ಚಿನಿಂದು

ಪದತಳದೊಳ್ ತೊಡಂಕಿ ಪರಿದಾಡಿ ಪೊದಟ್ದಿಸೆವಂಗದೇಶದೊಳ್
ಪದೆದುರದಲ್ಲಿ ಸಯ್ಪರಿದು ಮಂಜುಳಕಂಠಮನಪ್ಪಿ ವಕ್ತ್ರಪ
ದ್ಮದೊಳೆಡೆಗೊಂಡು ಸುತ್ತಿ ಸುೞಿದಾಡಿಬೞಲ್ದು ಸರಿತ್ಸುಧಾಂಶುಗಳ್
ಪುದಿದ ತದೀಯಮೌಳಿಯೊಳೆ ವಿಶ್ರಮಿಸಿರ್ದುದು ದೃಷ್ಟಿಪಾರ್ಥನಾ ೯೩

ವ|| ಅಂತು ಪಡಗರದಿನವನಭವನನಭೀಕ್ಷಿಸಿ,

ಚಳಚಿತ್ತಂ ಜಾಡ್ಯವೃತ್ತಂ ಚಪಳಮತಿ ಮದಾಂಧಂ ಮಹಾ ಮೋಹ
ಮೂರ್ಖಾ
ವಿಳನಾಶಾಪಾಶಬದ್ಧಂ ಕುಟಿಲನಧಮನಾದೆನ್ನೊಳಾರಯ್ವುದೇಂ ನಿ

ರ್ಮಳಭಕ್ತಿಜ್ಞಾನ ಭಾಸ್ವದ್ಗುಣಗಣಮನುಮಾನಾಥ ಸರ್ವಾಪರಾಧಂ
ಗಳನೀಗಳ್ ತಳ್ವದೆಂತುಂ ಮಱೆ ಪೊರೆ ಪುರುಳಿಲ್ಲಿಲ್ಲಮೆನ್ನೊಳ್
ಪುರಾರೀ ೯೪

ಅಱಿದಱಿದುಂ ಮತಿಭ್ರಮಿತನಾದ ಮದಾಂಧಕನಾನೆಕಂಡು ಕಂ
ಡೆಱಗದ ಖೂಳನಾನೆ ಕುಱಿವಾನಿಸನಾನೆ ಕುಬುದ್ಧಿಯಾನೆ ಕ
ಟ್ಟೆಱಿಕೆಯ ದುಷ್ಟನಾನೆ ಮಱೆ ದೇವ ಮದೀಯಶತಾಪರಾಧಮಂ
ಮೆಱೆ ಕರುಣಾಬ್ಧಿ ನಿನ್ನ ಸುಗುಣೋನ್ನತಿಯಂ ಭುವನೈಕವಲ್ಲಭಾ ೯೫

ವ|| ಎಂದು ಪರಮೋತ್ಸವದಿಂ ಸನ್ನುತಿಗೆಯ್ದು ಮತ್ತಮಿರದೆ—

ಅತಿ ಕೋಪಾತುರನಾಗಿ ಮಾಟ್ಪಿ ತಪಮಂ ನೀಗಾಡಿ ಮುಂಬಿಟ್ಟು ಸ
ಕ್ಷತಕಾಯೋಗ್ರವರಾಹಮಂ ಸದೆದದಂ ಕೊಳ್ವಾಸೆಯಿಂದಜ್ಞತಾ
ಸ್ಥಿತಿವೆತ್ತೆಚ್ಚು ಶರಂಗಳಿಂ ಪೊಣರ್ದೆನೆನ್ನಿಂ ದ್ರೋಹಿಯಾವಂ ಜಗತ್
ಪತಿ ನಿನ್ನಿಂ ಪೆಱನಾವನೀ ಭುವನದೊಳ್ ದೇವಂ ಕ್ಷಮಾಸಂಯುತಂ ೯೬

ವ|| ಎಂದು ದೈನ್ಯಂದೋಱಿ ಭಕ್ತಿ ಭರದಿಂ ಮಗುಳ್ದುಂ ದಂಡಪ್ರಣಾಮಂ ಗೆಯ್ದು
ಪದಯುಗಮಂ ತೆಗೆದು ಬಿಗಿದಪ್ಪಿ ನೆತ್ತಿಯೊಳ್ ಪೊತ್ತು,

ಪುಟ್ಟಿಂದು ಸಫಲಮಾದುದು
ನೆಟ್ಟನೆ ಮದ್ವಂಶಕುಸುಮಮುಲರ್ದುದು ಪೆಱತೇಂ
ಮುಟ್ಟಿದೆನತಿಶಯ ಪದವಿಯ
ಬಟ್ಟೆಯನೆಲೆ ದೇವದೇವ ನೀನೊಲ್ದುದಱಿಂ ೯೭

ವ|| ಎಂದು ಸನ್ನುತಿಗೆಯ್ವ ಪಾರ್ಥನ ಸಮುನ್ನತ ಭಕ್ತಿಭಾವಕ್ಕೆ ಭವಾನೀ
ರಮಣಂ ಮೆಚ್ಚಿಮನಂದಂದು,

ಪದೆದಮರ್ದಪ್ಪಿದಂ ಗುಹಗಜಾಸ್ಯರನಪ್ಪುವ ತೋಳ್ಗಳಿಂದೆ ಮಾ
ಣದೆ ನರನಂ ಮೃಡಂ ಪರಸಿದಂ ನಿಗಮಂಗಳ ಪೆತ್ತ ಬಾಯ್ಗಳಿಂ
ಮುದಮಲರ್ವಂತೆ ಮೆಯ್ದಡಪಿದಂ ವರಭೀವಕರಾಬ್ಜದಿಂದೆ ನೋ
ಡಿದನಖಿಳಾಘಮಂ ತೆಮರ್ವ ಕಣ್ಗಳಿನಾ ನರನೇಂ ಕೃತಾರ್ಥನೋ. ೯೮

ವ|| ಅಂತು ಮನ್ನಿಸಿ ಮತ್ತಮಿರದೆ—

ನಿನ್ನ ಕಟೂಕ್ತಿ ಮಂತ್ರಮೆನಗೆಚ್ಚ ಶರಾವಳಿ ಪುಷ್ಪಸಂಚಯಂ
ನಿನ್ನ ಸರೋಷವೀಕ್ಷಣದ ದಿಧೀತಿದೀಪಿಕೆಯರ್ಚನೋಚಿತಂ

ನಿನ್ನ ಧನುರ್ಲತಾಹತಿಯ ಬಾಸುಟಿ ಪೂಗಳಮಾಲೆಯೊಚ್ಚತಂ
ನಿನ್ನಯೆ ಮುಷ್ಟಿಯುದ್ಧಮದು ಮತ್ಪದಪೂಜೆ ನಿಜಂ ಧನಂಜಯಾ ೯೯

ವ|| ಎಂದು ಕೃಪಾಪಾಂಗದಿನಭೀಕ್ಷಿಸಿ,

ಇದು ನಿನ್ನ ವರಶರಾಸನ
ಮಿದು ಶರಮಿದು ಖಡ್ಗಮಿಂತಿದಂ ಪಿಡಿಯೆಂದಾ
ಮದನರಿಪುವಿತ್ತು ಮುಂಕೊಂ
ಡುದನಾವುದು ನಿನ್ನಭೀಷ್ಟಮುದನೊರೆಯೆಂದಂ ೧೦೦

ವ|| ಎನೆ ಮಹೋತ್ಸವಂದಳೆದು ಕೆಯ್ದಾವರೆಗಳಂ ಮುಗಿದು—

ಕರುಣಿಪುದೆನಗೆಲೆ ಕರುಣಾ
ಕರ ಪಾಶುಪತಾಸ್ತ್ರಮಂ ಮಹಾಬ್ರಹ್ಮಶಿರಃ
ಶರಮಂ ಸಮಸ್ತರಿಪು ಸಂ
ಹರಮಂ ದಯೆಯಿಂದೆನುತ್ತೆ ಬೇಡುತ್ತಾಗಳ್ ೧೦೧

ಸರದೊಳ್ ಮಿಂದೆಸಗುತ್ತುಮಾಚಮನಮಂ ಸದ್ಭಕ್ತಿಯಿಂ ಪಾದಪಂ
ಕರುಹಕ್ಕೊಲ್ದೆಱಗಿರ್ದ ಗಾಂಡಿವಿಗೆ ತತ್ತನ್ಮಂತ್ರಪೂರ್ವಂ ಕೃಪಾ
ಭರಿತಂ ಬ್ರಹ್ಮಶಿರೋಸ್ತ್ರಮಂ ಕರುಣಿಸುತ್ತುಂ ಮತ್ತಮಿತ್ತಂ ಗುಣಾ
ಭರಣಂ ಪಾಶುಪತಾಸ್ತ್ರಮಂ ಪದೆಪಿನಿಂ ಕೊಂಡಾಡೆ ದೇವವ್ರಜಂ ೧೦೨

ಒರೆದೇಕಾಂತದೊಳೊಪ್ಪಿನಿಂದೆ ನಿಜಭಾಸ್ವತ್ತತ್ತ್ವಮಂ ಮೋಕ್ಷದೊಂ
ದಿರವಂ ನಿನ್ನ ಸಮಸ್ತಕಾರ್ಯಕೆ ಸಹಾಯಂ ಮಾಣದೆನ್ನಂಶಮಾ
ದರವಿಂದಾಂಬಕನಂತೞಿಂ ನಿನಗೆ ಕುಂದೆಂದುಂ ವಲಂ ತೋಱದಾಂ
ತರಿಯಂ ಗೆಲ್ದಪೆ ಸೌಖ್ಯಮಕ್ಕುಮೆನುತುಂ ಪೇೞ್ದಂ ಭವಾನೀಧವಂ ೧೦೩

ವ|| ಆಗಳ್ ನಿಜೇಷ್ಟಲಾಭಮುದಿತಾಂತಃಕರಣಂ ಪುರಂದರನಂದನಂ ಪುರ ಹರನ ಪೊರೆಯೊಳೆಸೆವ ಕರುಣಾರಸಭರಿತೆಯುಂ ಗಿರಿತನುಜೆಯುಂ ಕಂಡು ಸಾಷ್ಟಾಂಗ ಮೆಱಗಿ ನಿಂದು ಕರಾಂಜಲಿವೆರಸು,

ಕಮಲಭವಾಂಡಕೋಟಿಗಳನೇಕ ನಿಜಾಂಶದೆ ಪೆತ್ತು ಮೇಣವಂ
ಪ್ರಮುದದಿನೋವಿ ಚಿದ್ಗಗನರೂಪದಿನಾಂತರಬಾಹ್ಯದೊಳ್ ಸಮಾ
ಕ್ರಮಿಸಿ ಮುಸುಂಕಿ ಸಂಹರಿಸುತಂತ್ಯದೊಳದ್ವಯಮಾದ ಬೊಮ್ಮದೊಳ್
ಸಮರಸವಾಳ್ದ ನಿನ್ನಿರವನಾರ್ ಸಲೆಪೇೞ್ವರೊ ಸರ್ವಮಂಗಳೇ ೧೦೪

ವ|| ಎಂದು ಸಂದಣಿಪಾನಂದದಿಂ ಸನ್ನುತಿಗೆಯ್ವ ಕರ್ಣರಿಪುವನಪರ್ಣೆ ಪೂರ್ಣ ಕೃಪೆಯಿನಭೀಕ್ಷಿಸಿ,

ಬಾರೆಲೆ ಪದ್ಮಲೋಚನನ ಮಯ್ದುನ ಪಾಂಡವ ನಿನ್ನ ಭಕ್ತಿವಿ
ಸ್ತಾರಮಿದಿತ್ತುದೆನ್ನ ಬಗೆಗುತ್ಸವಮಂ ಪಿಡಿ ಕೊಟ್ಟಪೆಂ ಭವದ್
ವೈರಿನಿಕಾಯಮಂ ಕ್ಷಣದೊಳರ್ದಿಪ ಬಾಣಮನೆಂದು ಸದ್ಗುಣಾ
ಧಾರೆ ಧರಾಧರೇಂದ್ರಸುತೆಯಿತ್ತಳುದಾರತರಾಂಜನಾಸ್ತ್ರಮಂ ೧೦೫

ಮೊದಲೊಳಿದೊಂದು ಪತ್ತು ತುಡುವಲ್ಲಿ ಶತಂ ಬಿಡುವಲ್ಲಿ ಸಾಸಿರಂ
ಪದಮಿಡುವಲ್ಲಿ ವೈರಿಶರಸಂಹತಿಯಂ ತಱಿವಲ್ಲಿ ಲಕ್ಷಮು
ಗ್ಗದ ಗತಿಯಲ್ಲಿ ಕೋಟಿ ಸಮರಾಂಕಣದೊಳ್ ಗಣನಾವಿಹೀನಮ
ಪ್ಪುದುರಿಪುವೃಂದಮಂ ತವಿಸಿ ನಿನ್ನೆಡೆಗೆಯ್ದುಗುಮೀಮಹಾಶರಂ ೧೦೬

ಎಂದೊರೆದು ಕರುಣಿಸುತೆ ಗಿರಿ
ನಂದನೆ ಭುವನೈಕಮಾತೆ ಜಯಮಂ ಪಡೆ ನೀಂ
ಕಂದ ಸಮರಾಂಗಣದೊಳಿನು
ತ್ತುಂದಮರರ್ ಪೊಗೞೆ ಪರಸಿದಳ್ ಗಾಂಡಿವಿಯಂ ೧೦೭

ಶಿವಪಾದಾಬ್ಜದ ಸೋಂಕಿನಿಂ ವಿಮಳತೇಜಃಸ್ಫೂರ್ತಿಮೆಯ್ವೆರ್ಚೆ ಪೊ
ಣ್ಮುವ ಮಂದಸ್ಮಿತಸಾಂದ್ರಚಂದ್ರಿಕೆಪೊದಱ್ದಾಸ್ಯೇಂದು ಕಣ್ಗೊಪ್ಪೆ ಕಾಂ
ತಿವಿಶೇಷಸ್ಫುಟಫುಲ್ಲಲೋಚನಯುಗಂ ಚೆಲ್ವಾಗೆ ಸೌಂದರ್ಯ ಸಾ
ರವಿರಾಜತ್ತನು ಗಾಡಿವೆತ್ತು ಮೆಱೆದಂ ಗಾಂಡೀವ ಚಾಪಾಯುಧಂ ೧೦೮

ವ|| ಅಂತೆಸೆದಿರ್ಪಿನಮಾಗಳ್,

ಸುರಲೋಕಕ್ಕಿರದೆಯ್ದಿ ನಿರ್ಜರವರಂಗಾನಂದಮಂ ಸಾರ್ಚಿ ಸಾ
ದರಮಲ್ಲಿಂ ಬೞಿಕೆಯ್ದಿ ಧರ್ಮತನಯಂ ಮುಂತಾದ ಭಾಸ್ವತ್ಸಹೋ
ದರರೊಳ್ ನೀಂ ಬೆರೆದಾಂತ ವೈರಿಗಳನೆಮ್ಮಾ ಬಾಣದಿಂ ಗೆಲ್ದು ಭಾ
ಸುರ ಸಾಮ್ರಾಜ್ಯಮನಾಳ್ವುದೆಂದು ಗಿರಿಶಂ ಬೀೞ್ಕೊಟ್ಟನಾ
ಪಾರ್ಥನಂ ೧೦೯

ಪರಮಾನಂದಮಯಂ ಪ್ರಸನ್ನವದನಂ ಪದ್ಮಾಪ್ತಕೋಟಿ ಪ್ರಭಾ
ವರಣಂ ಪನ್ನಗಭೂಷಣಂ ತ್ರಿಭುವನಾಧೀಶಂ ತ್ರಿತತ್ತ್ವಾತ್ಮಕಂ
ನಿರಘಂ ನಿಶ್ಚಲನಪ್ರತರ್ಕ್ಯಮಹಿಮಂ ಗೌರೀಶನೊಪ್ಪಿರ್ದನ
ಚ್ಚರಿವೀಱುತ್ತಖಿಳರ್ಗೆ ಸಂತತ ಕೃಪಾರತ್ನಾಕರಂ ಶಂಕರಂ ೧೧೦

ಪದಿನಯ್ದುನೆಯದಿದೆನಿಸುವ
ಮದನಾರಿಯ ಶಬರಲೀಲೆಯಂ ವಸ್ತುಕಮಾ
ರ್ಗದೊಳೊರೆದೆಂ ಕೆಯ್ಕೊಳ್ವುದು
ಸದಮಳಮೃಡಭಕ್ತರೆನಿಪ ವಿಬುಧರ್ ಧರೆಯೊಳ್ ೧೧೧

ಹಸ್ತಿನಾಪುರದ ವರ್ಣನೆ

ಅದಟ ಪೊಱವೊಟಲ ವಿಶಾಳ ಕನಕ ಕೃತಕ ಗಿರಿಗಳಿಂ
ಫಳಪ್ರಕೀರ್ಣ ತರುಗಳಿಂ
ನನೆಯಕೊನೆಯ ತಳಿರ ಮುಗುಳ ವನಲತಾ ನಿಕುಂಜದಿಂ
ಪ್ರಸೂನರಜದ ಪುಂಜದಿಂ
ಗಗನತಳಮೆ ಪಱಿದು ಬಿಟ್ಟುದೆನಿಪ ಬಹುಕಟಾಕದಿಂ
ಕುಕಿಲ್ವ ನಲಿವ ಕೋಕದಿಂ
ಸುರಿವ ಸುರಯಿಯರಲ ಮುಗುಳ್ಗೆ ಮೊಗಸಿದಳಿ ಕುಳಂಗಳಿಂ
ತೊದಲ್ವ ಶಿಶು ಶುಕಂಗಳಿಂ
ತಿಗೆಯೆ ಬೀರ ರವದಮೇಲೆ ಪರಿವ ಮದಗಜಂಗಳಿಂ ಚಳುತ್ತರಂಗಮಂಗಳಿಂ
ಲವಣ ಜಳಧಿ ಬಳಸಿದಂತೆ ಬಳಸಿದಗಟ ನೀಳದಿಂ ದುದಗ್ರಕನಕ ಶಾಳದಿಂ
ದೊಳಗೆ ಕುಲನಗಂಗಳೆನಿಪ ದೇವಕುಲದ ಭೋಗದಿಂ ಸರಾಗಮಾದ ರಾಗದಿಂ
ದಿವಮನೇಳಿಪಂತುಮಿರ್ಳ್ವ ವಿವಿಧ ಕೇತನಂಗಳಿಂ ಸದಾನಿಕೇತನಂಗಳಿಂ
ಧನದ ಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ ಪೊದಟ್ಟ ಕಾವಣಂಗಳಿಂ
ವಿಟಜನಕ್ಕೆ ತೊಡರ್ವಚಾರಿಯೆನಿಪ ಸೂಳೆಗೇರಿಯಿಂ
ವಿದಗ್ಧ ಹೃದಯ ಹಾರಿಯಿಂ
ಕನಕಗೋಪುರಂಗಳೊಳಗಣೆರೆಡು ದೆಸೆಯ ಗುಣಣೆಯಿಂ
ವಿಳಾಸಿನಿಯರಗಡಣೆಯಿಂ
ಸುರತ ಸುಖದ ಬಳ್ಳವಳ್ಳಿಯೆನಿಪ ಬಳ್ಳಿಮಾಡದಿಂ ಮಹಾವಿನೋದ ನೀಡದಿಂ
ಕನಕ ಶೈಲಮೆನಿಸಿ ನೆಗಟ್ದ ಭೂಮಿಪಾಲ ಭವನದಿಂ
ಸಮಸ್ತ ವಸ್ತು ಭುವನದಿಂ

ಪಾಂಡವರು ಏಕಚಕ್ರ ನಗರಕ್ಕೆ ಬಂದುದು

ಚಂ|| ಬರಿಸಿ ಹಿಡಿಂಬೆಯಂ ಕರೆದು ಸಾರೆ ಘಟೋತ್ಕಚನಂ ಮನೋಮುದಂ
ಬೆರಸೊಸೆದಿರ್ದೆವಿನ್ನೆವರಮಿನ್ನಿರಲಾಗದು ಪೋಪೆವೆಂದೊಡಾ
ದರದೊಳೆ ಕೊಟ್ಟ ವಸ್ತುಗಳನೊಂದುಮನೊಲ್ಲದೆ ಕೂರ್ತು ಬುದ್ಧಿವೇ
ೞ್ದಿರಿಸಿ ಸುಖಪ್ರಯಾಣದೊಳೆ ಪಾಂಡವರೆಯ್ದಿದರೇಕಚಕ್ರಮಂ

|| ರಗಳೆ ||

ಅಲ್ಲಿ ಸೊಗಯಿಸುವ ಕೃತಕ ಗಿರಿಗಳಿಂ
ಕಲ್ಪ ತರುಗಳನೆ ಪೋಲ್ವ ಮರಗಳಿಂ
ನಂದನಂಗಳೊಳ್ ಸುೞಿವ ಬಿಃಯಿಃಯಿಂ
ಕಂಪುಕಣ್ಮಲೆಯೆ ಪೂತ ಸುರಯಿಯಿಂ
ಸುತ್ತಲುಂ ಪರಿವ ಜರಿವೊನಲ್ಗಳಿಂ
ದೆತ್ತಲುಂ ನಲಿವ ಪೊಸನವಿಲ್ಗಳಿಂ
ಬೆಳೆದು ಮಗಮಗಿಪ ಗಂಧ ಶಾಳಿಯಿಂ
ದಲ್ಲಿ ಸುೞಿವ ಗಿಳಿವಿಂಡಿನೋಳಿಯಿಂ
ಈಂಟು ಜಳಧಿಯೆನಿಪಗೞ ನೀಳ್ಪಿನಿಂ
ನೆಗೆದು ಸೊಗಯಿಸುವ ಕೋಂಟೆಯೊಳ್ಪಿನಿಂ
ವಿವಿಧ ದೇವಗೃಹದಾಟ ಪಾಟದಿಂ
ಮಱುಗಿ ಬಟ್ಟೆಯರ ನೋೞ್ಪ ನೋಟದಿಂ
ಪಂಚ ರತುನದೊಳೆ ನೆಱೆದ ಪಸರದಿಂ
ತೋರಣಂಗಳೊಳೆ ತೊಡರ್ದ ತಿಸರದಿಂ
ಧನದರನ್ನರಿವರೆನಿಪ ಪರದರಿಂ
ದೇವರನ್ನರಿವರೆನಿಪ ಬಿರುದರಿಂ
ನೆಱೆಯೆ ಸೊಗಯಿಪಾಯೇಕಚಕ್ರಮಂ
ಮೆಚ್ಚಿದಂ ಹರಿಗನಮಿತ ವಿಕ್ರಮಂ

ಧರ್ಮರಾಜನ ರಾಜ್ಯಭಾರಕ್ರಮ

ಮ॥ ಒಡವರ್ಪುಗ್ರ ಮದೇಭವಾಜಿ ಗಣಿಕಾನರ್ಘ್ಯಾದಿ ರತ್ನಂಗಳೊಳ್
ತೊಡರ್ದೊಪ್ಪುತ್ತಿರೆ ಲಕ್ಷ್ಮಿ ದಂತಿ ತುರಗಂ ಶ್ರೀ ದಿವ್ಯಕಾಂತಾಜನಂ
ತೊಡೆವೆಂಬೊಂದುಮನಾ ಸುರಾಸುರರಿನಾ ಗೋವಿಂದನಿಂ ಮುನ್ನೆ ಕೋ
ಳ್ಪಡೆದಂಭೋನಿಧಿಯಂತೆ ಬಂದು ನೆಗೞ್ದಿಂದ್ರಪ್ರಸ್ಥಮಂ ಧರ್ಮಜಂ

॥ ಮಟ್ಟೆರಗಳೆ ॥

ಎಯ್ದುವುದುಂ ತತ್ಪುರದುಪವನಂಗಳವಿರಳ ಮಳಯಾನಿಳ ಕಂಪಿತಂಗ
ಳವಿರಳ ಕುಸುಮಾವಳಿ ಕಂಪುವೇಱೆ ಸೊಗಯಿಪ ಕಿಱುಮಿಡಿಗಳೊಪ್ಪಿ ತೋಱೆ
ಲವಣಾಬ್ಧಿಯ ಬಳಸಿದುದೆನಿಸುವಗೞ ಬಳಸೆಸೆದಿರೆ ಕೋಂಟೆಯ ಚೆಲ್ವು ಪೊಗೞ
ಲರಿದೆನಿಸಿರೆ ನೆಗೆದದು ನಭಮನೆಯ್ದೆ ಮಿಳಿರ್ವಪತಾಕಾವಳಿ ದಿವಮನೆಯ್ದೆ
ಬಳಸಿದ ಕೆಂಬೊನ್ನ ಮದಿಲ್ಗಳೊಳಗೆ ಮಣಿಮಯ ಭವನಾವಳಿ ತೊಳಗಿ ಬೆಳಗೆ
ರಸರಸದ ಬಾವಿ ಮನೆಮನೆಗೆ ಬೇಱೆ ಕಿಸುಗಲ್ಗಳರಜದ ಕಣಿವೆರಸುತೋಱೆ
ಸುರಕುಜದ ನೆೞಲೊಳಂಗಣದೊಳೇನುಮಲಸಿಲ್ಲದೆ ಕಟ್ಟಿರೆ ಕಾಮಧೇನು
ಪರದರ ಪಾರ್ವರ ಸೂಳೆಯರ ಮನೆಗಳವು ಧನದನ ಮನೆಯುಮನೇೞಿಪ ಮನೆಗಳವು
ಪೊೞಲ ಬೆಡಂಗಂ ಮೆಚ್ಚಿಮೆಚ್ಚಿನೋಡಿ ದಿವಿಜೇಂದ್ರ ವಿಳಾಸದೊಳಿಂತುಕೂಡಿ
ಪರಿತಂದಾಗಳ್ ಪಿರಿದೊಸಗೆವೆರಸಿ ಪುರಕಾಂತೆಯರಾದರದಿಂದೆ ಪರಸಿ
ಸೂಸುವ ಶೇಷಾಕ್ಷತಮಂ ಸಮಂತು ಪಿರಿದುಂಮನಸಂತಸದಿಂದ ವಾಂತು
ಕರುಮಾಡಮನಾದರದಿಂದಮೇಱಿ ಕೆಲದೊಳ್ ಮಾಡಂಗಳನಱಿದು ತೋಱಿ
ಮಣಿಕನಕ ರಜತ ವಸ್ತುಗಳನಿತ್ತು ಬೇಡಿದ ನಾಡುಗಳನವಯವದಿಂದ ಮಿತ್ತು

ಕರಿ ತುರಗ ಬಲಂಗಳ್ ಪೆರ್ಚುವಂತು ಮಲೆಯುಂ ಮಂಡಲಮುಂ ಬೆರ್ಚುವಂತು
ಕೊಂಡಾಡುವ ನಾಲ್ವರು ಮನುಜರೊಳಗೆ ನೆಗಟ್ಟರಿಗನ ತೇಜಮೆ ತೊಳಗಿಬೆಳಗೆ
ನೆಲನಂ ಪ್ರತಿಪಾಲಿಸಿ ಧರ್ಮಸೂನು ಸುಖಮಿರ್ದಂ ರಿಪುಬಳತಿಮಿರ ಭಾನು ||

ಬಸವಣ್ಣನ ಪೂಜಾವಿಧಿ

ವೃತ್ತ|| ಬಸವಂ ಜನ್ಮ ದುರಾಶೆಯಂ ಕಳೆದು ಕರ್ಮಾರಂಭವಂ ನೀಗಿ ಸಂ-
ತಸದಿಂದಂ ಪೊಱಮಟ್ಟು ಬಂ[ದು]ಘನನಿರ್ವಾಯ ಪ್ರಕಾಶೋಜ್ವಲ-
ಪ್ರಸರಪ್ರಸ್ಫುರಿತ ಪ್ರಮೋದಚರಿತ ಶ್ರೀಸಂಗಪಾದಾಬ್ಜವಾ-
ಸ[ಸು]ಪೂಜಾರಸಮಗ್ನಚಿತ್ತನೆನಿಸಿರ್ದಂ ಸತ್ಯಸಾರೋದಯಂ ೧

ಒಲವಿಂದ ನಡೆತಂದು ಶಿವನಿಳಯಮಂ ಪೊಕ್ಕು
ನಲಿನಲಿದು ನೇಹವಂಕುರಿಸುತಿರೆ ಕೈಮಿಕ್ಕು
ಲಿಂಗಶರಣೆನುತಗ್ಘವಣಿಯನೊಲವಿಂದಿಳಿಪಿ
ಸಂಗಮೇಶ್ವರನ ಹತ್ತಿರೆ ಹದುಳದಿಂದಿಳಿಪಿ
ಬರವನೆಳಸಿರ್ದಯ್ಯ ದೇನ ತಳುವಿದೆನೆಂದು
ಉರವಣಿಸಿ ಬರುತಿರ್ದೆ ತಂದೆ ಮುಳಿಯದಿರೆಂದು
ಎನ್ನಯ್ಯ ಎನ್ನರಸ ಎನ್ನ ಬಂಧುವೆ ಎನುತೆ
ಎನ್ನ ಕಣ್ಣುಂ ಗತಿಯೆ ಮತಿಯೆ ಕರುಣಿಪುದೆನುತೆ
ಅಲ್ಲಿಕತ್ತುರಿಯ ಶ್ರೀಗಂಧಂಗಳಿಂ ಪೊರೆದ
ಸಲ್ಲಲಿತದಿರವಂತಿ ಸಂಪಗೆಗಳಿಂ ಪೊರೆದ

ನುತಶೀತಲಂಗಳಂ ಪೊಂಗಳಸದೊಳು ತೀವಿ
ಅತಿಶಯಾನಂದಾಶ್ರುವಂ ಕಣ್ಗಳೊಳು ತೀವಿ
ಕೊಂಡಾಡಿ ಕೊಂಡಾಡಿ ಮಜ್ಜನಕ್ಕೆಱೆವುತಂ
ಮುಂಡಾಡಿ ಮುಂಡಾಡಿ ನೊಸಲೊಳಚ್ಚೊತ್ತುತಂ
ಚಂದ್ರಚೂಡಂಗೆ ಸಿರಿಗಂಧಮನಲಂಕರಿಸಿ
ಸಾಂದ್ರಸೌರಭ್ಯಮಯ ಪುಷ್ಪದಿಂ ಸಿಂಗರಿಸಿ
ಪೂಜೆಯಂ ನೋಡಿ ಮೆಚ್ಚದೆ ಪೂಜೆಯಂ ಮಾಡಿ
ಓಜೆಗೆಟ್ಟಱುಹುಗೆಟ್ಟತಿ ಲಲ್ಲೆಯಂ ಮಾಡಿ
ನಯನಂಗಳೊಳು ಪೂಜೆ ಬರೆದಂತೆ ನೋಡುತಂ
ಭಯಭಕ್ತಿಯಿಂ ಪೂಜೆ ಮೆಱೆವಂತೆ ಮಾಡುತಂ

ಚಿತ್ತದೊಳು ಪೂಜೆಯಚ್ಚೊತ್ತಿದಂತರ್ಚಿಸುತೆ
ಚಿತ್ತದೊಳು ಪೂಜೆ ಪುಟ್ಟಿರ್ದಂತೆ ಈಕ್ಷಿಸುತೆ

ಧೂಪ ಧೂಮದ ತಿರುಳ ಪರಿಮಳವನೊಲಿದಿತ್ತು
ದೀಪದೊಳು ಕಣ್ಬೆಳಗನೆತ್ತಿ ಸುಖಮಂಹೊತ್ತು
ರನ್ನದಡ್ಡಣಿಗೆಗಳ ಮೇಲೆ ಬೆಳಗಂ ಕಱೆವ
ಹೊನ್ನ ಪರಿಯಾಣದೊಳಗಮೃತಾನ್ನಮಂ ಮೆಱೆವ
ನವಘೃತಂ ನವಶಾಕಪಾಕಂಗಳಂಬಡಿಸಿ
ನಡುವೆ ಜವನಿಕೆವಿಡಿದು ಪೊಱಗೆ ಕೈಮುಗಿದಿರ್ದು
ಕಡುಲಲ್ಲೆಯಿಂ ಭೀತಿಯಿಂ ಭಕ್ತಿಯಿಂದಿರ್ದು
ದೇವ ಚೆನ್ನನ ನಿಧಿಯೆ ಆರೋಗಿಸೆಲೆ ಸಂಗ

ದೇವ ಚೋಳನ ಸುಧೆಯೆ ಆರೋಗಿಸೆಲೆ ಸಂಗ
ಆರೋಗಿಸಯ್ಯ ನಿಜಲಿಂಗ ಸಂಗಮದೇವ
ಆರೋಗಿಸೈ ಉಮಾರ್ಧಾಂಗ ಸಂಗಮದೇವ
ಎನ್ನ ಸುಖನಿಧಿಯೆ ಗುಣನಿಧಿಯೆ ಕೂಡಲಸಂಗ
ಎನ್ನಭುಜಬಲವೆ ಮನದೊಲವೆ ಕೂಡಲಸಂಗ
ಎಂದು ಕೊಂಡಾಡುತ್ತ[ವಾ]ರೈಸಲರ್ಪಿಸುತೆ
ಬಂದು ಜವನಿಕೆಯೊಳಗೆ ನಿಂದು ಮನವಿಕ್ಕುತ್ತೆ
ಮೃದು ಮೃದಂಗಂ ಬಹಳ ಕಹಳಾರವದ ನಡುವೆ
ಪೊದೆದು ಪೊಣ್ಮುವ ಶಂಖ ಭೇರಿರವದ ನಡುವೆ
ತಿಳಿದಗ್ಘವಣೆಯಿತ್ತು ಕೈಘಟ್ಟೆಯುಮನಿತ್ತು

ಬಳಸಿ ಕಂಪಿಡುವ ಕರ್ಪೂರದ ವೀಳೆಯವಿತ್ತು
ಮಂಗಳಾರತಿಯಿತ್ತು ಚವರ ಸೀಗುರಿಯಿಕ್ಕಿ
ಅಂಗಜಹರಂಗೆ ಮುಕುರಂದೋಱಿ ಮೈಯಿಕ್ಕಿ
ನಿಂದಿರ್ದು ಕೈಮುಗಿದು ನೋಡಿ ಕಣ್ಗಳು ತೊಱೆಯೆ
ಸಂದಣಿಸಿ ಮೈಯೊಳಗೆ ರೋಮಾಂಚತತಿ ನೆಗೆಯೆ
ಗುರುಸಂಗ ಶಿವಲಿಂಗ ಸತ್ಯಶರಣರ ಸಂಗ
ವರಸಂಗಲಿಂಗ ಶರಣಾಗು ಬಸವನ ಸಂಗ
ಕರುಣರಸ ನಿಧಿಘನತರಂಗ ಸಂಗಮದೇವ
ಗಿರಿಸುತೆಯ ಸಮಸುಖಾಲಿಂಗ ಸಂಗಮದೇವ
ಸುಕುಮಾರ ಶಶಿಕಳಾಚೂಡ ಕೂಡಲಸಂಗ

ಸಕಲ ನಿರ್ಯಾಯಕ ಕ್ರೀಡ ಕೂಡಲ ಸಂಗ
ನಿತ್ಯನಿರ್ಮಳನೆ ನಿಃಕಳನೆ ಕೂಡಲಸಂಗ

ನಿತ್ಯನಿರ್ಭಯನೆ ನಿರುಪಮನೆ ಕೂಡಲಸಂಗ
ಹೊಗಳ್ವ ವೇದಾಳಿಗತಿಗೂಢ ಕೂಡಲಸಂಗ
ಸೊಗಯಿಸುವ ಘನವೃಷಾರೂಢ ಕೂಡಲಸಂಗ
ಎನ್ನನತಿ ಕರುಣದಿಂ ನೋಡು ಕೂಡಲಸಂಗ
ಎನ್ನಮನದಕ್ಕಱೊಳು ಕೂಡು ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ
ಎಂದು ಸ್ತುತಿಗೆಯ್ವುತಂ ಸ್ನೇಹರಸದೊಳ್ ಕೂಡಿ

ಇಂದುಧರನೊಳ್ ಸಲುಗೆಯಿಂ ಭಕ್ತಿಯಂ ಬೇಡಿ
ಶಿವಪೂಜೆಯೊಳಗೆ ಪುಟ್ಟಿದ ಸುಧಾಕರನಂತೆ
ಭವಪೂಜೆ ಬಲಿದು ಪುರುಷಾಕಾರವಾದಂತೆ
ಲಿಂಗ ಜಂಗಮವೊ ಮೇಣ್ ಜಂಗಮವೆ ಲಿಂಗವೋ
ಲಿಂಗ ಜಂಗಮವೆರಡು ಇಳೆಯೊಳು ವಿಭೇದವೋ
ಎಂಬಂತೆ ಸಾತ್ವಿಕಪ್ರಭು ಪೂಜಿಸುತ್ತಮಿರೆ
ಅಂಬಕತ್ರಯನ ಪುತ್ರಂಪೂಜಿಸುತ್ತಮಿರೆ
ಬಸವಣ್ಣನಪ್ರತಿಮನೊಲಿದು ಪೂಜಿಸುತ್ತಮಿರೆ
ಬಸವರಾಜಂ ಮೆಚ್ಚಿ ಪೂಜಿಸುತ್ತಿರೆಯಿರೆ
ಸಂಗಂ ಬಸವನೊ ಬಸವಂ

ಸಂಗನೊ ತಮ್ಮಿರ್ಬರೊರ್ಬರಂತೊರ್ಬರೊ ಮೇಣ್
ಸಂಗಂ ಬಸವನೊ ಬಸವಂ
ಸಂಗನೊ ಏನಿಪೊಂ[ದ]ಭೇದಭಾವದೊಳಿರ್ದರ್

ಇಂತು ಸಕಲದೇವವಲ್ಲಭನಪ್ಪ ಸರ್ಪಾಭರಣನಂ ದರ್ಪಕ ಧ್ವಸಿಯಂ ಕೂರ್ಪಕ ಕುಲದೈವಮಂ ನೋಳ್ಪರ ಕಣ್ಣ ಮಣಿಯಂ ಬೇಳ್ಪರ ಭಾಗ್ಯನಿಧಿಯಂ ಚಿಂತಿಸುವರ ಚಿಂತಾರತ್ನವೆನಿಪ ಸಂಗಮೇಶ್ವರನ ಕಪ್ಪಡಿಯ ಸಂಗಮದೊಳೊಪ್ಪಿಂದರ್ಚಿಸುತ್ತಮಿಪ್ಪ ಸಮಯದೊಳು ಒಂದು ದಿವಸಂ ಬಸವರಾಜಂ ಸಂಧ್ಯಾಸಮಯದವಸರ ಸೌರಭ್ಯ ಸಂಯುಕ್ತ ಶೀತಳ ಸಲಿಲ ನೂತನ ಮಳಯಜ ನವ್ಯ ಪ್ರಸೂನ ನಾನಾವಿಧ ಪೂಜಾ ಸಮರ್ಪಿತ ಷಡುರಸಾಯನ ನೈವೇದಿತ ಸರ್ವಾಂಗ ಶರೀರ ಪ್ರ[ಣ]ತನಾಗಿ ಸಂಗಪ್ರಸಾದವಂ ಸಾದರಂ ಕೈಕೊಂಡು ರಂಗಮಂಟಪದೊಳು ಸಂಗಮಧ್ಯಾನ ನಿದ್ರಾಮುದ್ರೆಯೊಳಿಪ್ಪಲ್ಲಿ ;

ಕನಸಿನೊಳು ಬೆಳೆದು ಕವಲಿಱಿದು ನೀಳ್ದ ಪ್ರವಾಳಜಾಳದಂತೆ ಬೆಂಬಳಿವಿಡಿದಿಳಿದ ಕೆಂಜೆಡೆಗಳಿಂ ಸುತ್ತಿದ ಜಟಾಬಂಧದೊಳಗಣ ಸುರನದಿಯೆಂಬ ಸರೋ[ಜಿನೀ]ತಟದೊಳಗಿರ್ದ ಬಿಸಕಂದದಂಕುರದಂತಿರ್ದ ಚಂದ್ರಕಳೆಯಿಂ ವಿದ್ಯುಲ್ಲತಾಗರ್ಭೀಕೃತಶಾರದ ವಿಭ್ರಮದಂತೆ ಭಸಿತಂ ಮುಸುಂಕಿದ ಬಿಸುಗಣ್ಣಿಂ ಮೆಱೆವ ಲಲಾಟಪಟ್ಟದಿಂ ಶೃಂಗಾರದ ತವರ್ಮನೆಯಂತಿರ್ದ ಮುಖಮಂಡಲದಿಂ ನಯಮಂ ಕಱೆವ ನಾಗಕುಂಡಲದಿಂ, ಹರನೊಳ್ ನೆರೆಯಾಳ್ ಬಂದ ಕಾಳಿಂದೀ ಸುರನದಿಗೆ ಸೋಲ್ತಿಳಿದಂತಿರ್ದ ಕೊರಳ ಗರಳದಿಂ, ಕಲ್ಪಕುಜದ ಶಾಖೆಗಳಂತಿರ್ದ ದಶಭುಜಂಗಳ ತೋಳ್ದುಱುಗಲಿಂ, ವೇದಂಗಳ್ ತನ್ನಂ ಕಾಣದಂತೆ ಮುಸುಂಕಿದ ಮಾಯಾಪಟಲವೆನಿಪ ಗಜಚರ್ಮದಿಂ ಎಳವಿಸಿಲ ಬೆಳಗಂ ತರುಣ ತರಣಿಗೆ ಕಡಂಗೊಡುವ ಪ್ರಭಾದುಕೂಲದಂತಿರ್ದ ಪುಲಿದೊಗಲಿಂದೊಪ್ಪಿ ಪಶುಪತಿ ಬಸವನ ಮನದ ಮೊನೆಯೊಳೊಪ್ಪಿ ಮೂರ್ತಿಗೊಂಡು ;

ಎಲೆಮಗನೆ ಬಸವ ಬಸವಣ್ಣ ಬಸವಿದೇವ, ನಿನ್ನಂ ಮಹೀತಳದೊಳು ಮೆಱೆದಪೆವು ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು ಎಂಬ ನುಡಿಯೊಡನೆ ಕನಸಿನ ಮಾತು ಮನವನಿಮ್ಮೃಗೊಂಡು ನಿದ್ರೆ ತಿಳಿದು ಕಣ್ದೆರೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡು ಅನುತಾಪವೇಱೆ ವಿರಹಂ ಹೊಮ್ಮಿ ಕಣ್ಗೆಟ್ಟಗಲಲಾಱದೆ ರಂಗಮಂಟಪದ ಕಂಭಮಂ ಘಳಿಲನೆ ಹಾಯ್ದು–ದೇವದೇವ ಸಂಗ, ಕಂಡೈ ; ಕೆಟ್ಟೆ ಕೆಟ್ಟೆಂ ತೊಟ್ಟನಿಂತು ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ ? ಗಗನದಿಂದಿಳಿವಂಗಾಧಾರವಾಗುತ್ತೆತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ ? ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ ? ನರಲೋಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದೊಳ್ಗೊಂಡ ಗುರುವೆ ಪರಮ ಬಂಧುವೆ ಪ್ರಾಣವೆ, ಬೆಳುದಿಂಗಳೇಕೆ ಬಿಸುಪೇಕೆ? ಅಮೃತವೇಕೆ ವಿಷವೇಕೆ ? ಬೆಳಗೇಕೆ ತಮವೇಕೆ ? ನೀನೇಕೆ ಈ ನುಡಿಯೇಕೆ ? ಹೊದ್ದಿದರಂ ಹೋಗೆಂಬರೆ ? ಸಾರ್ದರಂ ಸ್ವೈರಿಸೆಂಬರೇ ? ನಂಬಿದವರಂಗೋಣಂ ಕೊಯ್ವರೆ ? ಶಿಶುವನಿಱಿವರೆ ? ಪಶುವಂ ಕೊಲುವರೆ ? ಎನ್ನಂ ಬಿಡುವರೆ ? ಕರುಣಿ ಕರುಣಿ, ಕರುಣಂ ಲೇಸಾಯ್ತು ಅರ್ಚಿಸಿತಕ್ಕೆ ಫಲವಾಯ್ತು, ಇನ್ನೇನು ಇನ್ನೇನು ? ಎಂದೊಟ್ಟೈಒಱಲಿ ಪರಿತಂದು ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು ಆಲಿಟ್ಟು ಶಿವದಿಟ್ಟು ಮೊಱೆಯಿಟ್ಟು ಮೂರ್ಛೆ ಸುತ್ತೆಂತಕ್ಕೆಚ್ಚತ್ತು ಮೆಲ್ಲಮೆಲ್ಲನಾಲಿಂಗನವಂ ಸಡಿಲ್ಚಿ ನಡೆತಂದು ;

ಮನವಲ್ಲದ ಮನದೊಳಗ್ಸವಣಿ ಹೂಗಳಂ ಬೇಗಂ ತಂದಂತಂತೆ ಪೂಜೆಗೆಯ್ದಾರೋಗಣೆಗಿತ್ತು, ಮೋಹದ ಮುನಿಸು ಮನದೊಳ್ ತೀವಿ ಪ್ರಣಯ ಕಲಹಂ ಬಲಿದು ಪ್ರಸಾದಮನೊಲ್ಲದೆ ಬಸವಂ ಮುಸುಂಕಿಟ್ಟು ಪಶುಪತಿಯ ಪದದ ಕೆಳಗೆ ನಿರ್ವೇಗದಿಂ ಪಟ್ಟಿರ್ದಿರೆ ; ರಾತ್ರಿಯೊಳು ನೇತ್ರತ್ರಯಂ ಭಕ್ತನಿರವಂ ನೋಡಿ ಕೊರಗಿ ಮೋಹದ ಮಹಿಮೆ[ಗೆ]ಮರವಟ್ಟು ಭಕ್ತಿಯ ಭರಕ್ಕೆ ಕೌತುಕಂಗೊಂಡಗಲಲಾಱದ ಮಗಂಗೆಮಿಗೆ ಕರುಣಿಸಿ, ಮತ್ತೆ ಕನಸಿನೊಳು ಬಂದು, ಎಲೆ ಮಗನೆ ಎಲೆ ಕಂದ ಎಲೆ ಬಸವ, ನಿನ್ನನಗಲಿ ನಾನಿಱಲಾರೆ, ನಿನಗೆನಿತು ನಿರೋಧವೇಕೆ? ಬೇಡಯ್ಯ ಬೇಡೆನ್ನರಸ, ಬೇಡೆನ್ನ ಭಕ್ತರನಿಧಿಯೆ. ನಿನ್ನೊಡನೆ ಬಿಡದೆ ಬಪ್ಪೆಂ, ನಾಳೆ ಮಧ್ಯಾಹ್ನದೊಳು ಶುದ್ಧಾಂಗನಾಗಿ ಬಂದು ನಂದಿಕೇಶ್ವರನ ಮುಂದೆನ್ನಂ ನೆನೆವುತ್ತಂ ಕುಳ್ಳಿರೆ, ವೃಷಭನ ಮುಖಾಂತರದಿಂದಾವೆ ಬಂದಪೆವು. ಅತ[ಂ] ನಿನಗೆ ಸದ್ಗುರು. ಅಲ್ಲಿಂ ಬಳಿಕಂ ಎಮ್ಮನರ್ಚಿಸುತ್ತೆ ಭಕ್ತರ ಬಂಧುವಾಗಿ ಶರಣರ ಪರುಷದ ಕಣಿಯಾಗಿ ನಿತ್ಯಸುಖಿಯಾಗಿ ಪರಸಮಯದ ಗರ್ವಮಂ ನಿಲಿಸಿ ಭಕ್ತರಂ ಗೆಲಿಸಿ ಪ್ರತ್ಯಕ್ಷಂಗಳಂ ತೋಱಿ ಲೌಕಿಕಧರ್ಮಮಂ ಮೀಱಿಸಿ ಕಡು ನಿಷ್ಠೆಯಂ ಹೇಱಿ ಪರಮಸುಖದಿಂದಿರ್ಪುದು ಎಂದು ಬೆಸಸಿ ಬಿಜಯಂಗೆಯ್ಯೆ ;

ಪುಷ್ಪರಗಳೆ

ಲೀಲೆಯೊಳೋಲ್ಲೈಪೆಂ ಮಧು
ಶಾಲಾಪದೆ ಪುಷ್ಪರಗಳೆಯೆಂಬೀ ಪೊಸಪೂ
ಮಾಲೆಯನವಧರಿಸಗಜಾ
ಲೋಲ ಮಹಾಶೀಲ ಹಂಪೆಯ ವಿರೂಪಾಕ್ಷ

ಅಲ್ಲಿಂದ ತಳ್ದರ್ ಹರನರಮನೆಗೆ ಮುಂತಾಗಿ
ಮೆಲ್ಲನಲುಗದೆ ಪುಷ್ಪವೊಂದದಿರದಂತಾಗಿ
ಶಿವನರಮನೆಗೆ ಬಂದು ಬಾಗಿಲೊಳ್ ನಿಂದಿರ್ದರ್
ಶಿವನುಪ್ಪವಡಿಸುವನ್ನೆವರಂ ಕೆಲಕೆ ಸಾರ್ದರ್
ಏನಯ್ಯ ಶಿವನೆ ಉಪ್ಪವಡಿಸಿರ್ದಾ ತಂದೆ
ಏನೆನ್ನ ತಳುವಿರ್ದನೆನುತಲಿರ್ದಾ ತಂದೆ
ಅಳಿಗೆಱಗದ ಗಂಧವಹನಲುಗದಲರ್ಗಳಂ
ಎಳಸಿ ತಂದೆಂ ತಂದೆ ಪೊಚ್ಚಪೊಸ ಪೂಗಳಂ
ಎಂದು ಬಿನ್ನೈಸುತ್ತೆಹತ್ತೆ ಸಾರ್ದೊಲವಿಂದೆ
ತಂದ ಪೊಸ ಸೇವಂತಿಯಲರ ಪನಿನೀರಿಂದೆ

ಎಸೆವ ಮುಖಮಜ್ಜನಕ್ಕೆಱೆದು ಮಿಗೆ ಹಿಗ್ಗುತಂ
ಪೊಸ ಪರಾಗದ ವಿಭೂತಿಯ ತಿಲಕವಿಕ್ಕುತಂ
ಮಿಗೆ ಮೋಹದಿಂ ನೋಡಿ ಮನದೊಳಗೆ ತೂಪಿಱಿದು
ಮಘೆ ಮಘಿಪ ಕೇತಕಿಯ ನುಣ್ಣೆಸಳ್ಗಳಂ ಪಿಡಿದು
ಸಿರಿಮುಡಿಯನೊಯ್ಯನೆ ಸಡಿಲ್ಚಿ ನಯದಿಂ ಬಿಡಿಸಿ
ಪರಿಪರಿಯ ನೀಳ್ದ ಕೆಂಜೆಡೆಗಳಂ ನೆಲೆಗೊಳಿಸಿ
ಎಳೆಯ ಶಶಿಕಳೆ ನೋಯದಂತೆ ಮೆಲ್ಲನೆ ಹಿಕ್ಕಿ
ಹೊಳೆವ ಸುರನದಿ ತುಳ್ಕದಂತೆ ನಯದಿಂ ಹಿಕ್ಕಿ
ಪೊಸ ಪಡ್ಡಳಿಯ ಪರಿಮಳದ ಕತ್ತುರಿಯನಿಕ್ಕಿ
ಸಸಿನಳಿವ ಜಡೆಗಳೊಳ್ ಪರಿಮಳವನಣ್ಪಿಕ್ಕಿ

ಇರುವಂತಿಯಂ ತಂದು ಸಿರಿಮುಡಿಯೊಳಗೆ ತುಱುಬಿ
ಬೆರಸಿಯುವರೆಡೆಗೆಡೆಗೆ ಸೇವಂತಿಯಂ ತುಱುಬಿ
ಮಲ್ಲಿಗೆಯ ಪರಿಮಳದ ಚಂದನವನಣ್ಪಿಕ್ಕಿ

ಪೊಲ್ಲೆಯೊಳ್ಮುಗುಳ್ಗಳಿಂ ನಾಗಕುಂಡಲವಿಕ್ಕಿ
ಸಲ್ಲಲಿತ ಇರುವಂತಿ ಕಂಠಮಾಲೆಯನಿಕ್ಕಿ
ಪುಲ್ಲಿತಹ ದುಂಡುಮಲ್ಲಿಗೆಯ ಪದಕಮನಿಕ್ಕಿ
ಜಾದಿಯ ಸುಗಂಧದಿಂ ಮೃಗಮದವನೊಲ್ದಿತ್ತು
ಸಾದರಂ ಮಾಧವಿಯ ಮುದ್ರಿಕೆಯನೊಸೆದಿತ್ತು
ಪುರುಗದೊಡ್ಡವಣೆಯಿಂ ಗಜಚರ್ಮವಂ ಪೊದಿಸಿ
ನೆರೆದ ಸಂಪಗೆಗಳಿಂ ಪುಲಿದೊವಲನೊಲ್ದುಡಿಸಿ

ಸುರಹೊನ್ನೆಯಲರ್ಗಳಿಂದುರಗ ಕಂಕಣವಿಕ್ಕಿ
ಚರಣದೊಳ್ ಕಮಲಕರ್ಣಿಕೆಯ ಮುದ್ರಿಕೆಯಿಕ್ಕಿ
ಕಮಲಂಗಳಂ ಚರಣ ಕಮಲದೊಳ್ ಕೈಕೊಳಿಸಿ
ಕುಮುದಂಗಳಂ ಕೂಡೆ ಕೆಲದೊಳಂ ಕೈಕೊಳಿಸಿ
ಮಿಕ್ಕ ಪುಷ್ಪಂಗಳಂ ಮುಂದೆ ಪೂವಲಿಗೆದಱಿ
ಸೊಕ್ಕೇಱಿ ಹಾರೈಸಿ ಕರಣಂಗಳಂ ಸವಱಿ
ಕ್ಷೋಂಪಿಸುವ ದವನದಿಂದೊಲ್ದು ಸೀಗುರಿಯಿಕ್ಕಿ
ಕಂಪೆಸೆವ ಮುಡಿವಾಳದಿಂದೆ ಚಾಮರವಿಕ್ಕಿ
ರಸಧೂಪಧೂಮದೊಡನೆಸೆದು ಆರತಿಯೆತ್ತಿ
ಪೊಸಪರಿಯ ಕಾಂತಿ ಮನದೊಳಗೆ ಬಳೆಯೊಳ್ ಮುತ್ತಿ

ಸಮೆದ ದೇವಾನ್ನಮಂ ದಿವ್ಯಾನ್ನ ತತಿಗಳಂ
ಕ್ರಮದಿಂದಲಿತ್ತು ಕಡುಸವಿಯ ಸಂದಣಿಗಳಂ
ಇಂತುನಲಿದಾ[ರೋಗಿಸಲಿಕೆ] ತಾಂಬೂಲಮಂ
ಸಂತಸಂ ಮಿಗೆಕೊಟ್ಟು ಮುಖದ ಸುಖಜಾಲಮಂ
ಹೆಱಸಾರ್ದು ಕರುಣ ಪ್ರಸಾದಮಂ ಕೈಗೊಂಡು
ತೆಱಹಿಲ್ಲದುಗ್ಗಡದ ಶಿವಸುಖಮನೊಳಗೊಂಡು
ನೇಹದಿಂ ನೋಡುತುಂ ನಲ್ಮೆಯಿಂ ನೋಡುತುಂ
ಮೋಹದಿಂ ಬೇಡುತ್ತವೆಯ್ದೆ ಸದೆ ಬಾಡುತುಂ
ದೇವ ಸುಕುಮಾರ ಶಶಿಶೇಖರ ವಿರೂಪಾಕ್ಷ
ದೇವ ಪರಿಮಳವೃಂದಸೇವಿತ ವಿರೂಪಾಕ್ಷ

ಎಂದು ಪೊಗಳುತ್ತ ಮಾಡುತೆ ಹಿಗ್ಗಿ ಪೆರ್ಚುತುಂ
ನಿಂದು ನಲಿದಾಡಿ ಮಲೆದಾಡಿ ಸೈವೆರ್ಚುತುಂ
ಪೂಜೆಯಂ ನೋಡುತ್ತೆ ಪುಟನೇಳುತಾಡುತುಂ
ಓಜೆಯಂ ಮೀಱುತ್ತೆ ಕರುಣಮಂ ತೋಱುತುಂ

ಕಂಪಿಸುತೆ ಪುಳಕಿಸುತೆ ಹಳವಿಸುತೆ ಝುಳಪಿಸುತೆ
ಝೋಂಪಿಸುತೆ ಜೋಲುತ್ತವಮರುತ್ತೆ ಬೆಮರುತ್ತೆ
ಕೊನರುತ್ತೆ ಕೊರ್ಬುತ್ತೆ ಪುಳಕಿಸುತೆ ತೊನೆವುತ್ತೆ
ಮುನಿವುತ್ತೆ ತೊನೆವುತ್ತೆ ತೂಗುತ್ತೆ ಮುದ್ದಿಸುತೆ
ಗರ್ಬಿಸುತೆ ಗಳಪುತ್ತೆ ಕೆಲಬಲನನೇಡಿಸುತೆ
ಪರ್ಬಿ ಪಲ್ಲವಿಪ ಭಕ್ತಿಗೆ ಮನಮನೆಡೆಗುಡುತೆ

ಭಕ್ತಿ ಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿ ಸುಖದಿಂದಧಿಕವಿದಕೆ ಪಡಿಯಿಲ್ಲೆನಿಸಿ
ಪರುಷವಂ ಬಿಸುಡೆಂದು ಸುರಭಿಯಂ ತೆಗೆಯೆಂದು
ಸುರತರುವನೊಲ್ಲೆನೆಂದಮೃತವಂ ಚೆಲ್ಲೆಂದು
ನಿಧಿಗಳಂ ನೂಂಕು ಚಿಂತಾಮಣಿಯನಿಡುಕೆಂದು
ಮಧುಗಿಧುಗಳೆಲ್ಲಿಯವವೇತಱವವೇಕೆಂದು
ಉರವಣಿಪ ಪರಮ ಭಕ್ತಿಯ ಸುಖದ ಸೊಕ್ಕೇಱಿ
ಹರನಿಮ್ಮ ಮೂರ್ತಿ ಕರಣಂಗಳೊಳ್ ಕಾಲೂಱಿ
ಹರಹರ ನಮಶ್ಶಿವಾಯೆಂಬ ಕಳವಳವೇಱಿ
ಪರಮಪದದಾನಂದ ಸುಖದ ಸುಧೆ ತಲೆಗೇಱಿ

ಈವಿ ಗದ್ಗದಮುಣ್ಮಿ ಪೊಣ್ಮಿ ಕರಗುತೆ ಬರುತೆ
ವೀವೀವಿರೂರೂರುಪಾಪಾಕ್ಷಕ್ಷಯೆನುತೆ
ಒಸೆದುಮೊದಲನೆಯಕ್ಕರದೊಳೆ ಹರುಷಂ ಮೂಡಿ
ಮಿಸುಗುವೆರಡನೆಯಕ್ಕರದೊಳೆ ಸುಖವಕ್ಕಾಡಿ
ಮೂಱನೆಯವರ್ಣದೊಳ್ ಮರೆದು ಪುಳಕಂ ನೆಗೆದು
ಮೀಱಿ ನಾಲ್ಕನೆಯಕ್ಕರದೊಳೆ ಮುನ್ನೆನಪಳಿದು
ಏನೆಂಬೆನಚ್ಚ ಶಿವಭಕ್ತಿ ಪೆರ್ಚಲ್‌ಕರಂ
ಆನಂದರಸದಿಂದೆ ತೋದು ನಾಲ್ಕಕ್ಕರಂ
ನಾಲಗೆಯ ಮೇಲೆ ಹೊರಳುತ್ತೆ ಸಡಿಲುತ್ತಮಿರೆ
ಲೀಲೆಯಿಂದಶ್ರುನಯನದೊಳೆ ತೆರೆ ಮಸಗುತಿರೆ

ಮುತ್ತಿದರಿಷಡ್ವರ್ಗವತ್ತ ಸಾರುತ್ತಮಿರೆ
ಹತ್ತಿರ್ದ ತಾಪತ್ರಯಂ ತಣ್ಣನಾಗುತಿರೆ
ಮನವು ನಿಮ್ಮಡಿಗೆಱಗೆ ಬುದ್ಧಿ ನೆಱೆ ತರ್ಕೈಸಿ
ನೆನಹು ನಿಮ್ಮೊಳ್ ಪುಗಲ್ ಚಿತ್ತವೆರಡಿಲ್ಲೆನಿಸಿ

ನಿನ್ನ ನಿಜವೆನ್ನ ಜೀವವನಿಂಬುಗೊಂಡಿರಲ್
ನಿನ್ನನುತಿಯೆನ್ನ ಜಿಹ್ವೆಯನಿಂಬುಗೊಂಡಿರಲ್
ನಿನ್ನರೂಪೆನ್ನ ಕಣ್ಗಳನಿಂಬುಗೊಡಿರಲ್
ನಿನ್ನ ಸರ್ವಾಂಗವೆನ್ನಂಗದೊಳ್ ತೀವಿರಲ್
ಇಂದು ನೀನೆನ್ನನೊಚ್ಚತವಾಗಿ ಕೈಗೊಂಡು
ಸಂತಸದೊಳಾಂ ನಿನ್ನನಗಲದೆ ಮನಂಗೊಂಡು

ಅರ್ಚಿಸುತ್ತಿರ್ಪುದಂ ಕರುಣಿಸುವುದೆಲೆ ದೇವ
ನಚ್ಚಿನಲಿದಿರ್ಪುದಂ ಕರುಣಿಸುವುದೆಲೆ ದೇವ
ಮಚ್ಚಿಮಱಿದಿರ್ಪುದಂ ಕರುಣಿಸುವುದೆಲೆ ದೇವ
ಹೆಚ್ಚಿ ಹಿಗ್ಗಿರ್ಪುದಂ ಕರುಣಿಸುವುದೆಲೆ ದೇವ
ದೇವ ಕರುಣಿಗಳರಸ ದೇವ ದಾನಿಗಳರಸ
ದೇವ ಮಾನಿಗಳರಸ ದೇವ ಬೋಳೆಯರರಸ
ಹೆಂಪಿಡಿದಮರವೃಕ್ಷ ಹಂಪೆಯ ವಿರೂಪಾಕ್ಷ
ಬೇಡುವೆನಿದಂ ದೇವ ಮಾಡುವುದಿದಂ ದೇವ
ಶಿಶುವೆಂದು ನೋಡುವುದು ಪಶುವೆಂದು ಕೂಡುವುದು
ವಿಷಯದಿಂ ನೊಂದಪೆಂ ಪಸಿವಿನಿಂ ಬೆಂದಪೆಂ

ಕಾಮದೊಳ್ ಕಂದಿದೆಂ ತಾಮಸದೊಳೊಂದಿದೆಂ
ಮೋಹದಿಂ ಮಗ್ಗಿದೆಂ ದೇಹದಿಂ ತಗ್ಗಿದೆಂ
ಏವೆಂ ಮಹಾದೇವ ಕಾವುದು ಮಹಾದೇವ
ಆರುಂಟೆನಗೆ ದೇವ ಆರನರ್ಚಿಪೆ ದೇವ
ಎನಗೆ ಹೊನ್ನುಂ ನೀನೆ ಎನಗೆ ಚಿನ್ನುಂ ನೀನೆ
ಎನಗೆ ಕುಲವುಂ ನೀನೆ ಎನಗೆ ಬಲವುಂ ನೀನೆ
ಎನಗೆ ಗರ್ವಂ ನೀನೆ ಎನಗೆ ಸರ್ವಂ ನೀನೆ
ನಿನ್ನನರ್ಚಿಸಲಿತ್ತು ಚಿನ್ನಭಕ್ತಿಯನಿತ್ತು
ಕರುಣಿಸು ವಿರೂಪಾಕ್ಷ ವೀಕ್ಷಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ ವೀಕ್ಷಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ ಜಯಜಯ ವಿರೂಪಾಕ್ಷ

ಅಕ್ಷಮನಳಿಪಂ ಮಾಯಾ
ಪಕ್ಷನೆಯಾಂ ನಿನ್ನನೊಲ್ದು ಪೊರ್ದಿದೆನಭವಾ
ರಕ್ಷಿಸು ರಕ್ಷಿಸು ರಕ್ಷಿಸು
ರಕ್ಷಿಸು ಹೋ ದೇವ ಹಂಪೆಯ ವಿರೂಪಾಕ್ಷಾ

ಕುಂಬಾರ ಗುಂಡಯ್ಯನ ರಗಳೆ

ಅಂಡಲೆವ ಮಾಯೆಯಂ ಬೆಂ
ಕೊಂಡನನಂತಮುಖ್ಯೈಕ ಪೂಜೆಯನೊಲವಿಂ
ಕಂಡನನಿಳೆಯೊಳು ಕುಂಬಱ
ಗುಂಡಯ್ಯನ ಮೆಱೆದನೆಮ್ಮ ಹಂಪೆಯ ರಾಯಂ

ಇರುತೊಂದಿವಸಂ ಘಟಕಾಯಕದೊಳು
ಪರಮನನಾಡಿಸುತಿರ್ಪವಸರದೊಳು
ತನ್ನಂ ಮಱೆದೊಲವಿಂ ಪೂಜಿಸುತಿರೆ
ಭಿನ್ನಂದೋರದ ಸುಖ ಬಾರಿಸುತಿರೆ
ಬಾರಿಪ ದನಿಗೀಶಂ ಹಾರೈಸುತೆ
ಕಾರುಣ್ಯಾಂಬುಧಿ ತನ್ನಂ ಮಱೆವುತೆ
ಕೈಲಾಸದೊಳೆಸೆವೊಡ್ಡೋಲಗದೊಳು
ಶೈಲಜೆ ಕೆಲದೊಳಗಿಪ್ಪವಸರದೊಳು
ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಮಂ ಮಱೆವುತೆ

ಶಿವಪದದಂದುಗೆ ಘಲಘಲ ಘಲಕೆನೆ
ನವಕಟಕಧ್ವನಿ ಝುಂ ಝುಂ ಝುಣರೆನೆ
ಮರ್ತ್ಯದ ದನಿ ಕೈಲಾಸದ ನೃತ್ಯಂ
ಸತ್ಯದ ದನಿ ಶಿವಲೋಕದ ನೃತ್ಯಂ
ಜೀವನ ಭಕ್ತನೊಳೆಡೆದೆಱಹಿಲ್ಲದೆ
ತಾವರೆ ನಾಳದ ನೂಲಿಪ್ಪಂದದೆ
ಮಸಗುತ್ತಿರೆಯಿರೆ ಗಿರಿಸುತೆ ಕಾಣುತೆ
ಹೊಸಪರಿ ಕರುಣೆಪುದೆನುತಂ ಕೇಳುತೆ
ಇರೆ ಭೋಂಕನೆ ಶಿವನೆಚ್ಚತೆಂದಂ
ಹರುಷಂ ಮಿಗೆ ಗಿರಿಜೆಗೆ ತಾನೆಂದಂ

ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳು ಮಾಡುತ್ತಿರ್ದೆಂ

ಇರುತ ಸ್ಥಾನದ ಭೇದವನಱಿಯದೆ
ಸುರನರಲೋಕದ ವಿವರಣೆಯಱಿಯದೆ
ಅಲ್ಲಿಯುಮಿಲ್ಲಿಯುಂ ಮೂಡುತ್ತಿರ್ದಂ
ಸಲ್ಲೀಲೆಯೊಳಿನ್ನುಂ ಮಱೆದಿರ್ದಂ
ಎಂದು ಬೆಸಸೆ ಗಿರಿಸುತೆ ಬೆಱಗಾದಳು
ಇಂದುಧರಂಗೊಲವಿಂ ತಾನೆಂದಳು
ನಿಮ್ಮನಾಡಿಪ ಭಕ್ತನದಾವಂ
ನಿಮ್ಮನನಚ್ಚುವ ಶರಣನದಾವಂ

ದೇವ ಎನಗಿದು ಕೌತುಕವೆನುತೆನೆ
ದೇವ ಮರ್ತ್ಯದೊಳಿಂತಿದು ಪೊಸಕಿನೆ
ನಡೆತೋಱಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಟ್ಯದ ಫಲವಂ
ಎಂದಿರ್ವರುಮೊಂದಾಗಿ ಬರುತ್ತಂ
ಬಂದೀ ಮರ್ತ್ಯದೊಳವತರಿಸುತ್ತಂ
ಗಗನದೊಳಂಬಿಕೆಯುಂ ಸ್ಥಿತಿರಿಸುತ
ಜಗದೀಶಂ ಸುಖಮುಂ ಸ್ಥಿತಿರಿಸುತ
ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿರೆ

ಒಳಗಣ ಸುಖದಿಂ ಹೊಱಗಲ್ಲಾಡದೆ
ಪುಳಕಿಸುತಂ ಬಾರಿಸುತಿರೆ ಮಾಣದೆ
ಕಂಡಭವಂ ಕಡುನಿಷ್ಠೆಗೆ ಮೆಚ್ಚುತೆ
ಗುಂಡಯ್ಯನನೆಚ್ಚರಿಸಲು ಬಗೆವುತೆ
ಒಳಗಾಡುವ ಲಿಂಗವನಾಕರ್ಷಿಸೆ
ಒಳಗಣ ಲಿಂಗವ ತನ್ನೊಳು ಸೇರಿಸೆ
ಲಿಂಗದೊಡನೆ ಕಣ್ದೆರೆದಂ ಗುಂಡಂ
ಹಿಂಗದೆ ಹೊಱಗಣ ಶಿವನಂ ಕಂಡಂ
ಕೊರ್ಬಿದನುರ್ಬಿದನುಲಿದಾರ್ದಿರ್ದಂ
ಸರ್ಬ ಸುಖಂಗಳ ಸಲೆ ಬಡುತಿರ್ದಂ

ಕುಣಿದಾಡುತ ಗಡಿಗೆಗಳಂ ಬಾರಿಸಿ
ಮಣಿದಾಡುತ ಮಡಕೆಗಳಂ ಬಾರಿಸಿ

ಶಿವನಂಸುತ್ತಿ ಬರುತ್ತುಂ ಬಾರಿಸಿ
ಭವನಂ ಬಲವಂದೊಲವಿಂ ಬಾರಿಸಿ
ಕುಣಿವುತೆ ಕೊರಳೆತ್ತುತೆ ನೆಱೆಕೂಗುತೆ
ಮಣಿವುತೆ ತೂಗಾಡುತೆ ಸುಖಿಯಾಗುತೆ
ಕೊಂಕುತೆ ಬಂಕುತೆ ಹಾರ್ಯೆಸುತ್ತಂ
ಬಿಂಕಂ ಬೆತ್ತುಬುಬೆಂದಾಡುತ್ತಂ
ಆಡುವ ಗುಂಡಯ್ಯನ ಹೊಸನೃತ್ಯಂ
ನೋಡವ ಶಿವನಂ ಮುಟ್ಟಿತು ಸತ್ಯಂ

ಸುಖದಾಟಂ ತನ್ನಂ ಬೆಂಬತ್ತಲು
ಸುಖಮುಖದಿಂದಂ ಮನಮಂ ಸುತ್ತಲು
ಒಳಗಾಡಿದೆನೆನಿತುಂ ದಿನವೆನುತಂ
ಇಳೆಯಱಿಯಲು ಹೊಱಗಾಡುವೆನೆನುತಂ
ದಶಭುಜಮಂ ದಿಗುತಟದೊಳ್ ಪಸರಿಸೆ
ಎಸೆವ ಕರಂಗಳನೆತ್ತಲ್ ನೇಮಿಸೆ
ಒಂದು ಪದಂ ಪಾತಾಳವನೊತ್ತಲು
ಒಂದು ಪದಂ ಬ್ರಹ್ಮಾಂಡವನೆತ್ತಲು
ಜಡೆಗಳು ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳು ಸುರನದಿ ತುಳುಕಾಡುತ್ತಿರೆ

ತಡಿಯೊಳು ಶಶಿಕಳೆಯೆಳ್ದಾಡುತ್ತಿರೆ
ಕಡುಚಳುವಳಕಂ ಕುಣಿದಾಡುತ್ತಿರೆ
ಮಿಸುಕುವ ಡಮರುಗ ಡಂಡಂಡಣರೆನೆ
ತಿಸುಳದ ಹರಿಯವತಾರಂ ತಿರ್ರನೆ
ತಿರುಗುತ್ತಿರಲಹಿಗಳ್ ಪಡೆಯೆತ್ತಲು
ಕರಿಯ ತೊವಲು ನಭಮಂ ಬೋಹರಿಸಲು
ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ
ಹೊಂಗೆಜ್ಜೆಗಳ ರವಂ ಘಲಘಲಕೆನೆ
ತೊಂಗಲ ಘಂಟೆ ಢಣಂ ಢಣರೆಂದೆನೆ

ಆಡಿದನಾಡಿದನಾಹಾ ಶಂಕರ
ನಾಡಿದನಾ ಗುಂಡನ ಮುಂದೀಶ್ವರ

ಆಗಳೆ ಸುರಲೋಕದ ವಾದ್ಯಂ ಬರೆ
ಬೇಗಂ ತುಂಬುರರುಗ್ಗಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮಡಕೆಯ ವಾದ್ಯವೆ ಸಾಕೆಂದೆನುತಿರೆ
ಶಿವನಂ ಕಂಡಾಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಇರ್ಬರನೀಕ್ಷಿಸಿ ಗಣತತಿಯಾಡಲು
ಸರ್ಬಸ್ಥಾವರ ಜಂಗಮವಾಡಲು

ಮಡಕೆಯ ಸಬುದಕ್ಕಾಡುತ್ತಿರ್ದಂ
ಮೃಡನಖಿಳಂ ಬೆಱಗಾಡುತ್ತಿರ್ದಂ
ನಾನಾಮುಖದಾನಂದಂ ಪುಟ್ಟಲು
ನಾನಾರವವಂಬರವಂ ಮುಟ್ಟಲು
ಗಿರಿಸುತೆ ಕಂಡತಿಚೋದ್ಯವೆನುತ್ತಂ
ನರಲೋಕಂ ಕೆಡಲಾಗದೆನುತ್ತಂ
ಮೀಱಿದೊಡರಿದೀಶನ ಪರಿ ಎನುತಂ
ಮೀಱದ ಮುನ್ನವೆ ಮಾಣಿಪೆನೆನುತಂ
ದೇವ ಸದಾಶಿವ ಶಾಂತಪ್ರಭುವೇ
ದೇವ ಸುಧಾಕರಧರ ಮಮವಿಭುವೇ

ಕರುಣಿಸನಂತ ವಿಭೂಷಣ ಭೂಷಿತ
ಕುರುಣಾಕರ ಸಜ್ಜನವರ ಪೋಷಿತ
ಕರುಣಿಸು ಶೂಲಧರ ಪ್ರತಿಶೂನ್ಯನೆ
ಕರುಣಿಸು ಶಿವ ಭಕ್ತಾಳಿಗನನ್ಯನೆ
ಭರ್ಗನೆ ಭೀಮನೆ ಭಾಳೇಕ್ಷಣನೇ
ದುರ್ಗತ್ರಯ ಕಾನನಹುತವಹನೇ
ಕುರುಣಿಸೆನುತ್ತಂ ಗಿರಿಸುತೆ ಪೊಗಳಲು
ಕರುಣಾರವಮಂಬಿಕೆಯೊಳು ನೆಗಳಲು
ಕೇಳುತೆ ಮೆಲ್ಲನೆ ನಾಟ್ಯವನುಡುಗುತೆ
ಶೈಲಜೆಯಿಚ್ಛೆಗೆ ಸಮತೆಗೆ ಸೇರುತೆ

ಆಡುವ ಗಣಕುಲವಮಂ ಸಂತೈಸುತೆ
ನೋಡುವ ಪಾರ್ವತಿಗಭಯವನೀವುತೆ

ಕುಣಿದಾಡುವ ಗುಂಡಯ್ಯನನೀಕ್ಷಿಸಿ
ತ್ರಿಣಯ ಸದಾನಂದದೊಳಾಲಂಗಿಸಿ
ಛಂದದಿ ಮೂರ್ಧ್ನಿಘ್ರಾಣಂ ಮಾಡುತೆ
ಇಂದುಧರಂ ಗುಂಡಯ್ಯನ ನೋಡುತೆ
ಹೊಸ ಪುಷ್ಪಕದೊಳು ಹರುಷದೊಳೇಱಿಸಿ
ಪಶುಪತಿ ದೇವ ಗಣಾಳಿಗೆ ತೋಱಿಸಿ
ತರದಿಂ ಸೂಸುವ ಹೊಸ ಹೂಮಳೆಯೊಳು
ನೆರೆದು ವಿರಾಜಿಪ ಮುರಜಧ್ವನಿಯೊಳು

ನೆಗೆವಂ ಗಗನತಳಕ್ಕೆ ಮಹೇಶಂ
ಬಗೆ ಮಿಗೆ ನಡೆತಂದಂ ಗಿರಿಜೇಶಂ
ನಲವಿಂ ಕಲಧೌತಾದ್ರಿಯೊಳೊಪ್ಪುವ
ನಿಲಯದೊಳಗೆ ಪೊಸಕಾಂತಿಯೊಳೊಪ್ಪುವ
ಭದ್ರಾಸನಮಂ ಮೇಳೈಸುತ್ತಂ
ರುದ್ರಂ ಗುಂಡಯ್ಯನನೋವುತ್ತಂ
ಜಗವೆಲ್ಲವನೊಲಿದಾಡಿಸುವವನಂ
ಬಗೆಮಿಗೆ ಎನ್ನಿಚ್ಛೆಯೊಳಿರ್ಪನ್ನಂ
ಮಡಕೆಯ ದನಿಗಾಡಿಸಿದವರುಂಟೆ
ಪೊಡವಿಯೊಳಿಂತಪ್ಪನ್ನತರುಂಟೆ

ಎಂದನವರತಂ ಕೊಂಡಾಡುತ್ತಂ
ಇಂದುಧರಂ ನೆಱೆ ಮುಂಡಾಡುತ್ತಂ
ಗಣಪದವಿಯ ಗುಂಡಯ್ಯಂಗೀವುತೆ
ಗಣ ಸಂಕುಲದೊಳು ಸುಖದಿಂದೋವುತೆ
ಹರನೊಪ್ಪಿದನಘಹರನೊಪ್ಪಿರ್ದಂ
ಗಿರಿಜಾಪತಿ ಭವಹರನೊಪ್ಪಿರ್ದಂ
ಭಕ್ತರ ಭಾಗ್ಯದ ನಿಧಿಯೊಪ್ಪಿರ್ದಂ
ಭಕ್ತರ ಚಿಂತಾಮಣಿಯೊಪ್ಪಿರ್ದಂ
ಶರಣರ ಸಂಗದ ಸುಖಿಯೊಪ್ಪಿರ್ದಂ
ಹರಿಯಜರಱಿಯದ ಶಿವನೊಪ್ಪಿರ್ದಂ

ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಖಂಡಶಶಿಮೌಳಿ ಕುಂಬಱ
ಗುಂಡನ ಸುತನೆಂದು ಭಕ್ತಿಯಂ ಕುಡುಗೆನಗು
ದ್ದಂಡತರದಂಡಧರಹರ
ಮಂಡಿತನಯನಂ ಪುರಾರಿ ಹಂಪೆಯ ದೇವಂ

ತಿರುಕೊಳನಿನಾಚಿಯು ಪ್ರಲಾಪ

" ತ್ರಿಪುಡೆ "

ಮಗನೆ ನೀನಿಂತಳಿಯೆ ಸೈರಿಪೆನೆಂತೊ ಪೇಳ್ವೈ ಶಂಕರಾ
ಸುಗುಣನಿಧಿ ನೀನೆನ್ನ ಮೊರೆಗಳನೊರ್ಮೆ ಕೇಳ್ವೈ ಶಂಕರಾ
ಪರಸಿಪಾಡಿ ಮಹೇಶನಿಂದವೆ ಬೇಡಿ ಮುನ್ನಂ ಶಂಕರಾ
ತುರಗಖುರಕೆಂದಕಟ ಪೆತ್ತೆನೆ ಕುವರ ನಿನ್ನಂ ಶಂಕರಾ
ಎಂತು ಮರೆವೆನೊ ಸವಿಯುಸಾಲಿಡುವಮುರ್ದು ನಗೆಯುಂ ಶಂಕರಾ
ಕಾಂತಿ ಶೋಭಿಸೆ ಮುದ್ದುವೀರುವ ಮೊಗದ ಬಗೆಯುಂ ಶಂಕರಾ
ಝುಣಝುಣಿಸೆ ಕಿರುಗೆಜ್ಜೆ ಕರತಳ ತಾಳರವಕೆ ಶಂಕರಾ
ಕುಣಿವ ನಿನ್ನಯ ಬಿನದವೊಪ್ಪುಗುಮೆನ್ನಮನಕೆ ಶಂಕರಾ
ಶರಣಪದ ಪಂಕಜ ರಜಂಗಳೊಳಾಳದಂತು ಶಂಕರಾ
ತುರಗ ಖುರಹತಿಜನಿತಧೂಳಿಯೊಳಳಿದೆಯಿಂತು ಶಂಕರಾ
ಎನ್ನನೋವುವನೆಂದು ನಂಬಿರಲಿಂತು ಮಡಿದೈ ಶಂಕರಾ
ಮುನ್ನಮೆನ್ನಯ ಹರ್ಷವಲ್ಲಿಯು ಕುಡಿಯನುಡಿದೈ ಶಂಕರಾ
ನಿನ್ನಳಿವನೀಕ್ಷಿಸಿಯುಮೆನ್ನಸು ಪೋಗದಂದು ಶಂಕರಾ
ನಿನ್ನೊಳೆನ್ನಯ ಕೂರ್ಮೆ ನಿಜಮೆಂತೆನಿಪುದಿಂದು ಶಂಕರಾ
ಹರಣದಳಿವಿಂಗಂಜುವೆನೆ ನಿನ್ನಾಣೆ ಮಗನೇ ಶಂಕರಾ
ಶಿರವರಿದು ನಿನ್ನಂದವಾಗದೆ ಪಿಂಗಿದಪೆನೇ ಶಂಕರಾ

ವ|| ಎಂದು ನಂದನನ ಗುಣವೃಂದಮಂ ನೆನೆನೆನೆದಾಕ್ರಂದಿಸಿ ಮತ್ತಮಿರದೆ—

ಪರಮಕೃಪಾಕರನೆಂಬೀ
ಬಿರುದಂ ಬಿಸುಟೆಕಟ ಶಂಕರಾ ಶಂಕರನಂ
ಹರಸಿ ನಡುಗಾಡೊಳಂಥೆಯ
ಕರದಂಡಮನೆಳೆದುಕೊಂಡಪೋಲ್ಮಾಡಿದೆಯೈ
ಎಲೆ ಗಿರಿಜಾತೆ ಮಾತೆ ಕರುಣಾಕರಿ ಶಾಂಕರಿ ದಿವ್ಯರೂಪೆ ನಿ
ರ್ಮಲೆ ನಿಗಮಾಗಮಸ್ತುತೆ ಮಹೇಶ್ವರಿ ಮಂಗಳಮೂರ್ತಿ ಭಕ್ತವ
ತ್ಸಲೆ ರತಿಗಂದಳಲ್ಗಳಿದ ದೇವಿ ರಮಾನತೆ ನೊಂದೆನಿಂದು ನಿ
ನ್ನಲಘು ಕೃಪಾಕಟಾಕ್ಷದಿನಭೀಕ್ಷಿಸಿ ರಕ್ಷಿಪುದೆನ್ನನಂಬಿಕೇ

ಅದ್ಭುತರಾಮಾಯಣ

ಸೀತಾ ಜನನ

ವಿಪ್ರೋತ್ತಮನೆ ಕೇಳ್, ನಾರದನ ಶಾಪಕೆಂತಾ ಮಾಲಕುಮಿ ಮುನಿಗಳ ರಕ್ತದಿಂ ರಕ್ಕಸಿಯ ಬಸಿಱೊಳಾದಳ್, ಮೇಣವಳೇ ತಿರೆಯಣುಗಿಯಾದಳಾ ಬಗೆಯನೀಗಳ್ ಪೇೞ್ವೆಂ, ಎಂತೆನೆ;

ಈ ಜಂಬೂದ್ವೀಪಕೆ ತೆಂಕಲ್ಗೆ ಲಂಕೆಯೆಂಬೊಂದು ದೀವಿಯಿರ್ಕುಂ. ಅದರ್ಕೊಡೆಯಂ ರಕ್ಕಸರೊಳ್ ಸಂದ ಈರ್ರೈವೊಗಂ ರಾವಣಂ. ಒರ್ಮ್ಮೆ ತನಗೆ ಮುಪ್ಪೊೞಲೊಡೆತನಮುಂ ಬರ್ಪಂತೆ ಮೇಣ್ ಮುದಿವೞ್ವುಂ ಬಾರದಂತೆ ವಿಧಿಯಂ ಒಲಿಸಿಕೊಳ್ವುದೆಂದು ಬಗೆದಂದು, ಪುಣ್ಯಭೂಮಿಯೊಳ್ ಪಿರಿದುಂ ಕಾಲಂ ತಪಂಗೆಯ್ಯುತಿರೆ; ತತ್ತಪಃಪ್ರಭಾವದಿಂ ಮೂಲೋಕ ಮುರಿಗೊಂಡುದು.

ಇಂತಿದನಱಿತು ಬ್ರಹ್ಮಂ ತಾನಸುರೇಂದ್ರಂಗೆ ಪ್ರತ್ಯಕ್ಷನಾಗುತಿಂತೆಂದಂ:

" ಪೌಲಸ್ತ್ಯ ! ಆಲಿಸು, ಬಲ್ದಣಿದೆ. ಇಂದು ಮೊದಲ್ಗೊಂಡು ತಪಸಂತವಿಸ್ಕೆ. ಈಯುಗ್ರತಪಸಿನತ್ತಣಿಂ ಲೋಕಂ ಬೇವುದು ; ಅದಱಿಂ ಬೇಡುವುದು ಮನದಿರವಂ, ಕರುಣಿಪೆಂ" ಎಂಬುದುಂ: ಕೈಕಸಿಯಣುಗಂ ಕಣ್ಣೆತ್ತಿ ಕಮಲಾಸನಂಗೆ ಕಾಲ್ಗೆಱಗಿ ಕೈಯ್ಜೋಡಿಸಿ ಕಡೆಗೆಂದಂ—ದೇವ ನೀನೆ ಮಾದೇವಂ ನೀನೆ ಮಾಧವಂ, ದಿಟಂ. ಏಗಳ್ ನೀಂ ಮೈದೋರ್ದಯೋ, ಆಗಳೆ ಎನ್ನ ಕಾಮಿತಮೆಲ್ಲಂ ಕೈಗೂಡಿದತ್ತಾದೊಡಂ ಬಾಯ್ಬಿಟ್ಟು ಬೇೞ್ಪೆನೊಂದಂ. ಏನೆನೆ—
ಸರ್ವಾಮರತ್ವಮಂ ನೀ ದಯೆಗೆಯ್ವುದು, ಎಂಬುದುಂ; ದ್ರುಹಿಣಂ ನಿರಾಕರಿಸಿ—" ಪೆಱತೊಂದನೇನಾನುಮಿಚ್ಛಿಪುದು " ಎಂದಂ. ಅದರ್ಕೆ ದಶಾಸ್ಯಂ ಎಣಿಕೆಯಿಂ—ಸಗ್ಗಿಗರ ಪಿರಿಯ ! ಎಮ್ಮವರುಂ, ನಿಮ್ಮವರುಂ ಯಕ್ಷರುಂ, ನಾಗರುಂ, ಗಂಧರ್ವರುಂ, ಪಿಶಾಚರುಂ ತನ್ನಂ ಕೊಲಲ್ಬಾರದು. ಮತ್ತಂ ಎಂದೆನ್ನ ಮಗಳನೆ ದುರ್ಮತಿಯಿಂ ಬಯಸುವೆನಂದು ಮಿೞ್ತುವೆನ್ನಂ ಮುಟ್ಟುಗೆ. ಇಂತಾದೊಡಂ ವರಮನೀವುದು" ಎನೆ—"ಅಪ್ಪುದು" ಎಂದು ತಿಳಿಪಿ, ಪಿತಾಮಹಂ ಪೋದಂ.

ಓಶಂತೆ ರಾವಣನುಂ ತನಗಾರುಂ ಮುಪ್ಪೊೞಲೊಳುಂ ಎಣೆವಾರರೆನುತೆ ದರ್ಪದಿಂ ದಿಗ್ವಿಜಯಾರ್ಥಂ ಪೊಱಮಟ್ಟಂ. ಏನೊರೆವನೀ ರಕ್ಕಸನ

ಬೀರಮುಂ ! ಸಗ್ಗಮುಂ ಸಾರ್ದು ಮುಗಿಲ್ದೇರನನಟ್ಟಿ, ಬರ್ದಿಲರಂ ಸೋಲಿಸಿ, ಕನ್ನೆವೆಣ್ಗಳಂ ಸೆಱೆವಿಡಿವಂ. ಓರೊಂದೆಡೆಯೊಳ್ ಅಚ್ಚರಿಯರನೊಚ್ಚತಂ ಕೊಂಡುಯ್ವಂ : ಮೇಣೊರ್ವೆ ಕೀೞಿಳೆಗೆ ದಾೞಿಯಿಡುತೆ ಪಾಯ್ದು ಮಾಸೇಸನ ಬಂಡಾರಮನಪಹರಿಸಿ ನಾಗಕನ್ನಿಕೆಯರಂ ಪಿಡಿದು ತರ್ಪಂ. ಎಣ್ದೆಸೆಯಾಣ್ಮರಂ ಗದ್ದಿಸುವಂ. ಆಂ ಪೇೞೆ ನವನುಪಟಳಮುಂ. ಇಂತಾಗೆ ಲೋಕದೊಳಿರ್ಪ ದ್ರವ್ಯಮೆ ಅವನ ಬೊಕ್ಕಸಂ !- ದೆಸೆಯಾಣ್ಮರೆ ಊೞಿಗದ ವರ್ ; ದೇವಗಂಧರ್ವಸ್ತ್ರೀಯರೆ ದಾಸಿಯರ್ ; ಮನಂಗೊಂಡ ಪೆಣ್ಗಳೆ ಪೆಂಡಿರ್ ; ಲೋಕಮೆ ಅವನ ರಾಜ್ಯಮಾಗೆ ಪೆಱತೇಂ ಪೇೞ್ವುದೈ ! ಈ ತೆಱಮಿರಲೊಂದಾನೊಂದು ದಿನಮಾಖಳಂ ದಂಡಕವನಕೆಯ್ತಂದು, ಆ ತಾಣದ ರಿಸಿಗಳಂ ದಿಟ್ಟಿಸಿ ಬಗೆಯೊಳ್-ಈ ಮುದಿಪಾರ್ವರಂ ಗೆಲ್ಲದಿರಲಾ ಸೀಮುಪ್ಪೊೞಲೊಡೆಯ ನಾಗಿಯುಮಲ್ತು ; ಮೇಣಂತಿವರನಱಿಸಿದೊಡಂ ಜಸಂ ಬರ್ಪುದಿಲ್ಲಂ ; ಆದುದಱೆನೆಂತಾನುಂ ಗೆಲ್ಮೆಗೆಯ್ಮೆಯುಂ ಕಾಣ್ಬುದು ಎಂದು ಬಗೆದು, ಆ ಮುನಿಗಳನೆಲ್ಲರಂ ಪಿಡಿತಂದವರ್ಗೆ-ತಾಂ ದಿಗ್ವಿಜ ಯಾರ್ಥಂ ಬಂದಿರ್ಪೆನೆಂದುಂ, ಅದರ್ಕೋಸುಗಂ ಜಯಲಾಭಾರ್ಥಂ ನೆತ್ತ ರನೇ ಕೊಳ್ವೆನೆಂದು ತಿಳಿಪಿದಂ. ಆಗಳವರ್ ನಿರ್ಬಂಧದಿನೊಪ್ಪೆ, ದುರಾತ್ಮನವ ರೊಳೋರೊರ್ವನ ಮೆಯ್ಯುಚರ್ಮತೋರೊರ್ವನ ಕೆನ್ನೀರನೊಟ್ಟೆಸಿ, ಗ್ರಸ್ತ ಮದನೆಂಬೊರ್ವಂ ತನಗೆ ಸಹಸ್ರ ಪುತ್ರರಿರ್ದೊಡಂ, ಮಗಳ ಬರುಕೆಯಿಂ ಸಿರಿಯೆ ಅಣುಗಿಯಾಗಿ ಪುಟ್ಟಲ್ವೇೞ್ಕುಮೆಂದುಂ ದಿನ ದಿನಂ ಪತಿವೆರಸು ವಿಧಿಪೂರ್ವಕಮಿಟ್ಟು, ಕುಶಾಗ್ರದಿಂ ಪಾಲೆಱೆದು ಪೂಜಿಪ ಪೊಂಗಳಸದೊಳ್ ಈತನಱೆಯುದವೋಲ್ ತುಂಬಿಸುತೆ, ಗೆಲ್ಲದ ಗುಱುತೆಂದು ಸಂತಸದಿಂ ತನ್ನ ಲಂಕೆಯತ್ತಲ್ ಕೊಂಡೊಯ್ದಂ.

ಅಂತು ತನ್ನ ಬೀಡಿಂಗೆಯ್ತಂದ, ಪಟ್ಟಮಹಿಷಿಯಪ್ಪ ಮಂಡೋದರಿಯುಂ ಕರೆದು-"ಎಲೆ ಮಡದಿ, ಇದೆಕೊಳ್ ಕೊಡಂ, ರಿಸಿಗಳನಂಜುನೆತ್ತರಿಂ ತುಂ ಬಿರ್ಕುಂ. ಮೂಜಗಂ ಗೆಲ್ದ ಗುಱುತಿಂಗೆಂದು ತಂದಿರ್ಪೆಂ, ಜೋೞಕೆಗೆಯ್ವುದು. ತುಡುಗುಗೊಂಡು ಕುಡಿಯದಿರ್. ಮೇಣಾರ್ಗುನೊರೆಯದಿರ್ " ಎಂದೆಚ್ಚಱಿ ಸುತೆ, ಆಕೆಯ ಕೈಯೊಳಿತ್ತು, ತಾನೆಂದಿನಂತೆ ಲಂಪಟತ್ವದಿಂ ಪೊಱಮಟ್ಟು ಮಂದರಂ ಮುಂತಪ್ಪ ಬೆಟ್ಟುಗಳೆಡೆಯೊಳ್ ದೇವಗಂಧರ್ವಾದಿ ನಾರಿಯ ರೊಡನೆ ವಿಹರಿಸುತಿರ್ದಂ. ಮುನಿಕುಲಲಲಾಮ! ಕೆಲಗಾಲಮೀತೆರಂ ಪೋಗೆ; ರಕ್ಕಸನ ಈ ನಡತೆ ಮಂಡೋದರಿಗೆ ಸೊಗಯಿಸಿತಿಲ್ಲಂ. ಎಱೆಯನಾವಗಂ ಪೆಱವೆಣ್ಗಳೊಳೆ ಎಱಕಂಗೊಂಡು ತನ್ನಂ ಕಾಣನೆಂಬ ಪುರುಡಿಂ ನಿಚ್ಚಂ ಬೇಗುದಿಗೊಂಡು ತನಗೆ ತಾಂ-ಚಿ; ಸುಡು, ಪೆಣ್ಣೀ ಬಾೞ್ಕೆಯುಂ, ಆಂ ಕೈದಾರೆಯ ಪೆಂಡತಿಯಿರಲ್, ಓಪಂ ಪರನಾರಿಯರೊಳಾಗಳುಂ ಮೆರೆಯು

ತಿರ್ಪುದೆನೆ ತಾನಿರ್ದುಂ ಪಾಡೆ! ಲೋಗರ ನಿಂದೆಗೆಡೆಯಾಗೆನೆ! ಬೞಿಗ ಮೊಂದು–ಕುಂದಲ್ತೆ! ಇರ್ಕೆ. ಮುಂತೆ ಗತಿಗಾರುಂ ಬೇಡವೇ ಪೆಱವೆಣ್ಗ ಳಣುಗರ್ಗೆಯೆ ಪಟ್ಟಂಗಟ್ಟುವನೇ ಅಕ್ಕಟಾ! ಇನಿತೆಲ್ಲಮಂ ಬರ್ದುಂಕಿದಾ ನೆಂತು ಕಂಡು ಸೈರಿಪೆಂ! ಅಕ್ಕೆ. ಇದರ್ಕೆ ಮರ್ದೞಿವೆನೆನುತೆ, ಮುನ್ನಂ ರಾವಣಂ ತಂದಿತ್ತ ರುಧಿರಮಂ ನಂಜು ನೆತ್ತರೆನುತೆಯೆ ಬಗೆದು, ಕುಡಿದಳ್. ಕೆಂಡಗಿರ್ಚನಿಡೆ ಮನೆ ಸುಡುಗುಮೆಂದು ಖಂಡಮಾಣಿಕ್ಯಮನಿಡೆ ಸುಡು ಗುಮೊ? ನಂಜಾದೊಡಲ್ತೆ ಸಾವುದು, ಅಮರ್ದಾದೊಡೇಂ! ಬೞಿಕಮಾ ಕಾಂತೆಯೊಳಾ ನೆತ್ತರೆ ಬಿತ್ತಾಗೆ ಬಸಿಱ್ ಕಡಂದುಱುಗೂಡಿನೋಲ್ ದಿನ ಕ್ರಮದಿಂ ಬಳೆಯುತಿರ್ದುದು.

ಇಂತಿರೆ, ಮಂಡೋದರಿಗೆ ದುಗುಡಮೆಣ್ಮಡಿಯಾಗೆ–ಪತಿಯೆನ್ನನೇಳಿಸಿ ದನೆಂದಿಂತೆಸೆಗೆ, ಲೋಗರುಮೇಳಿಸುವುದಾಯ್ತು ಗಡ! ಬಾವಱಿದು ಬಲ್ಬುಣ್ಣಾದುದು. ಅಃ! ನಾಣಲಿ ಜೀವಮಿನ್ನುಂ ಪೋಗದು; ಏವೆಂ?–ಎಂದು ಪರಿ ಪರಿ ಯೋಚಿಸಿ, ಮತ್ತಮಾ ಹದಿಬದೆ, ದೇವರಿಚ್ಛೆಯಿನ್ನಾರ್ ಮೀಱ ಲಾರ್ಪರೆನುತೆ, ತನಗೆ ತಾಂ ಸಂತೈಸಿ ಕೊಂಡೊಡನೆ ವಿಮಾನಮನೇರ್ದು, ಯಾತ್ರಾರ್ಥಂ ಪೊಱಮಟ್ಟಳ್ ಬರೆವರೆ, ಮುಂತೆ ಕುರುಕ್ಷೇತ್ರದೊಳ್ ರತಿ ಯತ್ತಣಿಂ ನಾಲ್ಮಡಿ ಸೊಬಗಿನ ಪೆಣ್ಗೂಸಂ ಪಡೆವುದುಂ; ಕಲ್ಮನಂಗೊಂಡು ಕೂಸಂ ಪೇಳಿಗೆಯೊಳ್ ಕ್ಷೇತ್ರದೊಳ್ ನೆಲದೊಳ್ ಬಯ್ತಿಟ್ಟು, ಎಂತಾನುಂ ಮುಂತಣ ಅಪವಾದಂ ತಪ್ಪಿತೆಂದು ನಿಜಪುರಿಗೆ ತಿರುಗಿದಳ್. ಬಹುದಿನಮಿಂತು ಕಳೆಯಲೊಂದು ದಿನಂ ಮಿಥಿಲೆಗೊಡೆಯು ಜನಕನೆಂಬೊರ್ವ ರಾಜರ್ಷಿ ತಾನಾಕ್ಷೇತ್ರಕೆಯ್ತಂದು ಜನ್ನಮಂ ಗೆಯ್ಯಲೆಂದು ನೆಲನಂ ಶೋಧಿಸುತಿರೆ; ಪುಣ್ಯದಿನೀ ಪೇಳಿಗೆ ದೊರೆಯೆ; ಬಾಯ್ದೆಱೆಯಲಚ್ಚರಿಗೆ; ಜೀವಂಗೊಂಡ ಚಿತ್ರಪುತ್ತಱಿಯಂತೆ ರಂಜಿಪೀಬಾಲೆಯಂ ಕಂಡಂ. ಒಡನೆಯೆ ಗಗನದತ್ತಣಿಂ ಪೂಮೞೆಯವಳ ಮೇಲೆ ಕಱೆದುದು ಮೇಣ್– "ಎಲೈ ರಾಯ. ಪೆಱತೆಣ್ಣ ದಿರ್. ಇವಳ್ ಸಾಕ್ಷಾಲ್ಲಕ್ಷ್ಮಿ, ಪುಣ್ಯವಿಶೇಷದಿಂ ದೊರೆಕೊಂಡಳ್, ಇವಳಂ ಮನೆಗುಯ್ದು, ಮಗಳೆಂದೆ ಪಾಲಿಸು" ಎಂದು ಬಾನ್ನುಡಿಯೊಂದಾದುದು.

ಬೞಿಕಮಾರಾಯಂ ಸಂತಸಂಗೊಂಡು ಮನೆಗುಯ್ದು, ನೇಗಿಲಿನೆಟ್ಟಿ ಬಂದುದಱಿಂ ಸೀತೆಯೆಂಬ ಪೆಸರಿಟ್ಟು, ಕರುಣೆಯಿಂ ಪಾಲಿಸುತೆ, ಕೈಕೊಂಡ ಜನ್ನಮಂ ಪೂರೈಸಿ, ಸಪ್ತಾಂಗದೊಳ್ ರಾಜ್ಯಮುಮಂ ಕಾಣುತೆ, ಸದಾ ಸಂತೋಷದೊಳಿರ್ದಂ.

' ವಿಕ್ರಮಾರ್ಜುನ ವಿಜಯ '

ಇದನ್ನು ಬರೆದವನು ಆದಿಕವಿ ಪಂಪ. ಅವನನ್ನು ನಾಡೋಜ ಪಂಪ ಎಂದೂ ಕರೆಯುತ್ತಾರೆ. ಜೈನಕವಿಯಾದ ಅವನು ವ್ಯಾಸಭಾರತವನ್ನು ತನ್ನ ರಾಜನ ಮೆಚ್ಚಿಗೆಗಾಗಿ ಕಥೆಯ ಮೈ ಕೆಡದಂತೆ ಸಂಗ್ರಹಿಸಿದ್ದಾನೆ. ಕಥೆಯಲ್ಲಿ ಅಲ್ಲಲ್ಲಿ ಜೈನ ಸಂಪ್ರದಾಯಗಳು ಸುಳಿದಿವೆ. 'ಪಂಪಭಾರತ' ಎಂದು ಪ್ರಸಿದ್ಧವಾದ ಕನ್ನಡದ ಈ ಆದಿಕಾವ್ಯದಲ್ಲಿ ಕವಿ ಭಾರತದ ಅರ್ಜುನನನ್ನು ನಾಯಕನನ್ನಾಗಿ ಕಲ್ಪಿಸಿಕೊಂಡು ಅವನಲ್ಲಿ ತನ್ನ ದೊರೆಯಾದ ಚಾಲುಕ್ಯರ ಅರಿಕೇಸರಿಯನ್ನು ಸಮನ್ವಯಗೊಳಿಸಿ ಕಥೆ ಹೇಳಿದ್ದಾನೆ. ಇದು ಲೌಕಿಕ ಕಾವ್ಯ.

ಕವಿ ಹುಟ್ಟಿದ್ದು ಕ್ರಿ. ಶ. ೯೦೨, ದುಂದುಭಿ ಸಂವತ್ಸರ. ಇವನಿಗೆ 'ಕವಿತಾಗುಣಾರ್ಣವ', 'ಸುಕವಿಜನಮನೋ ಮಾನಸೋತ್ತಂಸ ಹಂಸ', 'ಸರಸ್ವತೀ ಮಣಿಹಾರ', 'ಸಂಸಾರ ಸಾರೋದಯ' ಎಂಬ ಬಿರುದುಗಳಿದ್ದವು. ಈತನ ಗುರು ದೇವೇಂದ್ರಮುನಿ. ಪುಲಿಗೆರೆಯ ಚಾಳುಕ್ಯ ರಾಜನಾದ ಅರಿಕೇಸರಿಯ ಆಸ್ಥಾನ ಪಂಡಿತ. 'ಆದಿಪುರಾಣ'ವೆಂಬ ಜೈನಧರ್ಮ ಪ್ರತಿಪಾದಿತವಾದ ಆದಿ ತೀರ್ಥಂಕರನ ಚರಿತ್ರೆಯನ್ನೊಳಗೊಂಡ ಧಾರ್ಮಿಕ ಕಾವ್ಯವೊಂದನ್ನು ರಚಿಸಿದ್ದಾನೆ. ಈತನ ತಂದೆ ಅಭಿರಾಮದೇವರಾಯನು ಜೈನಮತವನ್ನು ಅವಲಂಬಿಸಿದನು. ಪಂಪನ ತಾತ, ಮುತ್ತಾತರು ಬ್ರಾಹ್ಮಣರು. ಇವನ ಹುಟ್ಟೂರು ಬನವಾಸಿ. ಆ ಊರಿನ ಮೇಲೆ ಅವನಿಗೆ ತುಂಬ ಅಭಿಮಾನ. ಕಾವ್ಯವನ್ನು ಪುಲಿಗೆರೆಯ ತಿಳಿಗನ್ನಡದಲ್ಲಿ ರಚಿಸಿದ್ದಾನೆ. ಇವನನ್ನು ಮುಂದಿನ ಅನೇಕ ಕವಿಗಳು ಹೊಗಳಿದ್ದಾರೆ. ಅವನ ಕಾವ್ಯದ ಪ್ರಭಾವ ೧೭ನೆಯ ಶತಮಾನದವರೆಗೂ ಕಂಡುಬರುತ್ತಿತ್ತು.

ಪ್ರಾರಂಭದಲ್ಲಿ ನಾರಾಯಣನನ್ನೂ ಅರಿಕೇಸರಿಯನ್ನೂ ಶ್ಲೇಷಾರ್ಥದಿಂದ ಹೊಗಳಿ, ಈಶ್ವರನ ಮತ್ತು ರಾಜನ ಸಮಾನಗುಣಗಳನ್ನು ವಿವರಿಸಿ ಮಹೇಶ್ವರನನ್ನು ಸ್ತುತಿಸುತ್ತಾನೆ. ಹಾಗೆಯೇ ಸೂರ್ಯನನ್ನೂ ರಾಜನನ್ನೂ ಹೊಗಳುತ್ತಾನೆ. ಅನಂತರ ತನ್ನ ಕಾವ್ಯದ ಉದ್ದೇಶ, ತನ್ನ ಸಾಮರ್ಥ್ಯಗಳನ್ನು ಪ್ರಶಂಸಿಸಿಕೊಳ್ಳುತ್ತಾನೆ.

೧. ಖಾಂಡವವನ ದಹನ

ಕೃಷ್ಣ, ಅರ್ಜುನ ಒಮ್ಮೆ ವಿಹಾರಕ್ಕೆ ತೆರಳಿದ್ದಾಗ ಉರಿಯ ಬಣ್ಣದ ಬ್ರಾಹ್ಮಣನೊಬ್ಬನು ಅರ್ಜುನನ ಎದುರಿಗೆ ಬಂದು ನಿಲ್ಲುತ್ತಾನೆ. ಇಂಥ ಬ್ರಾಹ್ಮಣ ಕೇಳಿದ್ದನ್ನು

ನಡೆಸಿಕೊಟ್ಟರೆ ತನಗೆ ಅದಕ್ಕಿಂತ ಪುಣ್ಯವಿಲ್ಲೆಂದು ಮನಸ್ಸಿನಲ್ಲಿ ಅರ್ಜುನ ಭಾವಿಸಿಕೊಂಡಿರುವಾಗ ಆ ಅಗ್ನಿಪಾರ್ವ ವೇದಘೋಷಗಳಿಂದ ಅರ್ಜುನನಿಗೆ ಆಶೀರ್ವಾದ ಮಾಡಿ ಮಂತ್ರಾಕ್ಷತೆಗಳನ್ನು ನೀಡುತ್ತಾನೆ. ಅರ್ಜುನ 'ತಮ್ಮ ಅಪೇಕ್ಷೆಯೇನೆಂದು' ಕೇಳಿದಾಗ, ಅಗ್ನಿ 'ನನಗೆ ಸಂಪತ್ತು ಬೇಡ, ನನಗೆ ತುಂಬ ಹಸಿವಾಗಿದೆ, ತೃಪ್ತಿ ಆಗುವವರೆಗೆ ಬಡಿಸಿ' ಎಂದ. 'ತಥಾಸ್ತು' ಎಂದ ಅರ್ಜುನ. ಅಗ್ನಿಪುರುಷನ ಮೋಸವನ್ನು ಅರ್ಥಮಾಡಿಕೊಳ್ಳಲಿಲ್ಲವೆಂದು ಕೃಷ್ಣ ವಿಕ್ರಮಾರ್ಜುನನನ್ನು ಆಕ್ಷೇಪಿಸಿದನು. 'ಹಸಿದ ಬ್ರಾಹ್ಮಣ ಆಹಾರ ಕೇಳಿದ, ನಾನು ಅದನ್ನು ಕೊಟ್ಟೆ, ಅದರಿಂದ ಆದದ್ದೇನು' ಎಂದನು. ಆಗ ಕೃಷ್ಣ ಹೇಳಿದ: 'ಇವನು ಅಜಮುಖ ವ್ಯಾಘ್ರ, ಇವನು ಬಿಳಿದನ್ನು ಕರಿದು ಮಾಡುವ ಮೋಸಗಾರ. ಇವನು ಇಂದ್ರನ ವನವನ್ನು ಸುಡಲು ಅನುಮತಿ ಕೇಳಿದ್ದಾನೆ, ಇವನು ಬೇರೆ ಯಾರೂ ಅಲ್ಲ, ಅಗ್ನಿ. ಆಗ ಅರ್ಜುನ ತನ್ನ ಬಲವನ್ನೂ ತ್ಯಾಗಶಕ್ತಿಯನ್ನೂ ಹೊಗಳಿಕೊಳ್ಳುತ್ತಾನೆ. ಕೃಷ್ಣ ಅವನನ್ನು ಮೆಚ್ಚಿಕೊಂಡು ಅವನಿಗೆ ಸಹಾಯ ಮಾಡುತ್ತಾನೆ. ತನ್ನ ಅಪೇಕ್ಷೆಯನ್ನು ಸಲ್ಲಿಸಲು ನಿಶ್ಚಯಿಸಿದ ಅರ್ಜುನನಿಗೆ, ಅಗ್ನಿಕ್ಷೀರಸಮುದ್ರದಲ್ಲಿ ಮುಚ್ಚಿಟ್ಟ ಬಿಳಿಯ ಕುದುರೆಗಳನ್ನು ಹೂಡಿದ ರಥಾದಿಗಳನ್ನು ತಂದುಕೊಡುತ್ತಾನೆ. ಅಗ್ನಿ ಊಟ ಮಾಡುವಾಗ ಅವನಿಗೆ ತೊಂದರೆ ಆಗದಿರಲೆಂದು ಅವನ ಸಹಾಯಕ್ಕೆ ಕೃಷ್ಣಾರ್ಜುನರು ನಿಲ್ಲುತ್ತಾರೆ. ಆ ವನವನ್ನು ಇಂದ್ರನ ಸೈನಿಕರು ರಕ್ಷಿಸುತ್ತಿದ್ದರು. ಅಲ್ಲಿನ ಒಂದು ಚಿಗುರನ್ನೂ ಶಚೀದೇವಿಯೂ ಕೀಳುವಂತಿರಲಿಲ್ಲ. ಇಂದ್ರನಿಗೆ ಆ ವನದ ಮೇಲೆ ಅಷ್ಟು ಪ್ರೇಮ. ಆದರೆ ಅರ್ಜುನ ಮಾತುಕೊಟ್ಟಾಗಿತ್ತು. ಇಂದ್ರನನ್ನು ಎದುರಿಸಲು ನಿಶ್ಚಯಿಸಿ ಅಗ್ನಿಗೆ ಆಪೋಶನವನ್ನು ಹಾಕಿದನು. ಬೆಂಕಿ ವನವನ್ನು ಸುಡಲು ಆರಂಭಿಸಿತು. ಕಾವಲುಗಾರರು ಎಚ್ಚೆತ್ತರು, ಅರ್ಜುನನ್ನು ಎದುರಿಸಿದರು, ಅವನ ಬಾಣಗಳ ಪೆಟ್ಟಿಗೆ ಹೆದರಿ ಓಡಿದರು. ಬೆಂಕಿ ಸ್ವೇಚ್ಛೆಯಿಂದ ನಾಗರ ವಂಶವನ್ನೆಲ್ಲ ಸುಡತೊಡಗಿತು. ವನದಿಂದ ಒಂದು ಜೀವಿಯೂ ಹೊರಕ್ಕೆ ಹೋಗಲು ಅರ್ಜುನ ಬಿಡಲಿಲ್ಲ. ಅಗ್ನಿ ಒಂದು ಪ್ರಾಣಿಯನ್ನೂ ತಿನ್ನದೆ ಬಿಡಲಿಲ್ಲ. ವನವಿಹಾರದಲ್ಲಿ ತೊಡಗಿದ್ದ ಪ್ರೇಮಿಗಳು ಜೊತೆಜೊತೆಯಲ್ಲಿ ಪ್ರಾಣತ್ಯಾಗ ಮಾಡುವ ಪುಣ್ಯವನ್ನು ಪಡೆದಿದ್ದರು.

ವರ್ತಮಾನ ದೇವೇಂದ್ರನಿಗೆ ಹೋಯಿತು. ಅವರು ಯಾರು ಎಂಬುದನ್ನು ದೇವೇಂದ್ರ ದಿವ್ಯಜ್ಞಾನದಿಂದ ಅರಿತು ಮಳೆಯನ್ನು ಖಾಂಡವವನದ ಮೇಲೆ ಕರೆದನು. ಮಳೆಯ ಒಂದು ಹನಿ ವನಕ್ಕೆ ಬೀಳದಂತೆ ಅರ್ಜುನ ಶರಪಂಜರವನ್ನು ವನದ ಮೇಲೆ ಹೆಣೆದುಬಿಟ್ಟನು. ವನಗಳು ಸುಟ್ಟವು. ಪಕ್ಷಿಗಳು ಸೀದವು. ಪ್ರಾಣಿಗಳು ದಹಿಸಿದವು. ಆಗ ಮಯ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದನು. ಅವನ ಸಾಹಸ ಅವನೊಡನೆ ಸಹಕರಿಸಲಿಲ್ಲ. ಕಡೆಗೆ ಕೃಷ್ಣಾರ್ಜುನರಿಗೆ ಶರಣಾಗತನಾಗಿ ಅಗ್ನಿದೇವನಿಂದ ಬೀಳ್ಕೊಂಡನು. ಅಷ್ಟರಲ್ಲಿ ತಕ್ಷಕನ ಮಗ

ಅಶ್ವಸೇನ, ತನ್ನ ತಾಯಿ ತನ್ನ ಬಾಲವನ್ನು ಕಚ್ಚಿಹಿಡಿದುಕೊಳ್ಳುವಂತೆ ಹೇಳಿ ಇಬ್ಬರೂ ತಪ್ಪಿಸಿಕೊಂಡು ಹೋಗಲು ನೋಡಿದರು. ಆದರೆ ಅರ್ಜುನನ ಬಾಣ ಆ ಸರ್ಪವನ್ನು ಮಧ್ಯದಲ್ಲಿ ಕತ್ತರಿಸಿತು. ತಾಯಿ ಬೆಂಕಿಯಲ್ಲಿ ಬಿದ್ದಳು. ಅಶ್ವಸೇನ ತಾಯಿಯ ಕೊಲೆಯ ಬಗ್ಗೆ ಸೇಡುತೀರಿಸಿಕೊಳ್ಳಲು ಪ್ರತಿಜ್ಞೆ ಮಾಡಿದನು. ಅನಂತರ ಅವನು ಕರ್ಣನ ಬತ್ತಳಿಕೆಯಲ್ಲಿ ಬಾಣವಾಗಿ ಸೇರಿಕೊಂಡನು. ಮಂದಪಾಲನೆಂಬ ಮುನಿ ಅಗ್ನಿಸೂಕ್ತಿಗಳಿಂದ ಅಗ್ನಿಯನ್ನು ಸ್ತುತಿಸುತ್ತಿದ್ದುದರಿಂದ ಅಗ್ನಿ ಅವನಿಗೆ, ಅವನ ವಂಶಜರಿಗೆ ಅಗ್ನಿಯ ಬಾಧೆಯಿಲ್ಲದಿರುವಂತೆ ಬಾಳಲು ಅನುಗ್ರಹ ಮಾಡಿದನು. ಇಂದ್ರನ ಸೇನೆಯ ಪರಾಕ್ರಮ ಅರ್ಜುನನ ಮುಂದೆ ಏನೂ ನಡೆಯಲಿಲ್ಲ. ಕಡೆಗೆ ಅವನೇ ನೇರವಾಗಿ ಮಗನೊಡನೆ ಯುದ್ಧ ಮಾಡಲು ಬಂದನು. ಆದರೆ ಅಚ್ಯುತನ ಬೋಧನೆಯಂತೆ ಅರ್ಜುನನಿಗೆ ಜಯದ ಕಿರೀಟವನ್ನು ತೊಡಿಸಿ, ಕಿರೀಟಿ ಎಂದು ನಾಮಕರಣ ಮಾಡಿ ಅವನ ಸಾಹಸವನ್ನು ಹೊಗಳಿ ಸಂತೋಷಪಟ್ಟನು. ಅಚ್ಯುತನಿಗೆ ಕೃಷ್ಣನೆಂದು ಹೆಸರು ಕೊಟ್ಟನು.

ಆಗ ಸ್ವಾಹಾಂಗನಾಪತಿಯಾದ ಅಗ್ನಿ ಖಟ್ವಾಂಗನ ಯಜ್ಞದಲ್ಲಿ ಸ್ವೀಕರಿಸಿದ ತುಪ್ಪದಿಂದ ಆದ ಅಜೀರ್ಣವನ್ನು ಹೋಗಲಾಡಿಸಿಕೊಂಡು ನಿರೋಗನಾಗಿ ಹೋದನು. ಅರ್ಜುನ-ಕೃಷ್ಣರು ಇಂದ್ರಪ್ರಸ್ಥಕ್ಕೆ ಹಿಂದಿರುಗಿದರು.

೨. ಭೀಷ್ಮರಿಗೆ ಸೇನಾಪಟ್ಟವನ್ನು ಕಟ್ಟಿದುದು

ಪಾಂಡವರ ಸೈನ್ಯದಲ್ಲಿ ಅರ್ಜುನನಿಗೆ ಯಾವ ವಿಧವಾದ ಅಧಿಕಾರ ಸ್ಥಾನವನ್ನೂ ಕೊಡದೆ ಇರುವ ಸ್ಥಿತಿಯನ್ನು ಸುಯೋಧನ ಕೇಳಿದನು. ಆಗ ದ್ರೋಣ, ಅಶ್ವತ್ಥಾಮ, ಶಕುನಿ, ಕೃಪ, ಕರ್ಣ ಇವರನ್ನು ಕರೆಸಿಕೊಂಡು ಅವರಿಗೆ ಶತ್ರು ಸೈನ್ಯದ ವ್ಯಾಪಾರವನ್ನು ತಿಳಿಸಿದನು. ಪಾಂಡವರಲ್ಲಿ ಧೃಷ್ಟದ್ಯುಮ್ನ ಸೇನಾಪತಿ. ಅವರ ನಾಯಕರೋ ಮೊಲದಂತಿರುವ ದ್ರುಪದ, ಒಂಟಿಯಂತಿರುವ ಮತ್ಸ್ಯ ಇವರೊಡನೆ ನಾವು ಯುದ್ಧ ಮಾಡಬೇಕು ಎಂದಾಗ ದ್ರೋಣ, 'ಪಾಂಡವರು ಬಲ ಸಂಪನ್ನರು, ನೀನು ಹುಚ್ಚು ಮಾತನ್ನಾಡಬೇಡ, ಗಾಂಗೇಯರು ಹೇಳಿದಂತೆ ನಡೆ' ಎಂದರು. ಅಂದು ರಾತ್ರಿ ಭೀಷ್ಮರ ಮನೆಗೆ ಹೋಗಿ 'ಕೃಷ್ಣನ ಬಲದಿಂದ ಪಾಂಡವರು ನಮ್ಮ ಮೇಲೆ ಸಂಗ್ರಾಮವನ್ನು ಸಾರಿದ್ದಾರೆ. ಆ ಕೃಷ್ಣನನ್ನು ಕಟ್ಟಿಹಾಕಲು ನಾನು ಯತ್ನಿಸಿದಾಗ ನೀವು ಬಿಡಿಸಿದಿರಿ. ಆನೆ ಅಣುವಿಗೆ ಹೋಲಿಕೆಯೇ? ಕೃಷ್ಣನಿಗೂ ನಿಮಗೂ ಎಲ್ಲಿಯ ಹೋಲಿಕೆ? ಪರಶುರಾಮನು ನಿಮ್ಮಿಂದ ಸೋಲಲಿಲ್ಲವೆ? ನಾನು ನಿಮ್ಮನ್ನು ಮರೆಹೊಕ್ಕಿದ್ದೇನೆ ನಿಮ್ಮಿಂದ ನನಗೆ ರಾಜ್ಯಶ್ರೀ! ನೀವು ರಣರಂಗದಲ್ಲಿ ನಿಂತು ನಮಗೆ ಜಯ ತಂದುಕೊಡಬೇಕು' ಎಂದು ವಿನಯದಿಂದ ಪ್ರಾರ್ಥಿಸಿದನು. 'ನೀನು ಧೃತರಾಷ್ಟ್ರನು ಹೇಳಿದಂತೆ ಕೇಳಲಿಲ್ಲ. ಕೃಷ್ಣನ ಮಾತಿಗೆ ನೀನು ಒಪ್ಪಲಿಲ್ಲ. ಇನ್ನು ನಾನು ತಾನೇ ಏನು

ಮಾಡಲಿ. ನನ್ನನ್ನು ಈ ವಿಚಾರದಲ್ಲಿ ಪ್ರಾರ್ಥಿಸಲೇಬೇಕಾಗಿಲ್ಲ. ನೀನೆಂದಂತೆ ಆಗಲಿ' ಎಂದು ಭೀಷ್ಮರು ಹೇಳಿಕಳಿಸಿದರು. ಆದರೆ ಅವನು ಹೊರಟು ಹೋದ ಮೇಲೆ ತಾವೇ ಆಲೋಚಿಸಿದರು. 'ಯಾರಾದರೂ ನಾರಾಯಣನ ಮೇಲೆ ಯುದ್ಧ ಹೂಡುತ್ತಾರೆಯೇ ? ನಾನು ಪ್ರೀತಿಸಿದವರ ಮೇಲೆ ನಾನೇ ಕದನ ಕೈಗೊಳ್ಳುವಂತಾಯಿತು. ನನಗೆ ಎರಡು ಕಡೆಯವರೂ ಬೇಕಾದವರು. ಮಕ್ಕಳೊಡನೆ ಮೊಮ್ಮಕ್ಕಳನ್ನು ಹೇಗೆ ಕಾದಿಸುವುದು ? ನಾನೇ ಮಕ್ಕಳನ್ನು ಕೊಂದರೆ ಹಾವು ತನ್ನ ಮರಿಗಳನ್ನು ತಾನೇ ತಿಂದಂತಾಗುವುದಿಲ್ಲವೆ ? ನಾನು ಎದುರಿಸುವವರಲ್ಲೂ ಒಬ್ಬ ಮೊಮ್ಮಗ, ಇನ್ನೊಬ್ಬ ಗುರು ನರನಾರಾಯಣರು—ಅವರನ್ನು ಎದುರಿಸಿ ಸಾಯಬೇಕು' ಎಂದು. ಮಾರನೆಯ ದಿನ ಬೆಳಗ್ಗೆ ಅನೇಕ ಮಹಾರಾಜರ ಸಮ್ಮುಖದಲ್ಲಿ, ದೇವಾಸುರ ಯುದ್ಧದಲ್ಲಿ ದೇವೇಂದ್ರ ಗುಹನಿಗೆ ವೀರಪಟ್ಟವನ್ನು ಕಟ್ಟಿದಂತೆ ದುರ್ಯೋಧನನು ಮಂದಾಕಿನೀ ತನೂಜನಿಗೆ ವಾದ್ಯಘೋಷಗಳು ಭೋರ್ಗರೆಯುತ್ತಿರುವಾಗ ವೀರಪಟ್ಟ ಕಟ್ಟಿದನು. ಭೀಷ್ಮನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿದ್ದು ಕರ್ಣನಿಗೆ ಸಮಾಧಾನವನ್ನುಂಟುಮಾಡಲಿಲ್ಲ. ' ಈ ಹಣ್ಣು ಮುದುಕರಿಗೆ ವೀರಪಟ್ಟವನ್ನು ಕಟ್ಟಿ ಇನ್ನೊಬ್ಬರು ಹಾಸ್ಯ ಮಾಡುವಂತೆ ನಡೆದುಕೊಂಡೆ. ಶತ್ರುಗಳನ್ನು ಕೊಲ್ಲಬೇಕಾದರೆ ನನಗೆ ಪಟ್ಟಕಟ್ಟು. ಅವರಿಗೆ ಮೊಮ್ಮಕ್ಕಳ ಮೇಲೆ ಪ್ರೀತಿ. ಆದ್ದರಿಂದ ಅವರು ಅವರೊಡನೆ ಕಾದುವುದಿಲ್ಲ. ಇವರನ್ನು ಹೇಗೆ ನಂಬುವುದೋ ಕಾಣೆ ' ಎಂದು ಕರ್ಣ ದುರ್ಯೋಧನನನ್ನು ದೂರಿದನು. ಕರ್ಣನ ಮಾತನ್ನು ಕೇಳಿ ದ್ರೋಣನಿಗೆ ತುಂಬ ಕೋಪ ಬಂದಿತು. ' ಸಿಂಹದ ಮುದಿತನ, ಗಾಂಗೇಯರ ಮುಪ್ಪು ' ಇದನ್ನು ಯಾರಾದರೂ ಅಲಕ್ಷ್ಯ ಮಾಡುತ್ತಾರೆಯೆ ? 'ಬಲಿಷ್ಠರಾದ, ಕುಲವೃದ್ಧರಾದ ಹಿರಿಯರನ್ನು ಅಲ್ಲಗಳೆಯುವ ನಿನ್ನ ನಾಲಗೆ, ನಿನ್ನ ಕುಲವನ್ನು ಮಾತ್ರ ಹೊರಗೆಡಹುತ್ತದೆ' ಎಂದರು ದ್ರೋಣರು. ಕರ್ಣನಿಗೆ ಮತ್ತಷ್ಟು ರೇಗಿತು. ' ಕುಲದ ಮಾತನ್ನು ಏಕೆ ಎತ್ತುತ್ತೀರಿ ? ಕುಲ ಎಂದರೆ ಯಾವುದು ? ಹುಟ್ಟು ಕುಲವಲ್ಲ, ಛಲ ಕುಲ, ಗುಣ ಕುಲ, ಪರಾಕ್ರಮ ಕುಲ ! ಅದಿರಲಿ ನಿಮ್ಮ ಕುಲವನ್ನು ನೀವು ನೆನಸಿಕೊಂಡರೆ ಅದು ನಿಮಗೇ ವ್ಯಾಕುಲವನ್ನುಂಟುಮಾಡುವುದು. 'ಭೀಷ್ಮರು ಕುಂತಿಯ ಮಕ್ಕಳನ್ನು ಗೆದ್ದರೆ ನಾನು ತಪಸ್ಸಿಗೆ ಹೋಗುತ್ತೇನೆ. ಅವರಿಂದ ಭೀಷ್ಮರು ಸತ್ತರೆ, ಆ ಶತ್ರುಗಳನ್ನು ನಾನು ಕೊಲ್ಲುತ್ತೇನೆ ' ಎಂದು ಕರ್ಣ ಪ್ರತಿಜ್ಞೆ ಮಾಡಿದನು. ' ಕರ್ಣ ನಿನಗೆ ರಾಜನ ಸ್ನೇಹವಿದೆ. ಆ ಗರ್ವದಿಂದ ನೀನು ಮಾತನಾಡುತ್ತಿದ್ದೀಯೆ. ಭಾರತದ ಯುದ್ಧ ಬಹು ದೊಡ್ಡ ಯುದ್ಧ. ನಿನಗೂ ಅವಕಾಶ ದೊರಕುತ್ತದೆ. ನಿನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುವೆಯಂತೆ. ನಾನು ಮುದುಕ, ನಿಜ. ಆದರೂ ಚಕ್ರವನ್ನು ಸಮರಭೂಮಿಯಲ್ಲಿ ಹಿಡಿಯುವುದಿಲ್ಲ ಎಂಬ ಕೃಷ್ಣನ ಪ್ರತಿಜ್ಞೆಯನ್ನು ಸುಳ್ಳಾಗಿಸುತ್ತೇನೆ. ದಿನಕ್ಕೆ ೧೫ ಸಾವಿರ ಧರಾಧೀಶರನ್ನು ಭೂಮಿಯ ಮೇಲೆ ಮಲಗುವಂತೆ ಮಾಡವೆನು ' ಎಂದು ಭೀಷ್ಮನು

ಕರ್ಣನ ಮತ್ತು ಅಲ್ಲಿ ನೆರೆದವರ ಮುಂದೆ ಪ್ರತಿಜ್ಞೆ ಮಾಡಿದನು. ಭೀಷ್ಮನ ಸೇನಾಧಿಪತ್ಯದ ಸಮಾರಂಭದ ಘೋಷಣೆ ಬ್ರಹ್ಮನ ಸ್ಥಳವನ್ನು ಪಲ್ಲಟಿಸಿತು. ಇಂದ್ರ ಪರ್ವತ ಅಲ್ಲಾಡಿತು. ಸೂರ್ಯ ಆಕಾಶದಿಂದ ತೂರಿಹೋದ. ಗೌರಿ ಗಾಬರಿ ಯಿಂದ ಈಶ್ವರನನ್ನು ತಬ್ಬಿಕೊಂಡಳು. ಮೂರು ಲೋಕಗಳು ಕಮಲದ ಎಲೆಯ ಮೇಲಿನ ನೀರಿನ ಹನಿಯಂತೆ ನಡುಗಿದವು. ಸುಯೋಧನ ಜಯಾಪಜಯಗಳನ್ನು ನೆನೆಯದೆ, ಕಲಹವೊಂದನ್ನೇ ನೆನೆಯುತ್ತ ತೃಪ್ತನಾಗಿದ್ದನು. ಭೀಷ್ಮ ಸೇನೆಯನ್ನು ಕುರುಕ್ಷೇತ್ರಕ್ಕೆ ನಡೆಸಿದನು, ಸಮುದ್ರವನ್ನೇ ನಡೆಸಿಕೊಂಡು ಬರುವಂತೆ. ಸೈನ್ಯದ ಪಾದಘಾತದಿಂದ ಎದ್ದ ಧೂಳು ಆಕಾಶಗಂಗೆಯನ್ನು ಕೆಸರಾಗಿ ಮಾಡಿತು. ಸೂರ್ಯನ ಕಿರಣಗಳನ್ನು ರಥದ ಬಾವುಟಗಳು ಮುಚ್ಚಿಬಿಟ್ಟವು. ಎದ್ದ ಧೂಳಿನಿಂದ ಸೂರ್ಯನ ಕುದುರೆಗಳಿಗೆ ದಾರಿಗಾಣದಾಯಿತು. ಆನೆಯ ಮದೋದಕ, ಕುದುರೆಗಳ ಬಾಯಿನ ನೊರೆ ಸೇರಿ ಗಂಗೆ–ಯಮುನೆಯರ ಸಂಗಮದಂತೆ ಕಾಣಿಸುತ್ತಿದ್ದವು. ಸೈನ್ಯ ಕುರುಕ್ಷೇತ್ರದ ಪೂರ್ವ ದಿಕ್ಕಿನಲ್ಲಿ ಬೀಡುಬಿಟ್ಟಮೇಲೆ ಧರ್ಮಪುತ್ರನಿಗೆ ಹೇಳಿ ಕಳಿಸಿ ದನು. ಸುಯೋಧನ ‘ ನಾಳೆ ಕಾಳಗಾರಂಭ ’ ಎಂದು. ಧರ್ಮರಾಯ ಕೂಡಲೇ ಪುಂಡರೀಕಾಕ್ಷನನ್ನು ಕರೆಸಿ ವಿರಾಟನಂದನನಾದ ಶ್ವೇತಂಗೆ ವೀರಪಟ್ಟವನ್ನು ಕಟ್ಟಿ ತಾನೂ ಯುದ್ಧಕ್ಕೆ ಸಿದ್ಧನಾದನು.

ಆದಿಪುರಾಣ

ಶ್ರೀ ದೇವೇಂದ್ರ ಮುನಿಗಳಿಂದ ನಮಸ್ಕೃತನಾದ, ಜಗತ್ಸ್ವಾಮಿಯಾದ, ಜ್ಞಾನಕ್ಕೆ ತವರಾದ ವೃಷಮಾರ್ಗದ ಅಗ್ರೇಸರನು ನಮಗೆ ಮುಕ್ತಿಶ್ರೀ ಸುಖವನ್ನು ಕೊಡಲಿ ಎಂದು ಪ್ರಾರ್ಥಿಸಿ, ಜಿನೇಂದ್ರವಾಣಿಯೆಂಬ ಸರಸ್ವತಿಯನ್ನು ಸ್ತುತಿಸಿ, ತನ್ನ ಕಾವ್ಯಕ್ಕೆ ಗುಣಸಂಪತ್ತಿಯನ್ನೂ ಸೌಂದರ್ಯ ಚಾತುರ್ಯಗಳನ್ನೂ ಒದಗಿಸಲೆಂದು ಕೇಳಿಕೊಂಡು, ಸಂಸಾರಸಾರೋದಯನಾದ ತಾನು ಪುರುದೇವನನ್ನು ಕುರಿತು ಕಾವ್ಯ ರಚಿಸುತ್ತೇನೆಂದು ಹೇಳುತ್ತಾನೆ ಪಂಪ. ತಾನು ದುಂದುಭಿ ಸಂವತ್ಸರದಲ್ಲಿ ಹುಟ್ಟಿದವನೆಂದೂ ತನ್ನ ಧ್ವನಿ ದುಂದುಭಿಯ ರವದಂತೆ ಗಂಭೀರವಾದದ್ದೆಂದೂ ಅಭಿಮಾನದಿಂದ ತಿಳಿಸಿ, ಕಾವ್ಯದ ಉದ್ದೇಶ ಗೌರವ, ಖ್ಯಾತಿ, ಲಾಭಗಳೇ ಆದರೂ ತಾನು ಜಿನೇಂದ್ರ ಸ್ತುತಿಯಿಂದ ಇಂದ್ರನ ಪೂಜೆ, ಲೋಕವಿಖ್ಯಾತವಾದ ಕೀರ್ತಿ, ಮುಕ್ತಿಯೆಂಬ ಲಾಭವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಕಾವ್ಯವನ್ನು ರಚಿಸಿ ಇದರಲ್ಲಿ ಕಾವ್ಯಧರ್ಮವನ್ನೂ ಧರ್ಮವನ್ನೂ ಪ್ರತಿಪಾದಿಸುತ್ತೇನೆ ಎಂದು ಹೇಳಿ ಕೊಳ್ಳುತ್ತಾನೆ. ಭರತ ಕೇಳಿದ, ಜಿನೇಶ್ವರ ಮತದಿಂದ ವೃಷಭಸೇನಾಗ್ರಣಿ ಹೇಳಿದ ಕಥೆಯನ್ನು–ವರ್ಧಮಾನ ಜಿನನ ಸನ್ನಿಧಿಯಲ್ಲಿ ಗೌತಮರು ಮಗಧ ನಾಯಕನಿಗೆ

ಅರ್ಥವಾಗುವಂತೆ ಹೇಳಿದ ಕಥೆಯನ್ನು ಭಕ್ತಿಯಿಂದ ವಿರಚಿಸುತ್ತೇನೆ ಎಂದು ತಿಳಿಸುತ್ತಾನೆ.

೧. ನೀಲಾಂಜನೆಯ ನೃತ್ಯ

ಪುರುಪರಮೇಶ್ವರ ಸಿಂಹಾಸನದಲ್ಲಿ ಕುಳಿತಿದ್ದನು. ಅವನ ಅಕ್ಕಪಕ್ಕದಲ್ಲಿ ಭರತ-ಬಾಹುಬಲಿಗಳು ಮಂಡಿಸಿದ್ದರು. ನಾಭಿರಾಜ, ಸೋಮಪ್ರಭ, ಹರಿಕಾಂತ ಮುಂತಾದವರೂ ಸಭೆಯನ್ನು ಅಲಂಕರಿಸಿದ್ದರು. ಅಂದು ನೃತ್ಯ ಕಾರ್ಯಕ್ರಮ ವಿತ್ತು. ಆದಿದೇವನ ಪರಿನಿಷ್ಕ್ರಮಣ ಕಲ್ಯಾಣಕಾಲ ಆಸನ್ನವಾಗಿದ್ದ ಸಮಯ. ಅದನ್ನು ಅಂತರ್‌ಜ್ಞಾನದಿಂದ ಅರಿತ ದೇವೇಂದ್ರನು ಸಪರಿವಾರನಾಗಿ ಬಂದು ಒಂದು ಕನಕ ಪೀಠದಲ್ಲಿ ಕುಳಿತುಕೊಂಡನು. ಇಂದ್ರನ ಅಪ್ಪಣೆಯಂತೆ ಸಂಗೀತ ಕಾರ್ಯ ಕ್ರಮ ಆರಂಭವಾಯಿತು. ಸಂಗೀತ ಆ ಸಭೆಯನ್ನು ಆನಂದರಸದಲ್ಲಿ ಮುಳುಗಿಸಿತು. ದೇವಸ್ತ್ರೀಯರ ಗೀತಧ್ವನಿ ಮನ್ಮಥನ ಬಿಲ್ಲಿನ ಶಬ್ದವನ್ನೂ ರತಿಯ ವೀಣಾವಾದನ ವನ್ನೂ ಮೀರಿಸಿತ್ತು. ಸಂಗೀತವಾದ ಅನಂತರ ಅಮರ ನರ್ತಕಿಯರ ರೂಪವನ್ನು ತಿರಸ್ಕರಿಸುವ, ಸೌಂದರ್ಯದಿಂದ ಕೂಡಿದ ನೀಲಾಂಜನೆ ರಂಗಸ್ಥಳವನ್ನೂ ಸಭಿಕರ ಮನೋರಂಗವನ್ನೂ ಪ್ರವೇಶಿಸಿದಳು. ಅವಳು ಅಂಗಜ ಜಂಗಮಲತೆಯಂತೆ ಓಡಾಡುತ್ತಿದ್ದರೂ ರಸ ಅಲ್ಲಿ ಮಡುವಾಯಿತು. ಅವಳ ಪ್ರತಿಬಿಂಬ ರಾಜರು ಧರಿಸಿದ ಹಾರದ ಹರಳುಗಳಲ್ಲಿ ಪ್ರತಿಬಿಂಬಿತವಾಗಿ, ಆ ಮೂಲಕ ಅವರ ಹೃದಯ ವನ್ನು ಸೇರುವಳೋ ಎಂಬಂತೆ ಕಂಗೊಳಿಸುತ್ತಿದ್ದಳು. ಆಕೆಯ ನೃತ್ಯ ನವನವೋ ನ್ಮೇಷಶಾಲಿನಿಯಾಗಿತ್ತು. ಅದು ಆದಿದೇವನ, ಇಂದ್ರದೇವನ ಮನಸ್ಸಿಗೆ ಅಸದಳ ವಾಗಿ ತೋರಿತ್ತು. ಅವಳ ನೃತ್ಯ ಮುಂದುವರಿದು ಶ್ರೇಷ್ಠ ಮಟ್ಟಕ್ಕೇರಿದಾಗ ಅವಳ ಆಯುಸ್ಸು ಮುಗಿಯಿತು. ಅವಳು ಮಿಂಚಿನಂತೆ ಕಣ್ಮರೆಯಾದಳು ರಂಗಸ್ಥಳದಿಂದ. ಜನರಿಗೆ ರಸಭಂಗವಾಗಬಾರದೆಂದು ಕೂಡಲೆ ಇಂದ್ರ ಅವಳ ರೂಪದ ಪ್ರತಿಬಿಂಬ ದಂತಿರುವ ಇನ್ನೊಬ್ಬಳು ನರ್ತಕಿಯನ್ನು ತಂದು ಅವಳ ಸ್ಥಾನದಲ್ಲಿಟ್ಟನು. ಆ ಬದಲಾವಣೆ ಯಾರಿಗೂ ಗೊತ್ತಾಗಲೇ ಇಲ್ಲ. ಆದರೆ ವಿದ್ಯಾನಿಲಯನಾದ ರಾಜ ಅರಿತು ದೇಹದ ಅನಿತ್ಯತೆಗೆ ಆಶ್ಚರ್ಯಪಟ್ಟ. ಹೆಣ್ಣಿನ ರೂಪದ ಯಂತ್ರ ನೋಡುತ್ತ ನೋಡುತ್ತ ಕರಗಿಹೋಯಿತು. ಅದನ್ನು ಕಣ್ಣಾರೆ ಕಂಡ ಅವನಿಗೆ ಸಂಸಾರದ ಅನಿತ್ಯತೆ ಮನಸ್ಸಿಗೆ ಹೊಳೆಯಿತು. 'ಆಕೆ ನನಗೆ ನೃತ್ಯ ಸೌಂದರ್ಯವನ್ನು ತೋರಿಸಲಿಲ್ಲ, ಸಂಸೃತಿ ನಾಟಕವನ್ನು ತೋರಿಸಿದಳು. ಈ ದೇಹ, ದೇಹ ಸೌಖ್ಯ, ಈ ವೈಭವ, ಆಯುಸ್ಸು ಇವೆಲ್ಲ ಕುಡಿಮಿಂಚು, ಮೋಡದ ನೆರಳು, ಇಂದ್ರನ ಬಿಲ್ಲು ಎಂಬಂತೆ ಕ್ಷಣಿಕ' ಎಂಬುದನ್ನು ತೋರಿಸಿಕೊಟ್ಟಳು. 'ವಿವಿಧ ಭವಗಳಲ್ಲಿ ಮಾಡಿದ ಪಾಪ ಕಳಚಿ ಮನುಷ್ಯಜನ್ಮ ಬರುತ್ತದೆ. ಅದು ದುಃಖದಿಂದ ತುಂಬಿದ್ದು ಈ ಸಂಸಾರ ಅನಂತವಾದುದು. ಎಷ್ಟು ದೇಹವನ್ನು ಪಡೆದದ್ದಾಯಿತು, ಎಷ್ಟನ್ನು ಬಿಸಾಟಿದ್ದಾ

ಯಿತು, ವಿಷಯದ ಬೆಂಕಿಯಿಂದ ಎಷ್ಟನ್ನು ಸುಟ್ಟಿದ್ದಾಯಿತು. ತಾಯಿ, ತಂದೆ, ಅಣ್ಣ, ತಮ್ಮ, ಹೆಂಡತಿ, ಮಗ, ಮಿತ್ರ ಎಂಬ ಸಂಬಂಧಗಳು ಎಷ್ಟೆಷ್ಟು ಜನ್ಮಗಳಲ್ಲಿ ಆಯಿತು ? ಅವುಗಳನ್ನೆಲ್ಲ ನೆನೆವುದು ಸಾಧ್ಯವೆ ? ದೇಹ, ಹೊಸ ಅಲಂಕಾರ, ಗೀತ, ನೃತ್ಯಾದಿಗಳಿಂದ ಉನ್ಮತ್ತ ವಿಲಾಸಗಳುಂಟು. ಆದರೆ ಅವುಗಳಲ್ಲಿ ತಿರುಳುಂಟೆ? ಅನೇಕ ಚಕ್ರವರ್ತಿಗಳು ಸಾಮ್ರಾಜ್ಯ ಭೋಗದಲ್ಲಿ ಮುಳುಗಿ ಹೋದರು. ದುಃಖದಿಂದ ತುಂಬಿದ ಮತ್ಸ್ಯ ಮೋಹಗಳಿಂದ ಕಡಿಸಿಕೊಂಡು, ಲೋಭದ ಮೊಸಳೆಗಳಿಂದ ನುಂಗಿಸಿಕೊಂಡು, ತೊಳಲುತ್ತ ಭವಸಾಗರದಲ್ಲಿ ನಾನಿರಲಾರೆ' ಎಂದು ನಿಶ್ಚಯಿಸಿ ಮುಕ್ತಿಯನ್ನು ಪಡೆಯಲು ಮನಸ್ಸು ಮಾಡಿದನು. ಆಗ ಪರಿನಿಷ್ಕ್ರಮಣ ಕಲ್ಯಾಣ ಮಹೋತ್ಸವವು ನೆರವೇರಿ ಭರತನಿಗೆ ರಾಜ್ಯಾಭಿಷೇಕವನ್ನೂ ಬಾಹುಬಲಿಗೆ ಯುವರಾಜ್ಯಾಭಿಷೇಕವನ್ನೂ ನಡೆಸಿ ಅವನು ತಪೋರಾಜ್ಯಕ್ಕೆ ನಡೆದನು.

೨. ಬಾಹುಬಲಿ ವಿಜಯ

ಭರತ ಸಕಲ ರಾಜ್ಯಗಳನ್ನೂ ಜಯಿಸಿ ರಾಜಧಾನಿಗೆ ಹಿಂದಿರುಗಿದನು. ಅವನು ತನಗೆ ಲಭಿಸಿದ ಜಯದ ಯಶಸ್ಸಿನಿಂದ ಉನ್ಮತ್ತನಾಗಿದ್ದನು. ಆದರೆ ಅವನ ತಮ್ಮ, ದಾಯಾದಿ ಅವನೊಡನೆ ಯುದ್ಧ ಮಾಡಲು ನಿಶ್ಚಯಿಸಿದ್ದನ್ನು ಕೇಳಿ ಕೋಪಾವಿಷ್ಟನಾಗಿ ತಮ್ಮನೊಡನೆ ಸಮರವನ್ನು ಘೋಷಿಸಿದನು. ಪೌದನಪುರದ ಕಡೆಗೆ ಅವನ ಸೈನ್ಯ ಹೊರಟಿತು. ಬಾಹುಬಲಿಯ ಸೈನವೂ ಶತ್ರುವನ್ನು ಹೇಡಿ ಮಾಡುವಂತೆ ಸಿದ್ಧವಾಗಿತ್ತು. ಅವನೂ ಯುದ್ಧಕ್ಕೆ ಸಜ್ಜಾದನು. ಆಗ ಎರಡೂ ಕಡೆಯ ಮಂತ್ರಿಗಳು ಆಲೋಚಿಸಿ 'ಸೈನ್ಯದೊಡನೆ ಯುದ್ಧ ಬೇಡ, ನೀವಿಬ್ಬರೂ ವಿವಿಧ ರೀತಿಯಿಂದ ನಿಯುದ್ಧ ಮಾಡಿ'ನಿಮ್ಮಲ್ಲಿ ಗೆದ್ದವರೇ ಜಯ ಪಡೆದವರು ಎಂದು ನಿರ್ಣಯಿಸೋಣ ' ಎಂದು ಅಭಿಪ್ರಾಯ ಪಟ್ಟರು. ಅವರು ದೃಷ್ಟಿ, ಜಲ ಮತ್ತು ಮಲ್ಲ ಎಂಬ ಮೂರು ರೀತಿಯ ಯುದ್ಧಗಳನ್ನು ಸೂಚಿಸಿದರು. ಧರ್ಮದಿಂದ ಯುದ್ಧ ಮಾಡಿ ಎಂದರು. ಬಾಹುಬಲಿಯನ್ನೂ ಒಪ್ಪಿಸಿದರು. ಎರಡು ಸೈನ್ಯಗಳ ನಡುವಿನ ರಂಗದಲ್ಲಿ ಇಬ್ಬರಿಗೆ ಯುದ್ಧ ಆರಂಭವಾಯಿತು. ಬಾಹುಬಲಿಯ ನೆಟ್ಟ ನೋಟಕ್ಕೆ ಭರತ ಸೋತುಹೋದ. ಆನೆಗಳೆರಡು ಸರಸ್ಸಿನಲ್ಲಿ ಹೊಡೆದಾಡುವಂತೆ ಇಬ್ಬರೂ ಜಲಯುದ್ಧವನ್ನು ಮಾಡಿದರು. ನೀರನ್ನು ತುಳ್ಕಾಡಿದರು. ಭರತ ನೂಕಿದ ನೀರು ಬಾಹುಬಲಿಯ ವಕ್ಷಸ್ಥಳವನ್ನಷ್ಟೆ ತಲುಪಿದವು. ಅಲ್ಲಿಯೂ ಭರತನಿಗೇ ಸೋಲು. ಅನಂತರ ಮಲ್ಲಯುದ್ಧ. ಬಾಹುಬಲಿ ಅವನನ್ನು ಎತ್ತಿ ಕುಕ್ಕಲು ಮೇಲಕ್ಕೆತ್ತಿದನು. ತನ್ನ ಕೈಗಳಲ್ಲಿರುವ ಅವನನ್ನು ಕತ್ತೆತ್ತಿ ನೋಡಿದನು. 'ಅವನು ತನ್ನ ಅಣ್ಣ, ಗುರು, ಚಕ್ರವರ್ತಿ, ಮಹಿಮಾವಂತ, ಇಂಥವನನ್ನು ಭೂಮಿಗೆ ಎಸೆಯುವುದೆ ? ' ಎಂದು ಯೋಚಿಸಿ ಮೆಲ್ಲನೆ ಕೆಳಕ್ಕೆ

ಇಳಿಸಿಬಿಟ್ಟನು. ಬಾಹುಬಲಿಯ ಪಕ್ಷ ಜಯಘೋಷ ಮಾಡಿತು. ಭರತನಿಗೆ ಅವಮಾನವಾಯಿತು. ಆಗ ತನ್ನ ಚಕ್ರಕ್ಕೆ ಆದೇಶ ಮಾಡಿದ 'ಬಾಹುಬಲಿಯನ್ನು ಕತ್ತರಿಸು' ಎಂದು. ಆದರೆ ಅದು ಬಾಹುಬಲಿಗೆ ಪ್ರದಕ್ಷಿಣೆ ಹಾಕಿ ಅವನ ಬಲ ಪಾರ್ಶ್ವದಲ್ಲಿ ನಿಂತುಬಿಟ್ಟಿತು ! ಆಗ ಹೂಮಳೆ ಸುರಿಯಿತು. ಭರತನಿಗೆ ಪುನಃ ಅವಮಾನವಾಯಿತು. ಅವನು ತಲೆ ತಗ್ಗಿಸಿದನು. ಬಾಹುಬಲಿಯು ತನ್ನ ಪಕ್ಕದಲ್ಲಿದ್ದ ಚಕ್ರವನ್ನು ಕಂಡು 'ರಾಜ್ಯದಾಹ ಎಂಥ ಅಧರ್ಮ ಕಾರ್ಯವನ್ನು ಮಾಡಿಸುತ್ತದೆ, ಅಣ್ಣತಮ್ಮಂದಿರಲ್ಲಿ ಜಗಳವನ್ನು ತಂದಿಡುತ್ತದೆ, ತಂದೆ ಮಕ್ಕಳಲ್ಲಿ ಕೋಪವನ್ನು ಹುಟ್ಟಿಸುತ್ತದೆ. ಲಕ್ಷ್ಮಿ ಮನುಷ್ಯನನ್ನು ಕಾಪುರುಷನನ್ನಾಗಿಸುತ್ತಾಳೆ. ನಂಜಿನಂತೆ ವಿಷಯವಾಸನೆ ಕೊಂದಿಕ್ಕುತ್ತದೆ. ದೇಹ ಅಶಾಶ್ವತ, ರಾಜ್ಯ ನಶ್ವರ, ಇದು ಬೇಡ, ಜೈನದೀಕ್ಷೆಯನ್ನೇ ಸ್ವೀಕರಿಸುತ್ತೇನೆ' ಎಂದು ನಿಶ್ಚಯಿಸಿದನು. ಅಣ್ಣನಿಗೆ ಹೇಳಿದನು : "ಕೋಪ ಬಿಡು, ನಾಚಿಕೆ ಬಿಡು, ತಮ್ಮನ ಮೇಲೆ ಮುಳಿಸು ಬೇಡ, ನೀನೇ ಈ ಸಾಮ್ರಾಜ್ಯವನ್ನು ಪಡೆ, ಅಣ್ಣನಲ್ಲಿ ನಾನು ಅವಿನಯವನ್ನು ತೋರಿಸಿದೆ, ನನ್ನ ದುರ್ವಿಳಸನವನ್ನು ಮರೆ, ನನ್ನನ್ನು ತಪಸ್ಸಿಗೆ ಬಿಟ್ಟುಕೊಡು' ಎಂದು. ಭರತ ತಮ್ಮನನ್ನು ಎಷ್ಟೋ ಬಗೆಯಾಗಿ ಕೇಳಿಕೊಂಡ. ಕಣ್ಣೀರು ಸುರಿಸಿದ. ಬಾಹುಬಲಿ ಅಣ್ಣನನ್ನು ಕಡೆಗೂ ಒಪ್ಪಿಸಿ ತಪಸ್ಸಿಗೆ ಹೊರಟುಹೋದನು. ಜೈನ ದೀಕ್ಷೆಯನ್ನು ಕೈಕೊಂಡು ಪ್ರತಿಮಾಯೋಗದಲ್ಲಿ ನಿಂತನು. ಬಹುಕಾಲ ತಪಸ್ಸು ಮಾಡಿದರೂ ಬಾಹುಬಲಿಗೆ ಕೇವಲಜ್ಞಾನ ಲಭಿಸಲಿಲ್ಲ. ಭರತ ಅದಕ್ಕೆ ಕಾರಣವನ್ನು ವೃಷಭನಾಥನಿಂದ ತಿಳಿದುಕೊಂಡು, ತಮ್ಮನ ಮನಸಿನಲ್ಲಿದ್ದ ಸಂಶಯವನ್ನು ಹೋಗಲಾಡಿಸಿ ಆತ ಕೇವಲಜ್ಞಾನಿಯಾಗಲು ನೆರವು ನೀಡಿದನು. ಅವನನ್ನು ಪೂಜಿಸಿ ಭರತ ಕೃತಾರ್ಥನಾದನು.

ಸಾಹಸಭೀಮ ವಿಜಯ

'ಗದಾಯುದ್ಧ' ಅಥವಾ 'ಸಾಹಸಭೀಮ ವಿಜಯ'ವನ್ನು ಬರೆದವನು ಕವಿ ರನ್ನ. ಇವನೂ ಪಂಪನಂತೆ ಎರಡು ಕಾವ್ಯಗಳನ್ನು ಬರೆದಿದ್ದಾನೆ. ಅವನ ಇನ್ನೊಂದು ಕಾವ್ಯ 'ಅಜಿತಪುರಾಣ ತಿಲಕ'. ಅದರಲ್ಲಿ ಎರಡನೆಯ ತೀರ್ಥಂಕರನ ಪುಣ್ಯಚರಿತ್ರೆಯನ್ನು ವರ್ಣಿಸಲಾಗಿದೆ. ರನ್ನನ ಕಾಲ ದೇಶವನ್ನು ಕುರಿತು ತಿಳಿಸುವುದು ಕಷ್ಟವಿಲ್ಲ. ತನ್ನ ಪರಿಚಯವನ್ನು 'ಅಜಿತಪುರಾಣ ತಿಲಕ'ದಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಅವನು ಹುಟ್ಟಿದ್ದು ಕ್ರಿ. ಶ. ೯೪೯ರಲ್ಲಿ. ಮುದುವೊಳಲು (ಮುಧೋಳ್) ಅವನ ಜನ್ಮಸ್ಥಳ. ಅವನ ತಾಯಿ ಅತ್ತಿಮಬ್ಬೆ ; ಜಿನವಲ್ಲಬೇಂದ್ರ ಅವನ ತಂದೆ. ಅವರ ವೃತ್ತಿ ವ್ಯಾಪಾರ. ಅವನು ಬಳೆಗಾರ ಕುಲದವನು ('ಬಳೆವ್ಯಾಪಾರ' ಎಂಬುದು ಅದರ ಅರ್ಥವಲ್ಲ. ಬಳಗಾಜಿ (ಬಲಕರ) ಎಂಬ ಒಂದು

ಜೈನ ಪಂಥದ ಹೆಸರಿರಬಹುದೇನೋ ಎಂಬ ಒಂದು ಊಹೆ ಇದೆ). ಅವನಿಗೆ ಇಬ್ಬರು ಹೆಂಡತಿಯರು. ಅವನ ವಿದ್ಯಾಭ್ಯಾಸ ಅತ್ತಿಮಬ್ಬೆಯ ಪ್ರೋತ್ಸಾಹದಿಂದ ಮುಂದುವರಿಯಿತು. ಅವರಿಗೆ ಚಾವುಂಡರಾಯನಲ್ಲಿ ಹೆಚ್ಚಿನ ಭಕ್ತಿ, ಗೌರವ. ಚಾಳುಕ್ಯರ ತೈಲಪನ ಆಸ್ಥಾನಕವಿಯಾಗಿದ್ದುಕೊಂಡು ಅವನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಸಂಪಾದಿಸಿದನು.

ರನ್ನ ಪ್ರತಿಭಾವಂತ ಕವಿ. ತನ್ನ ರಾಜನನ್ನು ಕೀರ್ತಿಸಲು 'ಸಾಹಸ ಭೀಮ ವಿಜಯ'ವನ್ನು ರಚಿಸಿದನು. ಇದು ಮಹಾಭಾರತದ ಗದಾಪರ್ವದ ಕಥೆ. ಪಂಪನ ೧೩ನೆಯ ಆಶ್ವಾಸದ ಕಥೆಯ ವಿಸ್ತೃತರೂಪ. ಆದರೆ ಕಾವ್ಯದಲ್ಲಿ ರನ್ನನ ಪ್ರತಿಭೆ ಸಾಗರವಾಗಿ ತುಂಬಿ ಭೋರ್ಗರೆಯುತ್ತದೆ. ಪಂಪನ ಅನುಸರಣೆಯಂತೆ ಭಾರತವನ್ನು ಭೀಮನ ಪಟ್ಟಾಭಿಷೇಕದಿಂದ ಮುಗಿಸುತ್ತಾನೆ. ಏಕೆಂದರೆ ತನ್ನ ಕಾವ್ಯದ ನಾಯಕ ಭೀಮ. ಕವಿಯ ಅಂತರ್ದೃಷ್ಟಿ ಖಳನಾಯಕನಾದ ದುರ್ಯೋಧನನ ವ್ಯಕ್ತಿತ್ವವನ್ನು ಕಂಡು ಮೆಚ್ಚುತ್ತದೆ. ಅವನನ್ನು ದುರಂತ ನಾಯಕನನ್ನಾಗಿ ಚಿತ್ರಿಸಿ ಅವನ ಪಾತ್ರವನ್ನು ಆಶ್ಚರ್ಯಕರವಾಗಿ ಕಡೆದಿದ್ದಾನೆ. ಅದೇ ರನ್ನನ ವೈಶಿಷ್ಟ್ಯ. ಕಥೆ ಒಂದು ಪರ್ವಕ್ಕೆ ಸಂಬಂಧಿಸಿದ್ದರೂ ಸಿಂಹಾವಲೋಕನದಿಂದ ಭಾರತದ ಪೂರ್ಣ ಕಥೆಯನ್ನು ಸಂಗ್ರಹಿಸಿದ್ದಾನೆ ತನ್ನ ಕಾವ್ಯದಲ್ಲಿ.

೧. ಪೀಠಿಕೆ

ಚಳುಕ್ಯ ನಾರಾಯಣನನ್ನು ಸ್ತುತಿಸಿ, ಕೃತಿಯ ಹೆಸರನ್ನೂ ಕೃತಿಯ ಆಶ್ರಯದಾತನನ್ನೂ ಕೃತಿಕರ್ತನನ್ನೂ ಹೆಸರಿಸುತ್ತಾನೆ. ತನ್ನ ಪಾಂಡಿತ್ಯವನ್ನು ಹೊಗಳಿಕೊಳ್ಳುತ್ತಾನೆ. ಭಾರತದ ಕಥೆಯನ್ನೆಲ್ಲ ಇದರಲ್ಲಿ ಅಡಗಿಸಿಟ್ಟಿದ್ದೇನೆ ಎಂದು ಸೂಚಿಸುತ್ತಾನೆ.

೨. ದುರ್ಯೋಧನನ ಕೆಚ್ಚು

ದುರ್ಯೋಧನನ ಪಕ್ಷದವರೆಲ್ಲ ಸೋತು, ಸತ್ತು ಅವನೊಬ್ಬ ಉಳಿದುಕೊಂಡಿರುತ್ತಾನೆ. ತಾಯಿ ತಂದೆಯರ ಮಾತಿನಂತೆ ಭೀಷ್ಮನ ಬಳಿಗೆ ಹೋಗಿ ಅವರಿಂದ ಮುಂದಿನ ಮಾರ್ಗವನ್ನು ಕೇಳಿ, ಅದರಂತೆ ಒಂದು ದಿನ ಶತ್ರುಗಳಿಂದ ತಪ್ಪಿಸಿಕೊಂಡರೆ ಮೂರನೆಯ ದಿನ ತೀರ್ಥಯಾತ್ರೆಗೆ ಹೋಗಿದ್ದ ಬಲರಾಮ ಬಂದು ಅವನೊಡನೆ ಕೂಡಿಕೊಳ್ಳುತ್ತಾನೆಂದೂ ಆಗ ಅವನಿಗೆ ಜಯ ಲಭಿಸಬಹುದೆಂದೂ ತಿಳಿದು ವೈಶಂಪಾಯನ ಸರೋವರದಲ್ಲಿ ಜಲ ಮಂತ್ರದಿಂದ ಅಡಗಿರುತ್ತಾನೆ. ಆದರೆ ಕೃಷ್ಣನ ಬುದ್ಧಿ ಚಾತುರ್ಯದಿಂದ ಕೌರವ ಅಡಗಿರುವ ಸ್ಥಳ ಗೊತ್ತಾಗಿ ಅವನನ್ನು ಸರೋವರದಿಂದ ಹೊರಗೆ ತರಲು ಪಾಂಡವರು ಪ್ರಯತ್ನಿಸುತ್ತಾರೆ. ಕಡೆಗೆ ಭೀಮನ

ಭೀಕರವಾದ ಮಾತುಗಳು ದುರ್ಯೋಧನನ ಅಭಿಮಾನವನ್ನು ಕೆರಳಿಸುತ್ತವೆ. ಅವನು ನೀರಿನಲ್ಲಿ ಮುಳುಗಿದ್ದರೂ ಬೆವರುತ್ತಾನೆ. ತನ್ನ ಸ್ಥಿತಿಯನ್ನು ಕುರಿತು ಕ್ಷಣಕಾಲ ಯೋಚಿಸುತ್ತಾನೆ: 'ಜನ ನನ್ನನ್ನು ಕುರಿತು ಹೇಡಿ, ಶತ್ರುವಿಗೆ ಹೆದರಿ, ಬಲಹೀನನಾಗಿ ಅಡಗಿದ್ದಾನೆ ಎಂದುಕೊಳ್ಳುವುದಿಲ್ಲವೆ? ಕುಲದ, ತ್ಯಾಗದ, ಛಲದ ಅಗ್ಗಳಿಕೆಗೆ ಮೆರೆದ ನಾನು ಹೀಗೆ ನೀರಿನಲ್ಲಿ ಮುಳುಗಿ ಲಘುವಾಗಬಹುದೆ?' ಎಂದು ಕಡೆಗೆ ತನ್ನ ಅವಸ್ಥೆಗೆ ತಾನೇ ನಾಚಿ ಸರೋವರದಿಂದ ಭೂಮಿಯೊಳಗಿಂದ ಜ್ವಾಲಾಮುಖಿ ಹೊರಬರುವಂತೆ ಎದ್ದು ಬರುತ್ತಾನೆ. ಅವನು ಬಂದ ತಕ್ಷಣ ಭೀಮ 'ನಿನ್ನ ತಮ್ಮಂದಿರ ರಕ್ತ ಕುಡಿದಾಯಿತು, ನಿನ್ನ ರಕ್ತಕ್ಕಾಗಿ ಕಾದಿದ್ದೇನೆ' ಎನ್ನುತ್ತಾನೆ. ಕೌರವನೂ ಕೋಪದಿಂದ 'ನಿಮಗೆಲ್ಲರಿಗೂ ಪ್ರಿಯಳಾಗಿದ್ದ ದ್ರೌಪದಿಯ ಕೇಶವನ್ನು ಎಳೆಯುವಾಗ ನಿನ್ನ ಈ ಗಂಡು ಗರ್ವ ಎಲ್ಲಿ ಹೋಗಿತ್ತು? ನನ್ನ ತಮ್ಮ ದ್ರೌಪದಿಯನ್ನು ಎಳೆದು ತಂದಾಗ ರಾಜ್ಯಲಕ್ಷ್ಮಿಯನ್ನೂ ತಂದುಕೊಟ್ಟನು. ನಾನು ಹೆದರಿ ಕೊಳವನ್ನು ಪ್ರವೇಶಿಸಲಿಲ್ಲ. ನೀನು ಅಡುಗೆಯವನು, ನಿನಗೇಕೆ ಯುದ್ಧದ ಯೋಚನೆ, ಅಡಿಗೆ ಮಾಡುವುದೇ ನಿನಗೆ ಸರಿ, ಹೋಗು!' ಎಂದನು. ಅದಕ್ಕೆ ಭೀಮನೂ ಕಠೋರವಾಗಿಯೇ ಉತ್ತರಿಸಿದನು. 'ಅಣ್ಣನ ಆಜ್ಞೆಯನ್ನು ಮೀರಲಾರದೆ ಅಡಿಗೆಯವನೂ ಆದೆ. ಈಗ ನಿನ್ನ ಮಾಂಸದಿಂದ ಅಡುಗೆ ಮಾಡುತ್ತೇನೆ. ಚಿತ್ರಾಂಗದನಿಂದ ನಿನಗೆ ಆದ ಅಪಮಾನವನ್ನು ನೆನಪಿಗೆ ತಂದುಕೊ! ಗೋಗ್ರಹಣದ ಸೋಲನ್ನು ಜ್ಞಾಪಿಸಿಕೊ, ದುಶ್ಶಾಸನನ ರಕ್ತವನ್ನು ಹೀರುವಾಗ ಹೆದರಿ ಓಡಿದುದನ್ನು ಮನಸ್ಸಿಗೆ ತಂದುಕೊ, ಪಾಂಡವರನ್ನು ಅನೇಕ ವಿಧದಲ್ಲಿ ಕೊಲ್ಲಲು ನೋಡಿದೆ. ಈಗ ಆ ಕಾಲ ಹೋಯಿತು. ನಿನಗೆ ಅಂತ್ಯ ಕಾಲ ಒದಗಿದೆ' ಎಂದಾಗ, ದುರ್ಯೋಧನ 'ನಿಮ್ಮಲ್ಲಿ ಯಾರಾದರೂ ಬನ್ನಿ ನಾನು ಎದುರಿಸುತ್ತೇನೆ' ಎಂದನು. ದುರ್ಯೋಧನನ ವಿನಯವನ್ನು ಕೃಷ್ಣನು ಮೆಚ್ಚಿಕೊಂಡನು. ಆಗ ಧರ್ಮರಾಯನೂ 'ಹಿಂದಿನದನ್ನೆಲ್ಲ ಮರೆತು ಸಂಧಿ ಮಾಡಿಕೊಳ್ಳುವಂತೆ ಹೇಳಿದನು. ದ್ವೇಷವನ್ನು ಬಿಡು ಎಂದು ಬೇಡಿದನು. ನಾವು ಹೇಳಿದಂತೆ ಕೇಳು' ಎಂದ. ಕೇಳಿಕೊಂಡನು.

ಶ್ರೀ ಜಗನ್ನಾಥ ವಿಜಯ

ರುದ್ರಭಟ್ಟ ಕ್ರಿ.ಶ. ೧೧೮೫ರಲ್ಲಿದ್ದ ಬ್ರಾಹ್ಮಣ ಕವಿ. ಇವನಿಗೆ 'ಕೃತಿ ಶಾರದಾಭ್ರಚಂದ್ರಾತಪ', 'ಕವಿರಾಜ' ಎಂಬ ಬಿರುದುಗಳಿದ್ದಂತೆ ತೋರುತ್ತದೆ. ತನಗೆ ಹಿಂದೆ ಇದ್ದ ಸಂಸ್ಕೃತ ಕವಿಗಳನ್ನು ಕನ್ನಡ ಕವಿಗಳನ್ನೂ ಸ್ಮರಿಸಿದ್ದಾನೆ. ಪ್ರೌಢಕವಿ. ವಿಷ್ಣುಪುರಾಣದಲ್ಲಿ ಬರುವ ಕೃಷ್ಣನ ಕಥೆಯನ್ನು ತನ್ನ ಕಾವ್ಯದಲ್ಲಿ ವಿವರಿಸಿದ್ದಾನೆ. ಉದ್ದಾಮ ಪಂಡಿತ. ಸಂಸ್ಕೃತ–ಕನ್ನಡವನ್ನು ಚೆನ್ನಾಗಿ ಬಲ್ಲವನು.

ತನ್ನ ಕಾವ್ಯವನ್ನು 'ಅನವದ್ಯಂ ರೀತಿಜೋದ್ಯಂ ಸಕಲ ವಿಬುಧಹೃದ್ಯಂ' ಎಂದು ಹೊಗಳಿಕೊಂಡಿದ್ದಾನೆ.

ರುಕ್ಮಿಣೀ ಕಲ್ಯಾಣ

ಕೃಷ್ಣನನ್ನೂ ಬ್ರಹ್ಮನನ್ನೂ ಶಿವನನ್ನೂ ಪ್ರಾರಂಭದಲ್ಲಿ ಸ್ತುತಿಸಿ ವ್ಯಾಸ, ಬಾಣ, ಹರ್ಷ, ಮಾಘ ಮೊದಲಾದ ಸಂಸ್ಕೃತ ಕವಿಗಳನ್ನು ಸ್ತುತಿಸುತ್ತಾನೆ.

ದ್ವಾರಕೆಯಲ್ಲಿ ಕೃಷ್ಣ ಸುಖದಿಂದ ಇದ್ದನು. ಬಲರಾಮ ರೇವತಿಯನ್ನು ಮದುವೆ ಮಾಡಿಕೊಂಡು ಸುಖವಾಗಿ ಕಾಲ ಕಳೆಯುತ್ತಿದ್ದನು. ಆಗ ಒಂದು ದಿನ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ಒಂದು ಕಾಂತಿ ಇಳಿದು ಅದು ನಾರದ ರೂಪವನ್ನು ತಾಳಿತು. ಅವನನ್ನು ಕೃಷ್ಣ ಸಂಭ್ರಮದಿಂದ ಸ್ವಾಗತಿಸಿದನು. ನಾರದ ಕೃಷ್ಣನಿಗೆ ಮನಸ್ಸಿನಲ್ಲಿಯೇ ನಮಸ್ಕರಿಸಿದನು. ನಾರದನು ಅರ್ಘ್ಯಪಾದ್ಯಾದಿಗಳನ್ನು ಸ್ವೀಕರಿಸಿ ಆಸನದಲ್ಲಿ ಕುಳಿತನು. 'ತಾವು ದಯಮಾಡಿಸಿದ ಘನ ಉದ್ದೇಶ ವಾವುದು? ತಮ್ಮ ಆಗಮನದಿಂದ ನಾವು ಪುನೀತರಾದೆವು' ಎಂದು ಉಪೇಂದ್ರ ಹೇಳಿದಾಗ, ಮುನೀಂದ್ರ ರುಕ್ಮಿಣಿಯ ಸೌಂದರ್ಯವನ್ನು ವರ್ಣಿಸಿ 'ಅವಳು ನಿನ್ನಲ್ಲಿ ಮನಸ್ಸಿಟ್ಟಿದ್ದಾಳೆ. ಆದರೆ ಬಲವಂತದಿಂದ ಚೈದ್ಯನೃಪಾಲ ಅವಳನ್ನು ವಿವಾಹವಾಗಲು ಯತ್ನಿಸುತ್ತಿದ್ದಾನೆ. ಇದಕ್ಕೆ ತಕ್ಕ ಉಪಾಯವನ್ನು ನೀನೇ ಕೈಕೊಳ್ಳಬೇಕು, ನಿನಗೆ ರುಕ್ಮಿಣಿಯೊಡನೆ ವಿವಾಹವಾಗಬೇಕು. ಇದೇ ನಮ್ಮ ಅಪೇಕ್ಷೆ' ಎಂದು ಹೇಳಿ ನಾರದ ಕಣ್ಮರೆಯಾದನು. ಆಗ ಕೃಷ್ಣ ರುಕ್ಮಿಣಿಯನ್ನು ನಾನು ತಂದೇ ತರುತ್ತೇನೆ ಎಂದು ಪ್ರತಿಜ್ಞೆ ಮಾಡಿದನು. ರುಕ್ಮಿಣೀ ಹರಣಾರ್ಥವಾಗಿ ಅಣ್ಣನೊಡನೆ ಕೂಡಲೇ ಕೃಷ್ಣ ಭೀಷ್ಮಕಪುರಕ್ಕೆ ಹೊರಟನು. ಅಲ್ಲಿಗೆ ಶಿಶುಪಾಲನೂ ಬಂದಿದ್ದನು. ಕೃಷ್ಣ ಅನಿಲವೇಗದಿಂದ ಕುಂಡಿನಪುರದ ಸುಂದರವಾದ ಉದ್ಯಾನವನಕ್ಕೆ ಬಂದು ಸೇರಿದನು. ಅಲ್ಲಿನ ಸರೋವರದಲ್ಲಿ ಮುಖ ಪ್ರಕ್ಷಾಳನಾದಿ ಕಾರ್ಯವನ್ನು ನೆರವೇರಿಸುತ್ತಿರುವಾಗ ತರುಣಿಯರ ಆಭರಣಗಳ ಶಬ್ದ ಕೇಳಿಸಿತು. ಇಲ್ಲಿ ಕ್ರೀಡಿಸುತ್ತಿರುವ ಸುಂದರಾಂಗಿಯರಾರೆಂದು ಆ ವನದ ಪಾಲಕನನ್ನು ಕೇಳಿದನು ಅಲ್ಲಿಗೆ ಬಂದ ವನಮಾಲಿ. ಅದಕ್ಕೆ ಅವನು ಭೀಷ್ಮಕರಾಜಪುತ್ರಿ ಹೂವುಗಳನ್ನು ಸಖಿಯರೊಡನೆ ತಿರಿಯುತ್ತಿದ್ದಾಳೆ. ಈ ಹೂವಿನ ಸರೋವರಕ್ಕೆ ಬರುತ್ತಾಳೆ ಎಂದು ನಿವೇದಿಸಿದನು. ಅಷ್ಟರಲ್ಲಿ ಸಂಚರಿಸುವ ಬಳ್ಳಿಯ ವನವೇ ಬರುತ್ತಿದೆಯೋ ಎಂಬಂತೆ ರುಕ್ಮಿಣಿ ಸಖೀಜನ ಸಮೇತಳಾಗಿ ಕೃಷ್ಣ ನಿಂತಿದ್ದ ಸ್ಥಳದ ಕಡೆಗೆ ಬಂದಳು. ಅವಳನ್ನು ಕಂಡು ಕೃಷ್ಣನಿಗೆ ಅವಳಲ್ಲಿ ಆಸಕ್ತಿಯುಂಟಾಯಿತು. ತನ್ನ ಕಟಾಕ್ಷವನ್ನು ಅವಳ ಮೇಲೆ ಬೀರಿದನು. ಆತನ ಅಪಾಂಗ ದೃಷ್ಟಿಯಿಂದ ಸೆಳೆಯಲ್ಪಟ್ಟ ರುಕ್ಮಿಣಿ ಚಿತ್ರದ ಗೊಂಬೆಯಂತೆ ನಿಂತುಬಿಟ್ಟಳು. ಕೃಷ್ಣನ ರೂಪ ಅವಳಲ್ಲಿ ನೆಲಸಿಬಿಟ್ಟಿತು. ಅವಳ ದೃಷ್ಟಿ ಮಾಲೆಯಾಗಿ ಕೃಷ್ಣನ ಕೊರಳನ್ನು

ತುಂಬಿಕೊಂಡಿತು. ಅದನ್ನು ಅನುಸರಿಸುವಂತೆ ರುಕ್ಮಿಣಿ ತನ್ನ ಸಖಿಯರೊಡನೆ ಮದನ ಜಯಶ್ರೀಯಂತೆ ನಡೆದುಬಂದು ವನಮಾಲಿಗೆ ಮಾಲೆಯನ್ನು ಹಾಕಿಬಿಟ್ಟಳು. ಕೂಡಲೇ ಕೃಷ್ಣ ಅವಳನ್ನು ಎತ್ತಿಕೊಂಡು ತನ್ನ ರಥದಲ್ಲಿ ಕೂಡಿಸಿಕೊಂಡು ದ್ವಾರಕಾಭಿಮುಖವಾಗಿ ಹೊರಟುಬಿಟ್ಟನು.

ರುಕ್ಮಿಣೀಹರಣದ ಸುದ್ದಿ ಶಿಶುಪಾಲನಿಗೆ ತಿಳಿಯಿತು. ಆನೆಯ ಬೃಂಹಿತವನ್ನು ಕೇಳಿದ ಸಿಂಹದಂತೆ ಸಿಂಹಾಸನದಿಂದ ಎದ್ದುದನ್ನು ನೋಡಿದ ಭೀಷ್ಮಕರಾಜನ ಪುತ್ರ 'ತಾನು ಅವಳನ್ನು ಬಿಡಿಸಿಕೊಂಡು ಬರುತ್ತೇನೆ, ಕೃಷ್ಣನನ್ನು ಸೆರೆ ಹಿಡಿದು ಬರುತ್ತೇನೆ' ಎಂದು ಸೈನ್ಯಸಮೇತನಾಗಿ ಅವನಿದ್ದಲ್ಲಿಗೆ ಸೈನ್ಯವನ್ನು ಪ್ರಚೋದಿಸಿದನು. ಕೃಷ್ಣ ಬಲರಾಮನನ್ನು ರುಕ್ಮಿಣಿಯ ರಕ್ಷಣೆಗೆ ಇಟ್ಟು ರುಕ್ಮಿಯೊಡನೆ ಯುದ್ಧಕ್ಕೆ ತೊಡಗಿದನು. ರುಕ್ಮಿ ಸೋತು ಕೃಷ್ಣನಿಗೆ ತಂಗಿಯನ್ನೊಪ್ಪಿಸಿಬಿಟ್ಟನು. ದ್ವಾರಕಾ ಪಟ್ಟಣದಲ್ಲಿ ಆ ದಂಪತಿಗಳಿಗೆ ಸುಸ್ವಾಗತ ದೊರೆಯಿತು.

ಪಂಪರಾಮಾಯಣ

ಅಭಿನವ ಪಂಪನೆಂದು ಪ್ರಸಿದ್ಧನಾದ ನಾಗಚಂದ್ರ 'ರಾಮಚಂದ್ರ ಚರಿತ ಪುರಾಣ'ವನ್ನು ಬರೆದಿದ್ದಾನೆ. ಅದಕ್ಕೆ 'ಪಂಪರಾಮಾಯಣ'ವೆಂದು ಹೆಸರು. ಅವನ ಇನ್ನೊಂದು ಕಾವ್ಯ 'ಮಲ್ಲಿನಾಥಪುರಾಣ'. ಇವನಿಗೆ 'ಸಾಹಿತ್ಯ ವಿದ್ಯಾಧರ' ಎಂಬ ಬಿರುದು ಇದ್ದಂತೆ ತೋರುತ್ತದೆ. ಈಚಿನ ಸಂಶೋಧನೆಗಳಿಂದಲೂ ಅವನ ಕಾಲ ಕ್ರಿ.ಶ. ೧೧೦೦ ಎಂದೇ ಹೇಳಬೇಕಾಗುತ್ತದೆ. ಪಂಪರಾಮಾಯಣದಲ್ಲಿ ಜೈನ ರಾಮಾಯಣದ ಕಥೆಯನ್ನೂ ಮಲ್ಲಿನಾಥಪುರಾಣದಲ್ಲಿ ಮಲ್ಲಿನಾಥ ತೀರ್ಥಂಕರನ (೧೯ನೆಯ ತೀರ್ಥಂಕರ) ಚರಿತ್ರೆಯನ್ನೂ ವಿವರಿಸುತ್ತಾನೆ. ಅವನು ಯಾವ ರಾಜನ ಆಶ್ರಯವನ್ನೂ ಪಡೆದಿದ್ದಂತೆ ಕಾಣುವುದಿಲ್ಲ. ಇವನು ಮೊದಲು ಹೊಯ್ಸಳ ರಾಜ್ಯದಲ್ಲಿದ್ದು ಅನಂತರ ಚಾಳುಕ್ಯರ ರಾಜಧಾನಿಯ ಬಳಿ ತನ್ನ ವೃದ್ಧಾಪ್ಯವನ್ನು ಕಳೆದಿರಬಹುದು.

೧. ಪೀಠಿಕೆ

ಆರ್ಹಂತ್ಯ ಲಕ್ಷ್ಮೀಕಾಂತನು ನಮಗೆ ಇಷ್ಟಾರ್ಥಸಿದ್ಧಿಯನ್ನು ಮಾಡಲಿ ಎಂದು ಬೇಡಿ ಕಾವ್ಯವನ್ನು ಆರಂಭಿಸುತ್ತಾನೆ. ವಿದ್ಯಾನಟಿ(ಸರಸ್ವತಿ) ತನ್ನ ನಾಲಿಗೆಯ ಮೇಲೆ ನಲಿಯಲಿ ಎಂದು ಕೇಳಿಕೊಳ್ಳುತ್ತಾನೆ. ಕವಿಜ್ಯೇಷ್ಠರ ಪಾದಕಮಲಗಳು ತನ್ನ ಆಶೆಯ ಮಣಿಭವನಕ್ಕೆ ಹಾರವಾಗಲಿ ಎಂದು ಬಯಸುತ್ತಾನೆ. 'ಗೌತಮ ಗಣಾಗ್ರಣಿ ಮಗಧಾಧಿಪತಿಗೆ ತಿಳಿಯುವಂತೆ ಹೇಳಿದ ರಾಮಕಥೆಯನ್ನು ವರ್ಣಿಸುತ್ತೇನೆ' ಎಂದು ತನ್ನ ಗುರಿಯನ್ನು ವ್ಯಕ್ತಪಡಿಸುತ್ತಾನೆ.

೨. ಸೀತಾಹರಣಂ

ನಿರಪರಾಧಿಯಾದ ತನ್ನ ತಂಗಿಯ ಮಗನನ್ನು ಕೊಂದವನ ರಕ್ತವನ್ನು ತೆಗೆದು ಖರನ ಶೋಕಾಗ್ನಿಯನ್ನು ಆರಿಸುತ್ತೇನೆ ಎಂದು ಘೋಷಿಸುತ್ತ ದಶಾನನು ಖಚರನಾಯಕರನ್ನು ಬರಹೇಳಿದನು. ಅನಂತರ ತನ್ನ ಪುಷ್ಪಕವನ್ನು ಹತ್ತಿದನು. ತಾನು ಹೊರಡುವಾಗ ಅಪಶಕುನಗಳಾದರೂ ಲೆಕ್ಕಿಸದೆ ದಂಡಕಾರಣ್ಯಕ್ಕೆ ಬಂದನು. ಅಲ್ಲಿ ಸಿಡಿಲ ಪಕ್ಕದಲ್ಲಿರುವ ಮಿಂಚಿನಂತೆ ರಾಮನ ಪಕ್ಕದಲ್ಲಿರುವ ಸೀತೆಯನ್ನು ಕಂಡನು. ಅವಳ ರೂಪ ಅವನ ಚಿತ್ತವನ್ನು ಸಂಚಲಿಸಿತು. ಅವನ ಮನಸ್ಸು ಕದಡಿತು. ಅವಳನ್ನು ಮತ್ತೆ ಮತ್ತೆ ನೋಡಿದನು. ಅವನ ಅನ್ವಯಾಗತ ಗುಣ ನಷ್ಟವಾಯಿತು. ಅನ್ಯಾಂಗನಾಸ್ಪೃಹೆ ಅವನಲ್ಲಿ ಮೂಡಿತು. ಸಮುದ್ರ ಒಮ್ಮೊಲೇ ಮರ್ಯಾದೆ ಮೀರುವಂತೆ ಇವನೂ ಮರ್ಯಾದೆಯನ್ನು ಮೀರಿದನು. ಅವಿವೇಕಿಯಾಗಿ ರಾಮನ ಹೆಂಡತಿಯನ್ನು ಅಪೇಕ್ಷಿಸಿದನು. ಅವಳನ್ನು ಪಡೆಯಲು ಅವಲೋಕಿನೀ ವಿದ್ಯೆಯನ್ನು ಬರಮಾಡಿಕೊಂಡು ಆಕೆಯ ಸಹಾಯ ಕೇಳಿದಾಗ ಅವಳು ರಾಮಸೀತೆಯರ ಚರಿತ್ರೆಯನ್ನು ಹೇಳಿ ನೀನು ಅವಳನ್ನು ಅಪೇಕ್ಷಿಸುವುದು ಸರಿಯಲ್ಲ, ಕಾಪಾಡುವವರೇ ಕೊಲ್ಲಬಾರದು. ರಾಮ ಪರಾಕ್ರಮಿ, ಹದಿನಾಲ್ಕು ಸಾವಿರದ ಬಲವನ್ನು ಏಕಾಕಿಯಾಗಿ ನಿರ್ಮೂಲ ಮಾಡಿದ್ದಾನೆ. ಅಂಥವರೊಡನೆ ದ್ವೇಷ ಸಲ್ಲದು ಎಂದು ಉಪದೇಶಿಸಿದಳು. ರಾವಣನಿಗೆ ಕೋಪ ಬಂದು 'ನಾನೊಂದು ಕೇಳಿದರೆ ನೀನೊಂದು ಹೇಳುತ್ತೀಯೆ' ಎಂದು ವಿದ್ಯಾದೇವತೆಯನ್ನೇ ಆಕ್ಷೇಪಿಸಿದಾಗ, ಆಕೆ 'ಇವನಿಗೆ ದಶರಥನ ಮಕ್ಕಳಿಂದ ಮರಣವಿದೆ, ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂಬುದನ್ನು ಆಲೋಚಿಸಿ, 'ತನಗೆ ಯುದ್ಧ ಮಾಡುವುದು ಕಷ್ಟವೆಂದು ತೋರಿದಾಗ ಸಿಂಹನಾದ ಮಾಡುತ್ತೇನೆ, ಆಗ ನೀನು ಬಾ' ಎಂದು ಲಕ್ಷ್ಮಣ ಹೇಳಿಹೋಗಿದ್ದಾನೆ' ಎಂದಳು. 'ಹಾಗಾದರೆ ನೀನು ರಣಭೂಮಿಗೆ ಹೋಗಿ ವೈಕುರ್ವಣ ಶಕ್ತಿಯಿಂದ ಸಿಂಹನಾದ ಮಾಡು' ಎಂದು ಹೇಳಿಕಳಿಸಿದನು. ಅವಳು ಸಿಂಹನಾದವನ್ನು ಮಾಡಿದಳು. ಆ ಧ್ವನಿಯನ್ನು ಲಕ್ಷ್ಮಣನ ಕೂಗೆಂದು ಭ್ರಮಿಸಿ ರಾಮ ಸೀತೆಯನ್ನು ಬಿಟ್ಟು ಅವಳ ರಕ್ಷಣೆಗೆ ಜಟಾಯುವನ್ನು ನೇಮಿಸಿ ಯುದ್ಧಕ್ಕೆ ತೆರಳಿದನು. ಆಗ ರಾವಣ ಪರಸ್ತ್ರೀಗೆ ಆಸೆಪಟ್ಟು ಅಧೋಗತಿಗೆ ಇಳಿಯುವುದನ್ನು ನಟಿಸುವಂತೆ ಅಂತರಿಕ್ಷದಿಂದ ಭೂಮಿಗೆ ಇಳಿದು ಸೀತೆಯ ಬಳಿಗೆ ಬಂದ. ದೋಷಿ ಕಾಸಿದ ಕಬ್ಬಿಣದ ಕುಳವನ್ನು ಹಿಡಿವಂತೆ ಸೀತೆಯನ್ನು ಹಿಡಿದು, ವಿಮಾನದಲ್ಲಿಟ್ಟು, ಚಂದ್ರನನ್ನು ರಾಹು ಒಯ್ಯುವ ಹಾಗೆ ಹೊತ್ತುಕೊಂಡು ಹೊರಟ. ಇದನ್ನು ಕಂಡ ಸೀತೆಯ ಕಾವಲುಗಾರನಾದ ಜಟಾಯು ಮೇಲೆ ಹಾರಿ ತನ್ನ ಹರಿತವಾದ ಉಗುರುಗಳಿಂದ, ಕೊಕ್ಕಿನಿಂದ ರಾವಣನನ್ನು ಘಾಯಪಡಿಸಿ ಎದುರಿಸಿದ. ಆದರೆ ಅವನ ಖಡ್ಗದ ಪೆಟ್ಟಿನಿಂದ ರೆಕ್ಕೆಗಳನ್ನು ಕಳೆದುಕೊಂಡು ಅಂತರಿಕ್ಷದಿಂದ ಭೂಮಿಗೆ ಬಿದ್ದ

ವಜ್ರಹತಿಯಿಂದ ಬೆಟ್ಟ ಆಕಾಶದಿಂದ ನೆಲಕ್ಕೆ ಬೀಳುವಂತೆ. ಆಗ ಸೀತೆ ದಿಕ್ಕೆಟ್ಟು ಅತ್ತಳು. ಅವಳ ಅಳುವಿನೊಡನೆ ತಾವೂ ಅಳುವಂತೆ ದಿಗ್ದೇವತೆಗಳು ಅವಳ ಅಳುವನ್ನು ಪ್ರತಿಧ್ವನಿಸಿದರು. ದುಃಖಿತಳಾದ ಸೀತೆಯ ರೂಪ ರಾವಣನ ರಥದ ಕಂಬಗಳಲ್ಲಿ ಪ್ರತಿಬಿಂಬಿಸಿ ಅಲ್ಲಿ ಕೆತ್ತಿದ ಪ್ರತಿಮೆಗಳೂ ಅಳುವಂತೆ ಕಂಡುಬಂದವು. ಸೀತೆ ದುಃಖಪೀಡಿತಳಾಗಿ ಮೂರ್ಛೆ ಹೋದಳು. ರಾಮನನ್ನು ಹೃದಯ ರಂಗದಲ್ಲಿ ನೋಡುವಂತೆ ಕಣ್ಣು ಮುಚ್ಚಿದಳು. ಎಚ್ಚೆತ್ತು 'ರಾಮಾ, ಹಾ ರಾಮಾ' ಎಂದು ಅರಚುತ್ತಾ ರಕ್ಷಣೆಗಾಗಿ ಹಾತೊರೆದಳು.

ಇತ್ತಲಾಗಿ ಲಕ್ಷ್ಮಣನ ಸಿಂಹಗರ್ಜನೆಯನ್ನು ಕೇಳಿ ಅವನ ಸಹಾಯಕ್ಕೆ ಬಂದ ರಾಮನನ್ನು ನೋಡಿ ಲಕ್ಷ್ಮಣನು 'ನೀನೇಕೆ ಸೀತೆಯನ್ನು ಬಿಟ್ಟುಬಂದಿ' ಎಂದು ಪ್ರಶ್ನಿಸಿದಾಗ 'ನಿನ್ನ ಸಿಂಹನಾದವನ್ನು ಕೇಳಿ ಬಂದೆ' ಎಂದನು. 'ನಾನು ಸಿಂಹ ನಾದ ಮಾಡಲಿಲ್ಲ, ಯಾರೋ ಮಾಯಾವಿಗಳು ಕೂಗಿರಬೇಕು, ನೀವು ದಯಮಾಡಿ, ನಾನು ನಿಮ್ಮ ಹಿಂದೆಯೇ ಬರುತ್ತೇನೆ' ಎಂದು ಪ್ರಾರ್ಥಿಸಿಕೊಂಡನು. ರಾಮ ಹಿಂದಿರುಗಿ ಬಂದಾಗ ಲತಾಭವನದಲ್ಲಿ ಸೀತೆಯಿರಲಿಲ್ಲ. ಸೀತೆಯು ಕಣ್ಮರೆಯಾಗಿರು ವುದನ್ನು ಕಂಡು ಅವನು ಮೂರ್ಛೆ ಹೋದನು. ಮತ್ತೆ ಎಚ್ಚೆತ್ತನು. ಜಟಾಯುವಿನ ಪ್ರಾಣ ಸಂಕಟದ ಶಬ್ದ ಕೇಳಿಸಿತು. ಅವನಿಂದ ಸೀತಾಪಹರಣದ ವಾರ್ತೆಯನ್ನು ಕೇಳಿ ತಿಳಿದನು. ಸಾಯುತ್ತಿರುವ ಅವನಿಗೆ ಸದ್ಗತಿಯನ್ನು ಕೊಡಿಸಿ ಸೀತಾ ವಿರಹದಿಂದ ರಾಮ ಬಹುವಾಗಿ ಪರಿತಪಿಸಿದನು. ಸೀತೆಯ ಮೃದುಸ್ವಭಾವವನ್ನೂ ಸುಂದರ ಲಾವಣ್ಯವನ್ನೂ ನೆನೆಸಿಕೊಂಡು ಪುನಃ ಪುನಃ ದುಃಖಿಸಿದನು. ಅಷ್ಟರಲ್ಲಿ ಲಕ್ಷ್ಮಣ ಖರದೂಷಣರನ್ನು ಕೊಂದು, ವಿರಾಧಿತನಿಗೆ ಪಾತಾಳ ಲಂಕೆಯ ಆಧಿಪತ್ಯ ವನ್ನು ಕೊಟ್ಟು ಹಿಂತಿರುಗಿ ಬಂದು, ಸೀತೆಯಿಲ್ಲದ ರಾಮನನ್ನು ಕಂಡನು. ರಾಮನು ಸೀತೆಯಿಲ್ಲದೆ ಇರುವುದನ್ನೂ ಎಲ್ಲೆಲ್ಲಿ ಹುಡುಕಿದರೂ ಅವಳು ಕಾಣಿಸದಿದ್ದುದನ್ನೂ ಹೇಳಿದನು. ಆಗ ವಿರಾಧಿತನು ಸೈನ್ಯಸಮೇತನಾಗಿ ಬಂದು ಸೀತಾನ್ವೇಷಣಕ್ಕೆ ತಾನು ಸಹಾಯ ಮಾಡುವುದಾಗಿ ಹೇಳಿ, ಸೀತಾದೇವಿಯ ಅಣ್ಣನಾದ ಪ್ರಭಾ ಮಂಡಲನನ್ನು ಕರೆಸಿ ಸೂಕ್ತ ಕ್ರಮ ಕೈಕೊಳ್ಳುವುದಾಗಿ ತಿಳಿಸಿ ರಾಮ ಲಕ್ಷ್ಮಣ ರನ್ನು ಪಾತಾಳ ಲಂಕಾಪುರಕ್ಕೆ ಕರೆದುಕೊಂಡು ಹೋದನು.

ಶಬರ ಶಂಕರ ವಿಳಾಸ

ಷಡಕ್ಷರಿ ಪಂಡಿತ ಕವಿ. ಹರಿಹರನ ಸಂಪ್ರದಾಯವನ್ನು ಅನುಸರಿಸಿದವನು. ಅವನ ಕಾಲ ೧೬೫೫. 'ಈತ ರಾಜಶೇಖರ ವಿಲಾಸ', 'ವೃಷಭೇಂದ್ರ ವಿಜಯ', 'ಶಬರ ಶಂಕರ ವಿಲಾಸ', 'ಷಡಕ್ಷರ ಮಂತ್ರ ಸ್ತೋತ್ರ' ಎಂಬ ಗ್ರಂಥಗಳನ್ನು ಬರೆದಿದಾನೆ. ಇವನು ವೀರಶೈವ ಕವಿ. ಮಳವಳ್ಳಿ ತಾಲ್ಲೂಕಿನ ದನಗೂರು ಇವನ

ಊರು. ಅನಂತರ ಅದೇ ಊರಿನ ಮಠಕ್ಕೆ ಸ್ವಾಮಿಯ ಶಿಷ್ಯನಾಗಿ ಮುಂದೆ ಯಳಂದೂರು ಮಠಕ್ಕೆ ಸ್ವಾಮಿಯಾದನು. ಇವನಿಗೆ 'ಉಭಯ ಕವಿತಾ ವಿಶಾರದ' ಎಂಬ ಬಿರುದಿದ್ದಂತೆ ತಿಳಿಯುತ್ತದೆ.

'ಗಿರೀಶನು ನಮ್ಮನ್ನು ಕಾಪಾಡಲಿ' ಎಂದು ಪ್ರಾರ್ಥಿಸಿ ಪಾರ್ವತಿಯನ್ನು ಸ್ತುತಿಸಿ ಹಿರಿಯ ಕವಿಗಳಿಗೆ ಪ್ರದಕ್ಷಿಣೆ ಹಾಕಿ 'ಕಾವ್ಯವನ್ನು ಬರೆಯುತ್ತೇನೆ' ಎಂದು ಹೇಳಿಕೊಳ್ಳುತ್ತಾನೆ.

೨. ಪಾಶುಪತಾಸ್ತ್ರ ಪ್ರದಾನ

ಅತಿಖಳ ಮೂಕದಾನವನೆಂಬುವನೊಬ್ಬನು ಬೆಟ್ಟದ ಗುಹೆಯಲ್ಲಿದ್ದು ದೇವತೆಗಳ ಆರ್ಭಟವನ್ನು ಕೇಳಿ ಇವರನ್ನೆಲ್ಲ ತಿಂದುಹಾಕಿಬಿಡುತ್ತೇನೆಂದು ವರಾಹ ರೂಪದಿಂದ ಹೊರಕ್ಕೆ ಬಂದನು. ವರಾಹದ ಕಣ್ಣಿನಲ್ಲಿ ಜ್ವಾಲಾಮುಖಿ ತುಂಬಿತ್ತು. ಬಾಯಲ್ಲಿ ಎರಡು ಚೂಪಾದ ದಾಡೆಗಳು ಹೊರಹೊಮ್ಮಿದ್ದುವು. ಭೀಕರವಾದ ಮುಖ ಸಿಡಿಲಿನಂತಿತ್ತು. ಕತ್ತಲೆಯ ರಾಶಿಯಂತಿರುವ ದೇಹದಿಂದ ಕೂಡಿದ ಹಂದಿ ಹೊರಬಂದಿತು. ಸೊಕ್ಕಿದ ಹಂದಿ ಪರ್ವತವೇ ಪ್ರತಿಧ್ವನಿಸುವಂತೆ ಆರ್ಭಟಿಸುತ್ತಾ ಬರುತ್ತಿತ್ತು. ಅದನ್ನು ಕಂಡು ಭಯಪೀಡಿತರಾದ ಬೇಡರು ಧೈರ್ಯ ತುಂಬಿಕೊಂಡು ಅದನ್ನು ಎದುರಿಸಲು ಸಜ್ಜಾದರು. ಅದು ಅವರನ್ನು ಎದುರಿಸಿತು. ತನ್ನ ನಟ್ಟನೋಟದಿಂದ ಬೇಡರನ್ನು ದೃಷ್ಟಿಸಿತು. ಬೇಡರಿಗೆ ಭಯವಾಯಿತು. ಆದರೂ ಅದನ್ನು ಅಟ್ಟಿಕೊಂಡು ಹೋದರು. ಅದು ನಿಲ್ಲುತ್ತ, ಮೇಲೆ ನುಗ್ಗುತ್ತ, ತಿರುಗಿ ನಡೆಯುತ್ತ ಅವರ ಗುರಿಗೆ ಸಿಕ್ಕದೆ, ಅವರೇ ಧೈರ್ಯಗೆಡುವಂತೆ ಮಾಡುತ್ತಿತ್ತು. ಅದರ ಮೈಗೆ ಚುಚ್ಚಿಕೊಂಡ ಬೇಡರ ಬಾಣಗಳು ಅದು ಮುಳ್ಳುಹಂದಿಯೇ ಎನಿಸುವಂತೆ ಕಾಣಿಸುತ್ತಿತ್ತು. ಅದನ್ನು ಬೇಟೆಯಾಡಲಾರದೆ ತತ್ತರಿಸುತ್ತಲಿದ್ದ, ಹೆದರಿ ಓಡಲು ಸಿದ್ಧರಾಗಿರುವ ಬೇಡರ ಪಡೆಯನ್ನು ಶಿವ ಕಂಡು ಅವರಿಗೆ ಭರವಸೆ ನೀಡಿ, ಅದನ್ನು ಕೊಲ್ಲಲು ಬಿಲ್ಲನ್ನು ಸಜ್ಜುಗೊಳಿಸಿ, ನೀವಿಯನ್ನು ಎಳೆದು ಠಂಕಾರ ಮಾಡಿದನು. ಆಗ ಭೂಮಿ ನಡುಗಿತು, ಸಮುದ್ರ ಉಕ್ಕಿತು. ಆಗ ಕಪರ್ದಿ ಬತ್ತಳಿಕೆಯಿಂದ ಒಂದು ಹರಿತವಾದ ಬಾಣವನ್ನು ತೆಗೆದು ಹೂಡಿ, ಕಿವಿಯವರೆಗೆ ಸೆಳೆದು ಎದುರಿಗೆ ಬಂದ ಗಜಾಸುರನಂತಿದ್ದ ಹಂದಿಗೆ ಹೊಡೆದನು. ಹಂದಿ ಬಾಣಾಘಾತದಿಂದ ಮೂರ್ಛೆಹೋಯಿತು. ದೇಹದಲ್ಲಿ ಆದ ಬಾಣದ ಘಾಯದಿಂದ ರಕ್ತ ಚಿಮ್ಮಿತು. ಆದರೆ ಕೂಡಲೆ ಎಚ್ಚರಗೊಂಡು ಮಡು, ಗಿಡ, ಹಳ್ಳ, ದಿಣ್ಣೆ, ಮೆಳೆ, ಬಳ್ಳಿ ಇವು ಯಾವುದನ್ನೂ ಲೆಕ್ಕಿಸದೆ ಓಡಿ ಕಣ್ಮರೆಯಾಯಿತು. ಅದು ಅಲ್ಲಿಂದ ಅರ್ಜುನನಿದ್ದ ವನಕ್ಕೆ ಬಂದಿತು. ಅದರ ನೋವಿನ ಕೂಗಿಗೆ ಅರ್ಜುನನ ತಪಸ್ಸು ಭಂಗವಾಯಿತು. ಕಣ್ಣು ತೆರೆದು ನೋಡಿದ. ಅದರ ಭೀಕರಾಕೃತಿಯನ್ನು ಕಂಡು ಇದು ತಪಸ್ವಿಗಳಿಗೆ ತೊಂದರೆ ಕೊಡುತ್ತದೆ, ಆದ್ದರಿಂದ

ಇದನ್ನು ನಿವಾರಿಸಬೇಕು ಎಂದು ನಿಶ್ಚಯಿಸಿ, ಕ್ಷಾತ್ರಧರ್ಮವನ್ನು ಅವಲಂಬಿಸಿ ಬಾಣ ಹೊಡೆದು ಅದನ್ನು ಕೆಡವಿದನು. ಅಷ್ಟರಲ್ಲಿ ಶಂಕರ ಅಲ್ಲಿಗೆ ಬಂದು 'ಈ ಹಂದಿ ನಮ್ಮದು, ನಾನು ಕೊಂದೆ, ಇದನ್ನು ತೆಗೆದುಕೊಂಡು' ಹೋಗಿ ಎಂದು ತನ್ನ ಭೂತಗಣಕ್ಕೆ ಅಪ್ಪಣೆ ಮಾಡಿದನು. ಆಗ ಅರ್ಜುನ 'ಇದು ನನ್ನ ಬಾಣ ದಿಂದ ಸತ್ತಿತು, ನಾನು ಇದನ್ನು ಯಾರಿಗೂ ಬಿಟ್ಟುಕೊಡುವುದಿಲ್ಲ' ಎಂದನು. ಎದುರಿಗೆ ಇರುವ ಕಿರಾತ ಶಂಕರ ಎಂಬುದು ಅವನಿಗೆ ತಿಳಿಯದು. 'ಎಲೆ ಬೇಡ, ನಿನ್ನ ಸಾಹಸ ಬಡ ನರಿ, ಹುಲ್ಲೆಗಳಲ್ಲಿ, ನನ್ನ ಮುಂದೆ ನಡೆಯಲಾರದು' ಎಂದನು. ಅರ್ಜುನನ ಕೆಚ್ಚಿನ ಮಾತನ್ನು ಕೇಳಿ ಪುಳಿಂದಿಯ ರೂಪದಲ್ಲಿದ್ದ ಅಗಜೆಗೆ ಶಿವ ಹೇಳಿದ: 'ನೋಡಿದೆಯಾ ಇವನ ಶೌರ್ಯವನ್ನು!' ಎಂದು. ಮತ್ತೆ ಅರ್ಜುನನಿಗೆ ಹೇಳಿದ: ನಿನ್ನ ತಪಸ್ಸೇನು? ನಿನ್ನ ವೇಷವೇನು? ಅದಕ್ಕೆ ಇದಕ್ಕೆ ಏನು ಸಂಬಂಧ? ವಿಚಿತ್ರವಾಗಿದೆಯಲ್ಲ!' ಅರ್ಜುನ: ಅಯ್ಯಾ ಕಾಡಿಗ, ನಿನಗೆ ಸಂಬಂಧಿಸಿದ್ದು ಬೇಟೆ, ನಮ್ಮ ತಪಸ್ಸಿನ ವಿಚಾರವೇಕೆ?' ಗಿರಿಶ: 'ಒಳ್ಳೆಯದು, ಆದರೆ ಶಸ್ತ್ರಧರನಾದ ತಪಸ್ವಿ ಯಾರು? ನನಗೆ ತಿಳಿಯದು!' ಅರ್ಜುನ: "ಈ ಕಟಕಿ ನುಡಿ ಬೇಡ. ನನ್ನ ವೃತ್ತಿಯನ್ನು ಬಲ್ಲವರು ಬಲ್ಲರು. ಜಟೆ, ಮೃಗಚರ್ಮ, ಭಸಿತಾಂಗಗಳನ್ನು ಹೊಂದಿದ, ಖಡ್ಗವನ್ನು ಧರಿಸಿದ ತಾಪಸೋತ್ತಮ ಶಿವ. ಅವನ ಶಿಷ್ಯ ನಾನು, ನನಗೂ ಅದೇ ವೇಷ! ನೀನು ನನಗೆ ಸರಿಯೇ? ತೊಲಗು ಇಲ್ಲಿಂದ." ಈಶ್ವರ: ನಿನ್ನ ತಪಸ್ಸಿನ ನೀತಿ ಹಾಗಿರಲಿ, ನಿನ್ನ ಧನುರ್ವಿದ್ಯೆಯನ್ನು ನನ್ನೊಡನೆ ತೋರಿಸು!" ಈ ಮಾತನ್ನು ಕೇಳಿ ಅರ್ಜುನನ ಕೋಪ ಕೆರಳಿತು. ಶಬರನ ಮೇಲೆ ಬಾಣದ ಮಳೆಯನ್ನೇ ಸುರಿಸಿದನು. ಪತಂಗಗಳು ಮುತ್ತಿದರೆ ದವಾಗ್ನಿಗೆ ಅಂಜಿಕೆಯೆ? ಅರ್ಜುನನ ರೋಷವನ್ನು ಕಂಡ ಶಿವನ ಗಣಗಳು ರೇಗಿದರು. ಶಿವ ಅವರನ್ನು ಸುಮ್ಮನಾಗಿಸಿದನು. ಅರ್ಜುನನೊಡನೆ ವಿನೋದವಾಡಬೇಕೆಂದು ಅವನಿಗೆ ಮನಸ್ಸಾಯಿತು. ತಾನೇ ಬಿಲ್ಲನ್ನು ಹೂಡಿ ಬಾಣಗಳನ್ನು ಬಿಟ್ಟು ಅರ್ಜುನನ ಬಾಣಗಳನ್ನು ಕತ್ತರಿಸಿದನು. ಮತ್ತೆರಡು ಸಲ ಹೀಗೇಯೇ ಆಯಿತು. ಶಬರನ ಶೌರ್ಯವನ್ನು ಅರ್ಜುನ ಮೆಚ್ಚಿಕೊಂಡನು. ಆದರೂ ಉರಿ ಉಗಿವ ಬಾಣವನ್ನು ಅವನ ಮೇಲೆ ಬಿಟ್ಟನು. ಅದನ್ನೂ ಶಿವ ಕತ್ತರಿಸಿದನು. ಅರ್ಜುನ ಬಿಟ್ಟ ಬಾಣಗಳನ್ನೆಲ್ಲ ಈಶ್ವರ ನುಂಗುತ್ತಿದ್ದನು. ಅರ್ಜುನನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ! ಕೋಪದ ಮೇಲೆ ಕೋಪ! ಈಶ್ವರನ ಪಾದಸೇವೆಗೆ ಈ ಬೇಡ ಅಡ್ಡ ಬರುತ್ತಿದ್ದಾನೆ, ಇವನ ದರ್ಪವನ್ನು ಮುರಿಯಬೇಕು ಎಂದು ಬಿಲ್ಲಿನಿಂದಲೇ ಅವನನ್ನು ಹೊಡೆದನು. ಆ ಏಟನ್ನು ತಪ್ಪಿಸಿಕೊಂಡು ತನ್ನ ಕೈಯಲ್ಲಿದ್ದ ಕೋದಂಡ ದಿಂದ ಅರ್ಜುನನ ಎದೆಗೆ ಹೊಡೆದು ಅವನ ಕೈಯಲ್ಲಿದ್ದ ಧನುಸ್ಸನ್ನು ಸೆಳೆದು ಕೊಂಡುಬಿಟ್ಟನು. ಆಗ ಅರ್ಜುನ ಒರೆಯಿಂದ ಖಡ್ಗಾಯುಧವನ್ನು ಕಿತ್ತು ಅಭವನನ್ನು ಹೊಡೆದನು. ಅದನ್ನೂ ಪುರಾರಿ ಕಿತ್ತುಕೊಂಡನು. ಅರ್ಜುನನ ಕೈ

ಬರಿದಾಯಿತು. ಇಷ್ಟಾದರೂ ಆ ಶೂರ ಹಿಂಜರಿಯಲಿಲ್ಲ. ಮರದ ಕೊಂಬೆಯನ್ನು ಕಿತ್ತು ಬಡಿದನು. ಕಲ್ಲುಗಳನ್ನು ತೂರಿದನು. ಅವೆಲ್ಲವನ್ನೂ ಮೃತ್ಯುಂಜಯ ಒಂದೇ ಬಾಣದಿಂದ ತುಂಡು ತುಂಡಾಗಿ ಕತ್ತರಿಸಿದನು. ಆಗ ಶಂಕರ ಹೇಳಿದ 'ನಿನ್ನ ಶಸ್ತ್ರಗಳೆಲ್ಲ ಹೋದುವು. ಇನ್ನೂ ನಿನ್ನಲ್ಲಿ ಆಯುಧವಿದ್ದರೆ, ಬಲವನ್ನೂ ಚಲವನ್ನೂ ಮೆರೆ, ಇಲ್ಲದಿದ್ದರೆ ಕೇಳು ಆಯುಧಗಳನ್ನು ಕೊಡುತ್ತೇನೆ. ನೀನು ಗೆಲ್ಲಬೇಕಾದದ್ದು ಸಹಜ' ಎಂದನು. ಅರ್ಜುನನಿಗೆ ಅವನ ಮಾತು ಕೇಳಿ ನಗು ಬಂದಿತು. 'ಶಸ್ತ್ರವಿಲ್ಲದಿದ್ದರೇನಾಯಿತು, ಮುಷ್ಟಿಯಿಂದ ಯುದ್ಧ ಮಾಡು ತ್ತೇನೆ' ಎಂದನು. ಅವನ ಮಾತನ್ನು ಕೇಳಿ ಶಂಕರನಿಗೂ ಅವನ ಗಣಕ್ಕೂ ಆಶ್ಚರ್ಯವಾಯಿತು! ಗಿರಿಜಾರಮಣ ಗಿರಿಜಾತೆಗೆ ಹೇಳಿದ 'ಇವನ ಸಾಹಸವನ್ನು ನೋಡು, ನಾಲ್ಕು ತಿಂಗಳು ಜೀರ್ಣವಾದ ಎಲೆಗಳನ್ನು ತಿಂದುಕೊಂಡಿದ್ದಾನೆ. ನಾಲ್ಕು ತಿಂಗಳು ವಾಯುಸೇವನೆ ಮಾತ್ರ ಮಾಡಿಕೊಂಡಿದ್ದಾನೆ. ಆದರೂ ಅವನು ನನ್ನೊಡನೆ ಮಲ್ಲಯುದ್ಧ ಮಾಡುತ್ತಾನಂತೆ. ನಾವು ಇವನ ಪರಾಕ್ರಮವನ್ನು ಭೂಮಿ ಮೆಚ್ಚುವಂತೆ ಪರೀಕ್ಷಿಸಲೇ ಬೇಕು. ಪರ್ವತ ಅಳ್ಳಾಡಿದರೂ ಬಡಬಾಗ್ನಿ ತಂಪಾದರೂ ಪಾರ್ಥ ಬೆನ್ನು ತೋರಿಸುವವನಲ್ಲ. ದಾಯಾದಿಗಳ ಸಂಹಾರಕ್ಕಾಗಿ ಅಸ್ತ್ರವನ್ನು ಪಡೆಯಲು ತಪಸ್ಸು ಮಾಡುತ್ತಿದ್ದಾನೆ. ಹಂದಿಯ ನೆಪದಿಂದ ನನ್ನ ಮೇಲೆ ದ್ವೇಷ ತಾಳಿದ್ದಾನೆ. ಇವನೊಡನೆ ಯುದ್ಧ ಮಾಡಿ ಇವನು ಕೇಳಿದ ಅಸ್ತ್ರ ವನ್ನು ಕೊಡುತ್ತೇನೆ' ಎಂದು ತನ್ನೊಡನೆ ಕಾಳಗ ಮಾಡುತ್ತಿದ್ದ ಅರ್ಜುನನಲ್ಲಿ ಭಕ್ತವಾತ್ಸಲವನ್ನೇ ಕಾಣುತ್ತಾ ಇದ್ದನು ಆ ಶಬರ. ಅನಂತರ ಇಬ್ಬರೂ ಮಲ್ಲ ಯುದ್ಧಕ್ಕೆ ತೊಡಗಿದರು. ಅವರ ಪಟ್ಟುಗಳೂ ಹೊಡೆತಗಳೂ ತುಳಿತಗಳೂ ಅಪೂರ್ವವಾಗಿ ಅವರ್ಣನೀಯವಾಗಿದ್ದುವು. ಅವರ ಪದಾಘಾತಕ್ಕೆ ಭೂಮಿ ಕುಸಿಯಿತು. ಕೂರ್ಮ ಕುಗ್ಗಿ ಹೋದ. ಆದಿಶೇಷನ ಹೆಡೆ ಕುತ್ತಿಗೆಯಲ್ಲಿ ಸೇರಿ ಹೋಯಿತು, ಗಾಂಡೀವಿಯ ಬಾಯಿಯಿಂದ ಮೂಗಿನ ಹೊಳ್ಳೆಗಳಿಂದ ರಕ್ತ ಹೊರ ಹೊಮ್ಮಿತು. ಶಂಕರನಿಗೆ ಮರುಕವುಂಟಾಯಿತು. ಅರ್ಜುನನ ಶಕ್ತಿ ಕುಂದುತ್ತಾ ಹೋಯಿತು. ತನಗೆ ಸೋಲುಂಟಾಗುವುದೇ ಎಂಬ ವ್ಯಥೆಯೂ ಉಂಟಾಯಿತು. ತನ್ನಲ್ಲಿ ಶಿವಪದಭಕ್ತಿ ಕಡಮೆಯಾಯಿತೋ ಎಂದು ಚಿಂತಿಸಿದನು. 'ಶಬರನಿಗೆ ಗೆಲುವು, ತನಗೆ ಸೋಲು. ಅವನೇ ನರ, ತಾನು ಬೇಡ ಎಂಬಂತಾಯಿತು. ಇದಕ್ಕೆ ವಿರೂಪಾಕ್ಷನ ಉಪೇಕ್ಷೆಯೇ ಕಾರಣ' ಎಂದು ಬಗೆದು ಒಂದು ಮರಳ ಲಿಂಗವನ್ನು ಮಾಡಿ ಪಾದರಿ ಹೂಗಳಿಂದ, ಬಿಲ್ವಪತ್ರೆಗಳಿಂದ ಪೂಜೆ ಮಾಡಿ ಕಿರಾತರನನ್ನು ಗೆಲ್ಲುವ ವರವನ್ನು ಶಂಕರನಲ್ಲಿ ಕೇಳಿಕೊಂಡು ಮತ್ತೆ ಯುದ್ಧಕ್ಕೆ ತೊಡಗಿದನು. 'ಈಗ ನೋಡು ನನ್ನ ಪರಾಕ್ರಮವನ್ನು' ಎಂದು ಅವನ ಮೇಲೆ ಏರಿ ಹೋದನು. ಆಗ ಅವನಿಗೆ ಒಂದು ಆಶ್ಚರ್ಯ ಕಂಡಿತು: ಮರಳ ಲಿಂಗದ ಮೇಲಿದ್ದ ಹೂವು ಬೇಡನ ತಲೆಯ ಮೇಲಿದ್ದುವು. ಅದನ್ನು ಪರೀಕ್ಷಿಸಲು ಮರಳ ಲಿಂಗಕ್ಕೆ ಮತ್ತೆ

ಪೂಜೆ ಮಾಡಿದನು. ಆ ಹೂವುಗಳೆಲ್ಲ ಮತ್ತೆ ಬೇಡನ ಶಿರಸ್ಸಿನ ಮೇಲೆಯೇ ಕಾಣಿಸಿದುವು. ತಿರುಗಿ ನೋಡಿದರೆ ಪೂಜೆ ಮಾಡಿದಪುಷ್ಪಗಳು ಲಿಂಗದ ಮೇಲೆ ಇಲ್ಲ! ಆಗ ಅವನಿಗೆ ತಿಳಿಯಿತು: 'ಇವನೇ ಶಂಕರ,ಇವನನ್ನು ಕುರಿತು ತಪಸ್ಸು ಮಾಡಲೆಂದೇ ನಾನು ಬಂದದ್ದು. ಇವನೊಡನೇ ಕಾಳಗವಾಡಿದೆ' ಎಂದು ತನ್ನ ಅವಿವೇಕಕ್ಕೆ ಪಶ್ಚಾತ್ತಾಪಪಟ್ಟು ತನ್ನನ್ನು ತಾನು ನಿಂದಿಸಿಕೊಂಡು ವಿರೂಪಾಕ್ಷನ ಮಹಿಮೆಯನ್ನು ಕೊಂಡಾಡಿನು. ಆಗ ಶಬರ ತನ್ನ ನಿಜಾಕೃತಿಯನ್ನು ತೋರಿಸಿದನು. ದೇವತೆಗಳು ಪುಷ್ಪವೃಷ್ಟಿ ಸೂಸಿದರು. ಪಾರ್ವತಿಯೂ ಬೇಡತಿಯ ವೇಷವನ್ನು ಕಳಚಿ ಶಿವನ ಪಕ್ಕದಲ್ಲಿ ತನ್ನ ಮೂಲ ರೂಪದಿಂದ ಕಾಣಿಸಿಕೊಂಡಳು. ಅರ್ಜುನ ಅವರಿಬ್ಬರಿಗೂ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ತನ್ನ ಅಪರಾಧವನ್ನು ಕ್ಷಮಿಸು ವಂತೆ ಕೇಳಿಕೊಂಡನು. ಶಂಕರನಿಗೂ ಸಂತೋಷವಾಯಿತು. ಅರ್ಜುನನನ್ನು ಎತ್ತಿ ಆಲಿಂಗಿಸಿಕೊಂಡನು. ಅವನು ಮಾಡಿದ ಎಲ್ಲ ಕಾರ್ಯಗಳೂ ತನಗೆ ಪೂಜೆ ಎಂದು ಭಾವಿಸಿರುವುದಾಗಿ ಅರ್ಜುನನಿಗೆ ಭರವಸೆ ಕೊಟ್ಟನು. ಅವನಿಂದ ಕಿತ್ತುಕೊಂಡಿದ್ದ ಶಸ್ತ್ರಾಸ್ತ್ರಗಳನ್ನೆಲ್ಲ ಹಿಂದಿರುಗಿಸಿದನು. ಅವನಿಗೆ ಬ್ರಹ್ಮಾಸ್ತ್ರವನ್ನೂ ಪಾಶುಪತಾಸ್ತ್ರ ವನ್ನೂ ಕೊಟ್ಟು ಆಶೀರ್ವದಿಸಿದನು. ಅರ್ಜುನ ಪಾರ್ವತಿಗೂ ನಮಸ್ಕಾರ ಮಾಡಿ ಅವಳ ಕರುಣೆಯನ್ನೂ ಬೇಡಿಕೊಂಡನು. ಅವಳು ಅಂಜನಾಸ್ತ್ರವನ್ನು ಧನಂಜಯ ನಿಗೆ ನೀಡಿದಳು, ಮತ್ತು ಹರಸಿದಳು. 'ನೀನು ದೇವಲೋಕಕ್ಕೆ ಹೋಗಿ, ದೇವತೆ ಗಳಿಗೆ ಆನಂದವನ್ನುಂಟುಮಾಡಿ ಅನಂತರ ನಿನ್ನ ಅಣ್ಣತಮ್ಮಂದಿರ ಬಳಿಗೆ ಹೋಗು, ವೈರಿಗಳನ್ನು ಕೊಲ್ಲು, ರಾಜ್ಯವನ್ನು ಆಳು' ಎಂದು ಹರಸಿ ಅರ್ಜುನನನ್ನು ಬೀಳ್ಕೊಟ್ಟನು ವಿರೂಪಾಕ್ಷ.

ಹಸ್ತಿನಾಪುರದ ವರ್ಣನೆ

ಪಂಪಭಾರತದಲ್ಲಿ ಬರುವ ವರ್ಣನೆ. ಹಸ್ತಿನಾಪುರದ ಉದ್ಯಾನವನಗಳನ್ನೂ ಅಲ್ಲಿನ ವಿವಿಧ ಪುಷ್ಪಗಳ ಸೌಂದರ್ಯವನ್ನೂ ಮೃಗಪಕ್ಷಿಗಳನ್ನೂ ಊರಿನ ಸೌಧಗಳು ವೀಧಿಗಳು ಜನಸಮೂಹವನ್ನೂ ಅರಮನೆಯನ್ನೂ ಕವಿ ಇಲ್ಲಿ ವರ್ಣಿಸಿದ್ದಾನೆ.

ಪಾಂಡವರು ಏಕಚಕ್ರ ನಗರಕ್ಕೆ ಬಂದುದು

ಇದೂ ಪಂಪಭಾರತದಲ್ಲಿ ಬರುವ ರಗಳೆಯ ಒಂದು ಮಾದರಿ. ಹಿಡಿಂಬೆ ಯನ್ನು ಬಿಟ್ಟು ಬಂದ ಪಾಂಡವರು ಪ್ರವೇಶಿಸಿದ ಏಕಚಕ್ರಪುರದ ವರ್ಣನೆ ಇಲ್ಲಿದೆ.

ಧರ್ಮರಾಜನ ರಾಜ್ಯಭಾರ ಕ್ರಮ

ಪಂಪನ ಮತ್ತೊಂದು ರಗಳೆಯ ಉದಾಹರಣೆಯನ್ನು ಕೊಡಲಾಗಿದೆ. ಇದನ್ನು ಹಸ್ತಿನಾಪುರದ ವರ್ಣನೆಗಳ ಜೊತೆಗೆ ಹೋಲಿಸಿ ನೋಡಬಹುದು.

ಬಸವಣ್ಣನ ಪೂಜಾವಿಧಿ

ಈ ಭಾಗವನ್ನು ಹರಿಹರ ಕವಿಯ ಬಸವರಾಜದೇವರ ರಗಳೆಯಿಂದ ಆಯ್ದು ಕೊಟ್ಟಿದೆ. ಹರಿಹರ ಕನ್ನಡ ಸಾಹಿತ್ಯದಲ್ಲಿ ಹೊಸ ಮಾರ್ಗವನ್ನು ತೋರಿಸಿಕೊಟ್ಟವನು. ಅವನು ನೂರಾರು ಶಿವಭಕ್ತರ ಕಥೆಗಳನ್ನು ರಗಳೆಯ ಛಂದಸ್ಸಿನಲ್ಲಿ ಬರೆದಿರುವುದಲ್ಲದೆ 'ಗಿರಿಜಾ ಕಲ್ಯಾಣ'ವನ್ನು ಹಳೆಯ ಸಂಪ್ರದಾಯದ ಚಂಪೂ ಶೈಲಿಯಲ್ಲಿ ರಚಿಸಿದ್ದಾನೆ. ಅವನು ವೀರಶೈವ ಕವಿ. ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ, ಮಹಾದೇವಿಯಕ್ಕನ ರಗಳೆ ಮುಂತಾದ ಶಿವಭಕ್ತರ, ಪುರಾತನರ, ನೂತನರ ಕತೆಗಳನ್ನು ಭಕ್ತಿಯಿಂದ ಮೈಮರೆತು ವರ್ಣಿಸಿದ್ದಾನೆ. ಅವನ ಕಾಲ ಕ್ರಿ. ಶ. ಸು. ೧೧೮೦ ರಿಂದ ೧೨೫೦ರ ವರೆಗಿನ ಅವಧಿಯಲ್ಲಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಈತನು ಪಂಪಾಶತಕ ಮತ್ತು ರಕ್ಷಾಶತಕ ಎಂಬ ಎರಡು ಶತಕಗಳನ್ನು ರಚಿಸಿದ್ದಾನೆ. ಇವನು ದ್ವಾರಸಮುದ್ರದ ಹೊಯ್ಸಳ ದೊರೆಗಳ ಆಸ್ಥಾನದಲ್ಲಿ ಕರಣಿಕನಾಗಿದ್ದು ಹಂಪೆಗೆ ಬಂದು ನೆಲೆಸಿ ವಿರೂಪಾಕ್ಷನ ಸೇವೆಯಲ್ಲಿ ಕಾಲ ಕಳೆದನು.

ಬಸವಣ್ಣನ ಪೂಜಾವಿಧಿ

ಬಸವಣ್ಣನು ಆಶೆಯಿಂದ ನಿವೃತ್ತನಾಗಿ ಕರ್ಮತ್ಯಾಗ ಮಾಡಿ ಶ್ರೀ ಸಂಗನ ಪಾದಸೇವೆಯಲ್ಲಿ ಮಗ್ನನಾಗಿದ್ದನು.

ಶಿವನಿಲಯವನ್ನು ಪ್ರವೇಶಿಸಿ ಲಿಂಗಕ್ಕೆ ನಮಸ್ಕರಿಸಿ, 'ನಾನು ಪೂಜೆಗೆ ತಡ ಮಾಡಿದೆ ಕ್ಷಮಿಸು' ಎಂದು ಬೇಡಿಕೊಂಡು, ಸ್ತೋತ್ರ ಮಾಡುತ್ತಾ ವಿವಿಧ ರೀತಿಯಲ್ಲಿ ಪೂಜೆ ಮಾಡತೊಡಗಿದನು. ಅಭಿಷೇಕ ಮಾಡಿ, ಗಂಧವನ್ನು ಸಮರ್ಪಿಸಿ, ಹೂವುಗಳಿಂದ ಅರ್ಚನೆ ಮಾಡಿದನು. ಮನಸ್ಸಿನಲ್ಲಿ ಧ್ಯಾನ ಮಾಡುತ್ತಾ ಧೂಪ ದೀಪಗಳನ್ನು ಅರ್ಪಿಸಿದನು. ಅನಂತರ ನೈವೇದ್ಯವನ್ನು ಮಾಡಿದನು. ಮಂಗಳಾರತಿ ಎತ್ತಿ ಸ್ತೋತ್ರಗಳನ್ನು ಹೇಳುತ್ತಾ ಪ್ರಾರ್ಥಿಸಿದನು. ಇದು ಇವನ ದಿನಚರಿಯಾಯಿತು. ಒಂದು ದಿನ ಸಂಧ್ಯಾಕಾಲದ ಪೂಜೆಯನ್ನು ಪೂರೈಸಿ ಪ್ರಸಾದವನ್ನು ಕೈಕೊಂಡು ಸಂಗಮ ಧ್ಯಾನದಲ್ಲಿದ್ದನು. ಅಲ್ಲಿ, ಎಂದರೆ ಧ್ಯಾನದಲ್ಲಿ, ಅವನಿಗೆ ಶಿವನು ಪ್ರತ್ಯಕ್ಷನಾದನು. ಅವನಿಗೆ 'ಬಿಜ್ಜಳನಲ್ಲಿಗೆ ಹೋಗು' ಎಂದು ಸಂದೇಶವನ್ನು ಕೊಟ್ಟನು. ಶಿವನು ಕಣ್ಮರೆಯಾದ ತಕ್ಷಣ ಬಸವನಿಗೆ ವಿರಹವೇದನೆ ಉಂಟಾಯಿತು. ಮೂರ್ಛೆ ಹೋದನು, ಎಚ್ಚೆತ್ತನು, ಮತ್ತೆ ಶಿವನ ಪಾದದ ಮೇಲೆ ಬಿದ್ದು ಜ್ಞಾನ ತಪ್ಪಿದನು. ಹಾಗೆಯೇ ಸಂಜೆಯವರೆಗೆ ಬಿದ್ದಿದ್ದುದನ್ನು ಕಂಡು ಶಿವ ಅವನ ಮೇಲೆ ಕರುಣೆದೋರಿ ಮತ್ತೆ ಪ್ರತ್ಯಕ್ಷನಾಗಿ 'ನಿನ್ನ ಜೊತೆಯಲ್ಲಿ ನಾನೂ ಇರುತ್ತೇನೆ, ವೃಷಭನ ಮುಖಾಂತರ ಬರುತ್ತೇನೆ, ಅವನೇ ನಿನಗೆ ಸದ್ಗುರು, ನೀನು ಅಲ್ಲಿಂದ,

ಆಚೆ ನಮ್ಮನ್ನು ಪೂಜಿಸುತ್ತ ಭಕ್ತರ ಬಂಧುವಾಗಿ, ಶರಣರ ಪರುಷಕಣಿಯಾಗಿ ಲೌಕಿಕ ಧರ್ಮವನ್ನು ಮೀರಿ ನಿಷ್ಠೆಯಿಂದ ಬದುಕಿ ಸುಖದಿಂದ ಇರುವುದು" ಎಂದು ಹೇಳಿ ಅಂತರ್ಧಾನನಾದನು.

ಪುಷ್ಪ ರಗಳೆ

ಹರಿಹರ ಈ ರಗಳೆಯಲ್ಲಿ ಈಶ್ವರನ ಪೂಜಾ ರೀತಿಯನ್ನೂ ಮತ್ತು ಪೂಜೆಗೆ ಹೂವುಗಳನ್ನು ಆಯುವಾಗ ಯಾವ ಶುದ್ಧ ಮನಸ್ಸಿನಿಂದ ಆರಿಸಬೇಕು ಎಂಬುದನ್ನೂ ವಿವರಿಸುವುದರ ಜೊತೆಗೆ ಹೂವಿನ ಶುಭ್ರತೆಯನ್ನೂ ಪವಿತ್ರತೆಯನ್ನೂ ಮಾಧುರ್ಯವನ್ನೂ ಕೋಮಲತೆಯನ್ನೂ ಅದರ ವೈಶಿಷ್ಟ್ಯವನ್ನೂ ಹೃದಯಂಗಮವಾಗಿ ವರ್ಣಿಸಿದ್ದಾನೆ. ಪೂಜೆಗೆ ಬೇಕಾದ ನಿಷ್ಠೆ, ನಿರ್ಮಲ ಮನಸ್ಸು ಶಿವನ ಅಂತರಂಗವನ್ನರಿವ ಶಕ್ತಿ ಈ ರಗಳೆಯಲ್ಲಿ ವ್ಯಕ್ತವಾಗಿದೆ.

ಕುಂಬಾರ ಗುಂಡಯ್ಯನ ರಗಳೆ

ಇದು ಹರಿಹರನ ಇನ್ನೊಂದು ರಗಳೆ. ಗುಂಡಯ್ಯ ಒಬ್ಬ ಕುಂಬಾರ. ಒಂದು ದಿನ ಅವನು ಮಡಕೆ ಮಾಡುವಾಗ, ಎಂದರೆ ಮಡಕೆಗಾಗಿ ಮಣ್ಣು ತುಳಿಯುವಾಗ ಈಶ್ವರನಿಗೆ ತನ್ನ ನೃತ್ಯ ಸೇವೆಯನ್ನು ಮಾಡುವಂತೆ ನರ್ತಿಸತೊಡಗಿದನು, ಶಿವನನ್ನು ಧ್ಯಾನಿಸುತ್ತ. ಕೈಲಾಸದೊಳಗೆ ಓಲಗದಲ್ಲಿದ್ದ ಪರಮೇಶ್ವರ ಗುಂಡಯ್ಯನ ನರ್ತನದ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತಾ ತಾನೂ ನರ್ತಿಸತೊಡಗಿದನು. ಪಾರ್ವತಿಗೆ ಆಶ್ಚರ್ಯವಾಯಿತು. ಇದೇನೆಂದು ಪತಿಯನ್ನು ಕೇಳಿದಳು. ಈಶ್ವರ ಗುಂಡಯ್ಯನ ಭಾವಭರವನ್ನು ವರ್ಣಿಸಿ ಹೇಳಿದನು. ಆಕೆಗೆ ಗುಂಡಯ್ಯನ ಭಕ್ತಿಯ ಪರಾಕಾಷ್ಠತೆಯನ್ನು ತಿಳಿದುಕೊಳ್ಳುವ ಕುತೂಹಲವುಂಟಾಯಿತು. ಅವರಿಬ್ಬರೂ ಮರ್ತ್ಯಲೋಕಕ್ಕೆ ಬಂದು ಗುಂಡನ ಮನೆಯ ಮುಂದೆ ನಿಂತರು. ಗುಂಡನ ಹೃದಯದಲ್ಲಿದ್ದ ಲಿಂಗ ಮರೆಯಾಗಿ ಎದುರಿಗಿದ್ದ ಶಿವನಲ್ಲಿ ಐಕ್ಯವಾಯಿತು. ಎಚ್ಚೆತ್ತ ಗುಂಡ ಕಣ್ತೆರೆದು ನೋಡಿದರೆ ಶಿವ. ಗುಂಡಯ್ಯನ ಹೃದಯ, ಮನಸ್ಸು ತುಂಬಿ ಬಂದವು. ಗುಂಡಯ್ಯ ಕುಡಿಕೆ ಮಡಿಕೆಗಳನ್ನು ಬಾರಿಸುತ್ತ ಮೈಮರೆತು ನರ್ತಿಸಲಾರಂಭಿಸಿದನು. ಹಾಗೆಯೇ ಪಾರ್ವತೀಪತಿಯೂ ಕುಣಿಯಲು ತೊಡಗಿದನು. ಅವನು ವಿಶ್ವರೂಪಿಯಾಗಿ ಭೂಮಿಯಿಂದ ಆಕಾಶದೆತ್ತರ ಬೆಳೆದು ನೃತ್ಯ ಮಾಡಿದನು. ಅದೇ ಒಂದು ಸೊಗಸು. ಅದನ್ನು ಕವಿವಾಣಿಯಿಂದಲೇ ಕೇಳಬೇಕು. ಪಾರ್ವತಿಯೂ ತನ್ನ ಪತಿಯ ನರ್ತನವನ್ನು ಕಣ್ಣು ತುಂಬ ನೋಡಿದಳು. ಅವನ ಜೊತೆಜೊತೆಗೂ ಕುಣಿಯುತ್ತಿದ್ದ ಗುಂಡಯ್ಯನ ಭಕ್ತಿಗೆ ಮೆಚ್ಚಿ ಈಶ್ವರ ಅವನಿಗೆ ಮುಕ್ತಿಯನ್ನು ಕರುಣಿಸಿದನು.

ಉಡುಕು – ಬಿಸಿ
ಉಣ್ಮಿತಿರ್ಪ – ಹೊರಸೂಸುವ
ಉತ್ಪಲವನ – ಕನ್ನೈದಿಲೆಯ ವನ, ತಾವರೆ ವನ
ಉದೀರ್ಣ – ಹೆಚ್ಚಾದ
ಉದ್ಯಾನಾಲೋಕಸ್ಪೃಹೆ – ಉದ್ಯಾನ ವನವನ್ನು ನೋಡುವ ಆಸಕ್ತಿ
ಉಪನಕ – ಬಗ್ಗಿದವ
ಉಪಶಾಂತಿ – ಸ್ವಲ್ಪ ನೆಮ್ಮದಿ
ಉಪಾದೇಯ – ಗ್ರಾಹ್ಯ, ಸ್ವೀಕಾರ ಯೋಗ್ಯ
ಉಪ್ಪವಡಿಸು – ಎದ್ದೇಳು, ಎಚ್ಚರಗೊಳ್ಳು
ಉಮ್ಮಳಿಸಿ – ದಃಖಿಸಿ
ಉರಗಪತಾಕ – ಸರ್ಪಧ್ವಜ, ಕೌರವ
ಉರ್ವೀರಾಗಂ – ವಿಶೇಷವಾದ, ಹೆಚ್ಚಿನ, ಪ್ರೀತಿ
ಉಳ್ಕಿದವು – ಉದುರಿದವು
ಊಡು – ಭಕ್ಷಿಸು
ಋಚ – ವೇದದ ಋಕ್ಕುಗಳು (ಮಂತ್ರ)
ಎಡೆವಿಡು – ಮಧ್ಯೆ ಬಿಡು
ಎಣ್ಬರು – ಎಂಟು ಮಂದಿ
ಎವೆಯಿಕ್ಕದೆ – ಕಣ್ಣು ಮುಚ್ಚದೆ
ಎಸರನಿಡು – ಅಕ್ಕಿಯನ್ನು ತೊಳೆದಿಡು
ಏರ್ವೆಸಕ – ಉತ್ಸಾಹ, ಧೈರ್ಯ, ಹುರಿದುಂಬಿಸು
ಏರುವೇಳ್ವ – ಯುದ್ಧ ಮಾಡುವ
ಏಳಿದಂಗೈ – ಅಪಹಾಸ್ಯ ಮಾಡು
ಒಚ್ಚತಂ – ಹಿತ
ಒಚ್ಚರು – ವರ್ತಕರು
ಒಟ್ಟಜೆ – ಪರಾಕ್ರಮ, ಆವೇಶ
ಒಟ್ಟೈಸು – ಸೇರು, ಕೂಡಿಕೊಳ್ಳು
ಒನಲ್ – ಕನಲ್ – ಸಿಟ್ಟಿದ್ದು, ಕುದಿದು
ಒರಂಟುತನಂ – ಒರಟುತನ
ಒಳಱ್ – ಅರ್ಭಟಿಸು, ಗರ್ಜಿಸು
ಒಳಸಾರ್ – ಅಡಗಿಹೋಗು
ಓಜೆ – ಕ್ರಮ, ರೀತಿ
ಓರಂತೆ ಪಾಯ್ವ – ಒಂದೇ ಸಮನೆ ಸುರಿವ
ಕಕುಭ – ಮತ್ತಿಯ ಮರ
ಕಕುಭಲುಂಗ – ಮಾದಳದ ಮರ
ಕಂಚುಗರ್ಚು – ಕಂಚು (ಪಾತ್ರೆ) ತೊಳೆ, ಮುಸುರೆ ತಿಕ್ಕುವುದು
ಕಚಪ್ರಾರಂಭ – ತಲೆಗೂದಲನ್ನು ಹಿಡಿ
ಕಜ್ಜದುಜ್ಜುಗಂ – ಕೆಲಸದ ಉದ್ದೇಶ
ಕಟ್ಟುವರ್ಪುದು – ಬಂಧಿಸುವುದು
ಕಡವರ – ಚಿನ್ನ
ಕಡಂಗಿ – ಕೋಪಿಸಿ, ತವಕಿಸಿ
ಕಣ್ಬೊಲ – ಕಣ್ಣೆದುರು, ದೃಷ್ಟಿಸಮೀಪ
ಕತಿಪಯ – ಕೆಲವು
ಕದನ ಮದೋದ್ಧತಂ – ರಣಗರ್ವಿತ
ಕನತ್ಪೀತವಸನ – ಪೀತಾಂಬರಧಾರಿ, ಕೃಷ್ಣ
ಕಂಜಸಖ – ಕಮಲಮಿತ್ರ, ಸೂರ್ಯ
ಕಂತು – ಮನ್ಮಥ
ಕಂತುಸಂತಾಪ – ವಿರಹವ್ಯಥೆ
ಕಮಳಾವಸಥಂ – ಕಮಲಾಸನ, ಬ್ರಹ್ಮ
ಕರಣಂಗಳ – ಇಂದ್ರಿಯ ವಿಷಯಗಳ
ಕರಿಕರ ಪರಿಘ – ಆನೆಯ ಸೊಂಡಿಲಂತೆ ಇರುವ ಕೈಗಳ ಹೊಡೆತ
ಕರಿಮುರಿಕ – ಸುಟ್ಟು ಕರುಕಾಗು
ಕಱುತ್ತು – ಕೋಪಿಸಿ
ಕಲ್ಪಾಬ್ಧ – ಪ್ರಳಯಕಾಲ
ಕವಲ್ – ಬನ್ನ – ಎರಡು ಬಗೆದು ಮಾಡಿದ ಮೋಸ ಕೃತ್ಯ
ಕಳ – ಯುದ್ಧರಂಗ
ಕಳರುತಿ – ಯುದ್ಧಧ್ವನಿ
ಕಳಾನಿಕೇತನ – ಕಲಾನಿಲಯ
ಕಳ್ಕನೆ – ಸಡಿಲಗೊಂಡು ?
ಕಳಂಬ – ಬಾಣ
ಕಾಂಡ – ಬಾಣ
ಕಾತುದು – ಚಿಗುರಿತು
ಕಾವಣ – ಚಪ್ಪರ
ಕಾವರೆ ಕಣೆಗೊಂಡರ್ – ರಕ್ಷಿಸುವವರೇ ಬಾಣ ಹಿಡಿದವರು
ಕಾಱ್‌ಬಿಯದ – ಕಾಡಿನ ಬೇಡ
ಕಾಳಿಂದೀ – ಯಮುನೆ
ಕಿನಿಸಿ – ಕೋಪಿಸಿ
ಕಿಟಿ – ಹಂದಿ
ಕಿಱಕ್ಸೊಕ್ಕು – ತಿರಸ್ಕಾರಭಾವ ?
ಕಿಸುಗಲ್ಲಳ್ – ಕೆಂಪು ಹರಳು, ಪದ್ಮರಾಗ, ಮಾಣಿಕ್ಯ

ಅರ್ಥಕೋಶ

ಅಕ್ಕಿಗರ್ಚು — ಅಕ್ಕಿ ತೊಳೆಯುವುದು
ಅಕ್ಕೆಮ — (ನಡೆಯಲಿ) ಆಗಲಿ
ಅಕ್ಷುಣ್ಣ — ವಿಸ್ತಾರವಾದ, ಹರಡಿದ
ಅಖಲ್ಯಂ — ಹೇಡಿ
ಅಖರ್ವ — ಮಹತ್ತಾದ
ಅಗಜೋತ್ಸಂಗ — ಪಾರ್ವತೀ ಸಮೇತ
ಅಗುರ್ವಿಸೆ — ಭಯಗೊಳಿಸಲು
ಅಚ್ಚಗ — ಆಶ್ಚರ್ಯ
ಅಚಿರರುಚಿ ಸಂಚಳಂ — ಕ್ಷಣಿಕವಾದ ಆಶೆಯ ಚಾಂಚಲ್ಯ
ಅಚ್ಚಿಗಂ — ಅಪಾಯ
ಅಡಗಿನಿಸರಿವೆಂ — ಅವಿತುಕೊಳ್ಳುವುದನ್ನು ಸ್ವಲ್ಪವಾದರೂ ತಿಳಿಯುತ್ತೇನೆ
ಅಡಗು — ಮಾಂಸ
ಅಣಿಯರಂ — ಹೆಚ್ಚಾಗಿ
ಅಣ್ಮದೆ — ಸಾಧ್ಯವಾಗದೆ
ಅಣ್ಮ — ವೀರ
ಅಂಡುಗೊಂಡು — ಹತ್ತಿರಕ್ಕೆ ಹೋಗಿ
ಅರ್ಣವ — ಸಮುದ್ರ
ಅಂಘ್ರಿವನೇಜಾತ — ಪಾದಕಮಲ
ಅಧಿಜ್ಯಧನು — ಉತ್ತಮ ಧನುವನ್ನು ಹೊಂದಿದ
ಅನಂಗಜಂಗಮಲತೆ — ಮನ್ಮಥನೆಂಬ ಸುಳಿದಾಡುವ ಬಳ್ಳಿ
ಅನಿಲಜವಂ — ವಾಯುವೇಗ
ಅಪತ್ಯರ್ — ಮಕ್ಕಳು
ಅಪವರ್ಗ — ಮೋಕ್ಷ
ಅಳಕ — ಲೇಖನಿ
ಅಭಿಜ್ಞಾನ — ದಿವ್ಯಜ್ಞಾನ
ಅಭಿಷಂಗ — ಸೋಲು
ಅಮಂದರವ — ಚಂಡಘೋಷ
ಅಮರಗತಿ — ಸದ್ಗತಿ, ಉತ್ತಮ ಲೋಕ
ಅಮರಸಮಿತಿ — ದೇವ ಸಮೂಹ
ಅಮರೀನೃತ್ಯ — ಅಪ್ಸರೆಯ ನಾಟ್ಯ
ಅರಾತಿ — ಶತ್ರು
ಅರುಣಜಲ — ಕೆಂಪುನೀರು, ರಕ್ತ
ಅೞ್ತಿ — ಪ್ರೀತಿ
ಅಲಪು — ಆಯಾಸ
ಅಲರಂ — ಹೂವನ್ನು
ಅವಾಪ್ತಿ — ಪಡೆಯುವಿಕೆ
ಅವನೀತ — ಧೂರ್ತ, ವಿನಯಪರ ನಲ್ಲದವ
ಅವನೀಧರೆಂದ್ರ — ಪರ್ವತರಾಜ
ಅವಲೋಕಿನಿ — ಒಬ್ಬ ದೇವತೆ
ಅಸವಸ — ತ್ವರಿತ
ಅಳವೞಿ — ದುಃಖಿಸು
ಅಳಿಕ, ಅಲಿಕ — ಹಣೆ
ಅಳಿಪಂ — ಅತಿಯಾಶೆ, ದುರಾಶಾಭಾವನೆ
ಅಳುಂಬಂ — ಹೆಚ್ಚಾದ
ಅಳುರ್ಕೆಗೆಟ್ಟು — ಸುಡುವುದನ್ನು ಬಿಟ್ಟು
ಆಕುಲ — ಚಿಂತೆ
ಆಕೃಷ್ಟಿ — ಎಳೆಯುವುದು
ಆಟಿಸು — ಆಶೆಪಡು
ಆತಪತ್ರ — ಕೊಡೆ, ಛತ್ರಿ
ಆತೋದ್ಯ — ವಾದ್ಯ
ಆನೀಕ — ಗುಂಪು, ಸಮೂಹ
ಆನೋಕಹ — ಒಂದು ಬಗೆಯ ವೃಕ್ಷಜಾತಿ ?
ಆಪಣ — ಅಂಗಡಿ
ಆಯುರಂತಂ — ಆಯುಸ್ಸಿನ ಕೊನೆಗಾಲ
ಆರಾತ್ರೀಯ — ಹಿಂದಿನ
ಆಶಂಕೆ — ಸಂಶಯ
ಆಸ್ಯಾಂಬುಜ — ಮುಖಕಮಲ
ಇಟ್ಟಿ — ಈಟಿ, ಭರ್ಜಿ
ಇಡುಕು — ಬಿಸಾಡು
ಇನಿಯವು — ಮಧುರವು
ಇರ್ಕುಳಿಗೊಳೆ — ಸೇರಿಕೊಳ್ಳಲು
ಇೞಿಕೆ — ಕಡಿಮೆ
ಇಂಬುಕೆಯ್ — ಪ್ರೀತಿಯಿಂದ ಮಾಡು
ಉಡಿ(ವ) — ಸೋಲಿಸುವ, ಗೆಲ್ಲುವ

ತವಿಪುದು — ಕೊಲ್ಲುವುದು
ತಳುವು — ತಡಮಾಡು
ತಳ್ಪಂಕ — ಭಯ, ಆತಂಕ
ತಾಮರಸ — ಕಮಲ
ತಿಣ್ಣಮ್ — ಹೆಚ್ಚಾಗಿ, ದಟ್ಟವಾಗಿ
ತಿಣ್ಪು — ಹೆಚ್ಚಳ
ತಿಸರ — ಮೂರೆಳೆಯಸರ
ತುಂಡ — ಕೊಕ್ಕು, ಮುಸುಡು
ತುಱುಬಿ — ಮುಡಿಸಿ
ತುಳ್ಕು — ತುಳುಕಾಡು
ತೂಪಿಱಿದು — ದೃಷ್ಟಿತೆಗೆದು
ತೂಳ್ದು — ಅಟ್ಟಿಸಿಕೊಂಡು ಹೋಗು, ಮೇಲೆ ಬೀಳು
ತೆಮರ್ವ — ನಾಶಮಾಡುವ
ತೆಱಂಬೊಳೆ — ಚೆನ್ನಾಗಿ ಪ್ರಕಾಶಿಸು
ತೆಳ್ಪುಗೆಟ್ಟು — ಕಾಂತಿಹೀನವಾಗಿ, ಮಲಿನಗೊಂಡು
ತೊಟ್ಟನೆ ಕೊಳೆ — ಕೂಡಲೇ ತೆಗೆದು ಕೊಂಡು
ತೊತ್ತುಱದುಱು — ನಜ್ಜುಗುಜ್ಜಾಗುವಂತೆ ತುಳಿ
ತೋಡಿಲ್ಲದ — ಸಮಾನವಿಲ್ಲದ
ತೋದು — ನೆನೆದು, ಒದ್ದೆಯಾಗು
ದಂಟಿಂಗೆ — ಕಾಂಡಕ್ಕೆ
ದಂದಶೂಕ ಪತಾಕ — ಸರ್ಪಧ್ವಜ, ಕೌರವ
ದಂದುಗಂ — ಕಷ್ಟ
ದಶನ — ಹಲ್ಲು
ದಶಾನನ — ರಾವಣ, ಹತ್ತುಮುಖ ಗಳುಳ್ಳವ
ದಾರುಕ — ಸಾರಥಿ
ದಾವಾನಲ — ಕಾಳ್ಗಿಚ್ಚು
ದಾಂಗುಡಿ — ಹಬ್ಬುವ ಕುಡಿ-ಬಳ್ಳಿ
ದಿಗ್ದಾಹ — ರಾಜ್ಯದಾಹ
ದಿಗ್ಧೂಮ — ದಿಕ್ಕಿನ ಹೊಗೆ
ದಿಟ್ಪುರ — ವೈರಿಪುರ, ತ್ರಿಪುರ
ದುರ್ವಾರ — ಎದುರಿಸಲಾಗದ
ದುರ್ವಿಳಸನ - ಅವಿನಯ
ದೇವಜ್ಯೇಷ್ಠ - ದೇವತೆಗಳಲ್ಲಿ ಹಿರಿಯ, ಇಂದ್ರ

ದೈತ್ಯಧ್ವಾಂತ - ರಾಕ್ಷಸಕತ್ತಲೆ
ದೋಹಳ - ಬಯಕೆ
ದ್ಯೋತಿ - ಕಾಂತಿ
ಧವಳಾಕ್ಷತೆ — ಮಂತ್ರಾಕ್ಷತೆ, ಬಿಳಿಅಕ್ಷತೆ
ಧಾರ್ತರಾಷ್ಟ್ರಂ — ಕೌರವ
ಧ್ಯಾನಾನಲ — ನಿರ್ಧೂಮ ವೇಣಿಕಾ
ನಿಕರ — ತಪೋಗ್ನಿಯ ಹೊಗೆಯಿಲ್ಲದ ತಲೆಗೂದಲಿನ ಸಮೂಹ
ಧ್ವಜಿನೀ — ಸೈನ್ಯ, ಬಾವುಟ
ನಗನಂದನೆ — ಪಾರ್ವತಿ, ಪರ್ವತರಾಜ ಪುತ್ರಿ
ನನ್ನಿ — ಸತ್ಯ
ನಾಗಕುಂಡಲ — ಹಾವಿನಾಕಾರದ ಕಿವಿಯಾಭರಣ
ನಿಕಾಯ — ಸಮೂಹ
ನಿಗಳ — ಸಂಕೋಲೆ
ನಿಕುರುಂಬ — ಸಮೂಹ
ನಿರ್ಭರ — ಹೆಚ್ಚಿದ, ತುಂಬಿದ
ನಿರ್ಜರವರ — ದೇವಶ್ರೇಷ್ಠ ಇಂದ್ರ
ನಿರಂಗ — ನಿರಾಕಾರ
ನಿರೋಧ — ಅಡ್ಡಿ
ನಿಯಿಸಿ — ನಿಲ್ಲಿಸಿ
ನಿಶಾತ — ಹರಿತವಾದ
ನಿಸ್ವನಂ — ಶಬ್ದ
ನೀಡ — ಸ್ಥಳ
ನೀರದಾಧ್ವದಿಂ — ಆಕಾಶಮಾರ್ಗದಿಂದ
ನೀಳ — ಉದ್ದವಾದ
ನೆಗಱ್ತೆ — ಖ್ಯಾತಿ, ಕೀರ್ತಿ
ನೆಗಱ್ದ — ಪ್ರಸಿದ್ಧವಾದ
ನೆತ್ತಿವೊತ್ತೆ — ತಲೆಗೇರಲು,
ನೆಱನನುಂಟುಮಾಡಿ — ಹೊಂಕಾರವನ್ನು ಮಾಡಿ
ನೆಲೆವೆರ್ಚೆಶೋಕ - ದುಃಖವು ಮನೆಮಾಡಲು
ನೇತ್ರಾಂಚ — ಲಾಲೋಕ - ಕಡೆಗಣ್ಣಿನನ್ನು ನೋಡು
ಪಟಹ — ಚರ್ಮವಾದ್ಯ, ನಗಾರಿ
ಪಟ್ಟೆರ್ದಿರೆ — ಮಲಗಿರಲು
ಪಡಲಿಡು — ಚೆದುರು
ಪಡಲ್ವಡೆ — ಚೆದುರು

ಕೀರ, ಪಿಕ – ಗಿಣಿ, ಕೋಗಿಲೆ
ಕೀಱು – ರೇಗಿ, ಕಿರಿಚಿ
ಕಿಱುಮಿಡಿ – ಸಣ್ಣ ಹೀಚು
ಕಣ್ಣಳ್ಕೆ – ಕಣ್ಣು ಕೋರೈಸಲು
ಕುರುತ್ತಿರಿ – ಲಕ್ಷಿಸಿ ತಿವಿ
ಕುಟಿ – ಕಬ್ಬಿಣದ ಸಲಾಕೆ
ಕುಸುರಿಯ – ಬೆಡಗಿನ
ಕೂರ್ಗಣೆ – ಹರಿತವಾದ ಬಾಣ
ಕೂದರ್ಾಡೆ – ಚೂಪಾದ ಕೋರೆ ಹಲ್ಲು
ಕೂರ್ಮೆ – ಪ್ರೀತಿ
ಕೂರದರ್ – ಪರಾಕ್ರಮಿಗಳು
ಕೃತಾಂತಾತ್ಮಜ – ಯಮನ ಮಗ, ಧರ್ಮರಾಜ
ಕೃಶಾನು – ಬೆಂಕಿ, ಅಗ್ನಿದೇವ
ಕೃಷ್ಣೆ – ದ್ರೌಪದಿ
ಕೇವಲ ಬೋಧಂ – ದಿವ್ಯ (ಮೋಕ್ಷ) ಜ್ಞಾನ
ಕೇವಲಿ – ಲೋಕಾಲೋಕಗಳ ಜ್ಞಾನ ಪಡೆದವರು
ಕೆತ್ತಿದಪುದು – ನಡುಗುವುದು (ಅದುರುವುದು)
ಕೆತ್ತುವ – ನಡುಗುವ
ಕೆನ್ನೆತ್ತರ್ – ಕೆಂಪುರಕ್ತ
ಕೈಗಣ್ಮು – ಪರಾಕ್ರಮ
ಕೈಘಟ್ಟಿ – ಸುಗಂಧ
ಕೆಯ್ಗೆಯ್ – ಕೈಮಾಡು
ಕೈಮಿಗೆ – ಪ್ರವರ್ಧಿಸಲು
ಕೋಕ – ಕೋಗಿಲೆ, ಚಕ್ರವಾಕ
ಕೋಕನದಜ – ಕೆಂದಾವರೆಯ, ಬ್ರಹ್ಮ
ಕೊನರು – ಚಿಗುರು
ಕೋಟೀರ – ಕಿರೀಟ, ಮಕುಟಮಣಿ
ಕೋಡಿಂಗೆ – ದಾನಕ್ಕೆ
ಕೋಳ್ಪಡೆದ – ವಶಮಾಡಿಕೊಂಡ
ಕೋಳಿಂದ – ಹೊಡೆತದಿಂದ
(ರಥದ ಗಾಲಿಯಕೋಳ್ – ರಥಚಕ್ರದ ಘಟ್ಟಣೆ)
ಕೋಳುಮಂ – ಪೆಟ್ಟು
ಕ್ಷ್ಮಾಧರ – ಪರ್ವತ
ಖಚರ – ದೇವತೆ, ಗಗನ ಸಂಚಾರಿ
ಖುರಖುರ – ತೀಕ್ಷ್ಣವಾದ ಕಾಲುಗುರು
ಗಜಾಸ್ಯ – ಗಜಮುಖ, ಗಣಪತಿ
ಗಹನ – ಅರಣ್ಯ
ಗಾಂಗೇಯಕಂ – ಗಂಗಾಧರ, ಶಿವ
ಗಾಡಿವೆತ್ತು – ವೈಭವಯುತನಾಗಿ
ಗುಂಜಾರವಂ – ದುಂಬಿಯನಾದ
ಗುಣಣೆ – ನೃತ್ಯಶಾಲೆ
ಗೆಲ್ಲಂಗೊಂಡು – ಗೆದ್ದು, ಜಯವನ್ನು ಪಡೆದು
ಗೊರವ – ಕಿರಾತ, ಬೇಡ
ಗೋತ್ರಾದಿಗಳ್ – ಬೆಟ್ಟ ಪರ್ವತ ಮುಂತಾದುವು
ಗೋಣ್ – ಕತ್ತು
ಘರ್ಮಜಲ – ಬೆವರುನೀರು
ಘೂರ್ಣಿತ – ಮೊರೆಯುವ
ಚಕ್ರರವಿ – ಚಕ್ರವಾಕ ಪಕ್ಷಿಗೆ ಸೂರ್ಯನಂತಿರುವವನು
ಚಕ್ರಿ – ಕೃಷ್ಣ
ಚಂಡಿಕೆ – ತಲೆಗೂದಲು
ಚರಮದೇಹ – ಕೊನೆಯಜನ್ಮದದೇಹ
ಚಾಣೂರವೈರಿ – ಚಾಣೂರರಾಕ್ಷಸನ ಶತ್ರು – ಕೃಷ್ಣ
ಚಾತುರ್ವಳ – ಚತುರ್ಬಲ (ಆನೆ, ಕುದುರೆ, ರಥ, ಕಾಲಾಳು)
ಚಿಂತಾಪಂಕ – ವ್ಯಸನವೆಂಬ ಕೆಸುರು
ಚಿತ್ತಕ್ಷೋಭೆ – ಮನೋವ್ಯಥೆ
ಚಿತ್ತೆಯ ಸರಿಯಂತೆ – ಚಿತ್ತೆಯ ಮಳೆಯಂತೆ
ಚೂತಮಂ – ಮಾವನ್ನು
ಚೋದ್ಯಂ – ಆಶ್ಚರ್ಯ
ಜತುಗೇಹ – ಅರಗಿನ ಮನೆ
ಜರ್ಬುತೆ – ಗದರಿಸುತ್ತ
ಜಾಯಿಲ – (ಬೇಟೆ)ನಾಯಿ
ಜಿತಾಂತಕ – ಮೃತ್ಯುಂಜಯ
ಜ್ಯೋತ್ಸ್ನೆಯಿಂ – ಬೆಳದಿಂಗಳಿಂದ
ಡಿಂಡೀರಪಿಂಡ – ನೊರೆಯ ಘಟ್ಟಿ
(ವ್ಯೋಮಸರಿತ್ – ಆಕಾಶಗಂಗೆ)
ತಟಿಲ್ಲತೆ – ಮಿಂಚಿನಬಳ್ಳಿ
ತಣ್ಪುಱಿಲ್ – ತಂಪಾದಮರಳು
ತನ್ವಂಗಿ – ಸುಂದರಾಂಗಿ

ಬನ್ನ – ಸೋಲು, ಅವಮಾನ, ಕಷ್ಟ
ಬರಿಯಂ – ಮಗ್ಗುಲನ್ನು
ಬಲಭದ್ರ – ಬಲರಾಮ
ಬಲ್ಪಲ – ಬಲಿಷ್ಠ ಸೈನ್ಯ
ಭಿಲ್ಲರು – ಬೇಡರು
ಬವರ – ಯುದ್ಧ
ಬವರಿವರಿ – ಸುತ್ತುವರಿ
ಬಳಾರಿ – ಇಂದ್ರ, ಕ್ಷುದ್ರದೇವತೆ
ಬಳಾಹಕ – ಮೋಡ
ಬಳ್ಳಿಮಾಡ – ಲತಾಗೃಹ
ಬಱಿಕೆಯಂ – ಬಳಿಕ
ಬಾಯ್ಕೇಳಿಸಿ – ಅಜ್ಞೆಗೊಳಪಡಿಸಿ
ಬಾರ್ತೆಗೆಟ್ಟುದು – ಗುರಿತಪ್ಪಿತು
ಬಾರಿಪರ್ – ತಡೆಯುವವರು
ಬಾಸುಳೆ – ಬಾಸುಂಡೆ, ಪೆಟ್ಟಿನ ಊತ
ಬಿಚ್ಚಳಿಸು – ಹೊಗಳು
ಬಿನ್ನನೆ – ಮೌನವಾಗಿ
ಬಿಯದ – ವ್ಯಾಧ, ಬೇಡ
ಬಿರಯಿ – ವಿರಹಿ
ಬಿಸಕಂದದಂಕುರ – ತಾವರೆಯ ದಂಟಿನ ಕುಡಿ
ಬೂತಾಟ – ಭೂತಚೇಷ್ಟೆ
ಬೃಂಹಿತ – (ಆನೆಯ) ಘೀಂಕಾರ
ಬೃಹತ್ಕುಜಪ್ರತತಿ – ಮಹಾವೃಕ್ಷ ಸಮೂಹ
ಬೆಂಗೆ – ಹಿಂಭಾಗ
ಬೆಂಗೆವಾಯ್ದು – ಬೆನ್ನೇರಿ
ಬೆನ್ಗೊಳ್ವ – ಅಟ್ಟಿಸುತ್ತಾ ಬರುತ್ತಿದ್ದ
ಬೆನ್ನೀರ್ – ಬಿಸಿನೀರು
ಬೆರ್ಚಿಸಿ – ಹೆದರಿಸಿ
ಬೆಳ್ಗಳ್ – ತಿಳಿಗೇಡಿಗಳು, ದಡ್ಡರು
ಬೆಳ್ಸರಿ – ಬಿಳಿಯ ಬಣ್ಣದ ಮಳೆ
ಬೆಸನು – ಅಪ್ಪಣೆ, ಆಜ್ಞೆ
ಬೇವಸ – ಚಿಂತೆ, ದುಮ್ಮಾನ
ಬೇಱ್ಪ – ಬೇಡುವ
ಭಗಣ – ನಕ್ಷತ್ರ ಸಮೂಹ
ಭಸಿತ – ವಿಭೂತಿ
ಬುಜಭುಜಗಂ – ಭುಜಗನ (ಹಾವಿನ) ಮೇಲೆ ಭುಜವಿಟ್ಟವನು ಶೇಷಶಯನ ಕೃಷ್ಣ

ಭುಜಪರಿಘ – ಅಯುಧದಂತೆ ಬಲಿಷ್ಠವಾಗಿರುವ ಭುಜಗಳ
ಭೂಷಣರಣಿತ – ಆಭರಣಗಳ ಶಬ್ದ
ಮಘವಂ – ಇಂದ್ರ
ಮಂಜಿನ ಪುಂಜ – ಮೇಘಸಮೂಹ
ಮಡಗೂೞ್ – ಎಂಜಲು, ತಂಗಳು
ಮತ್ಸ್ಯನ ಬಾಣಸಿಗ – ವಿರಾಟನ ಅಡಿಗೆ ಭಟ್ಟ
ಮದಿರಾಪಾಂಗ – ಉನ್ಮತ್ತ ನೋಟ
ಮನ್ಯು – ದುಃಖ
ಮರ್ಕಟಧ್ವಜ – ಕಪಿಕೇತನ, ಅರ್ಜುನ
ಮರ್ಮೋದ್ಘಾಟನೆ – ಹೃದಯಸ್ಪರ್ಶಿಯಾಗುವಂತೆ ಆಕ್ಷೇಪಿಸಿ
ಮರಕತ – ಪಚ್ಚೆ
ಮರವಡು – ಎಚ್ಚರತಪ್ಪು
ಮರೀಚಿ ಮಂಜರಿ – ಕಾಂತಿಪುಂಜ
'ಮರುಳ್ಗೆ ಬಾಣಸುಗೈವೆ – ಪಿಶಾಚಿಗಳಿಗೆ ಅಡಿಗೆಮಾಡುತ್ತೇನೆ
ಮಹಾಗರ್ತ – ಮಹಾಸುಳಿ, ದೊಡ್ಡ ಬಿಲ
ಮಾಣ್ಬುದು – ನಿಲ್ಲಿಸುವುದು
ಮಾತಂಗಾಸುರವೈರಿ – ಗಜಾಸುರ ಶತ್ರು, ಶಂಕರ
ಮಾನಕಷಾಯ – ಮನಸ್ಸಿನ ಆತಂಕ, ಶಂಕೆ
ಮಾಮಸಕಂ ಮಸಗಿ – ರೋಷ ಹೆಚ್ಚಿ
ಮಾರ್ಕೊಳ್ವ – ಎದುರಿಸುವ
ಮಾರ್ಕೊಳ್ಳದೆ – ಲಕ್ಷಿಸದೆ
ಮಾರ್ಮಲೆ – ಎದುರುಬೀಳು
ಮಿಡಿ – ಹಿಮ್ಮಡಿ, ಕಾಲು
ಮಿಳಿರ್ದು – ಅಭಿವೃದ್ಧಿ ಹೊಂದು, ಚಲಿಸು
ಮಿಳಿರ್ವ – ಚಲಿಸುವ
ಮಿೞ್ತು – ಮೃತ್ಯು, ಸಾವು
ಮುಚ್ಚೆವೋಗಿ – ಎಚ್ಚರತಪ್ಪಿ
ಮುಡಿವಾಳ – ಸುಗಂಧದ ಬೇರು, ಲಾಮಂಚ
ಮುಡುಪಂ – ಹೆಗಲು, ಭುಜ
ಮುದುಗಣ್ತನ – ಹಿರಿಯತನ
ಮುನ್ನೀರ್ – ಸಮುದ್ರ
ಮುಯ್ಪಿನ – ಹೆಗಲು, ಭುಜ

ಪಸ್ಥಳಿ – ಹೂವಿನಗಿಡ. ಕಣಗಿಲೆ
ಪಡೆಮಾತು – ವಾಡಿಕೆಯಮಾತು (ಗಾದೆಯಂತೆ)
ಪಡೆಮೆಚ್ಚು – ದಳವು ಮೆಚ್ಚಲು
ಪಡೆವಳರ್ – ಸೇನಾಪತಿಗಳು
ಪಡೆವಳ್ಳಂ – ದಳಪತಿ
ಪತ್ತುವಿಟ್ಟುದಲ್ತು – ಬಿಟ್ಟುಹೋಗಿಲ್ಲ
ಪದಪಿಂ – ಪ್ರೀತಿಯಿಂದ
ಪದ್ಮನೀ ಷಂಡ – ಪದ್ಮಸಮೂಹ
ಪಂದೆ – ಹೇಡಿ
ಪನ್ವತಿಕೆ – ಪರಾಕ್ರಮ
ಪರ್ಯ್ಸರಿ – ಹಿಂದೆಸರಿ
ಪಯಿಂಛಾಸಿರ – ಹತ್ತುಸಾವಿರ
ಪಯೋಜ – ತಾವರೆ
ಪರದರು – ವರ್ತಕರು
ಪರಭೃತ – ಕೋಗಿಲೆ
ಪರಸೈನ್ಯಭೈರವಂ – ಶತ್ರು ಸೈನ್ಯಕ್ಕೆ ಭಯಂಕರ
ಪರಿನಿಷ್ಕ್ರಮಣ – ನಿರ್ಯಾಣ
ಪರಿಭವ – ಸೋಲು, ಅವಮಾನ
ಪರಿವೃತ – ಆವರಿಸಲ್ಪಟ್ಟ
ಪರೀತ – ಕೂಡಿದ, ಸಮೇತವಾದ
ಪರುಷವಾತಾಹತಿ – ಬಿರುಗಾಳಿಯ ಹೊಡೆತ
ಪವನಜ – ವಾಯುಪುತ್ರ, ಭೀಮ
ಪಸುಗೆ – ವಿಭಾಗ
ಪಳವಿಸು – ಪ್ರಲಾಪಿಸು
ಪೞಿ – ನಿಂದೆ, ದೂಷಣೆ, ಅಪವಾದ
ಪೞುವಗೆ – ಕೆಟ್ಟಮನಸ್ಸು
ಪಕ್ಷ್ಮಂ – ಕಣ್ಣುರೆಪ್ಪೆ
ಪ್ರಕುಟಿಲ – ದುಷ್ಟ, ವಂಚಿಸುವ
ಪ್ರಗುಣೀಕೃತ – ಹೆಚ್ಚಿದ
ಪ್ರತಿಕೂಲ – ಅಡ್ಡಿಯಾದ
ಪ್ರತಿಮಾಯೋಗ – ಗೊಂಬೆಯಂತೆ ಚಲಿಸದ ಭಂಗಿ
ಪ್ರತಿಹಾರ....ರವಂ – ದ್ವಾರಪಾಲಕರ ಸರಸಧ್ವನಿ
ಪ್ರತ್ಯಕ್ಷಂಗಳಂ – ಎದುರಿಗೆ ಕಾಣತಕ್ಕವುಗಳು
ಪ್ರಭೃತಿಗಳು – ಶ್ರೇಷ್ಠರು
ಪ್ರವಾಳ ಜಾಳ – ಹವಳದ ಸಮೂಹ
ಪ್ರವ್ರಜ್ಯ – ಧರ್ಮಬೋಧನೆಗೆ ಅಲೆದಾಡುವ
ಪ್ರಸೂನ – ಹೂವು
ಪಳಂಚಿ – ತಾಗಿ, ಪ್ರತಿಭಟಿಸಿ
ಪ್ರಳಂಬಪ್ರಸೂದನ – ಪ್ರಲಂಬಾಸುರ ವೈರಿ, ಬಲರಾಮ
ಪಾದ್ಯವಿಧಿ – ಪಾದಪೂಜಾ ವಿಧಾನ
ಪಾಂಚಜನ್ಯ – ಕೃಷ್ಣನ ಶಂಖ
ಪಾಂಡುರಾಕಾರ – ಹಳದಿ ಮತ್ತು ಬಿಳಿ ಬಣ್ಣಗಳ ದೇಹ
ಪಾಂಸು – ಧೂಳು, ಪಾಪ
ಪಾಯಿಸು – ತಾಗಿಸು
ಪಿಶಂಗಿತ – ಕೆಂದುಬಣ್ಣದ
ಪುಗಿಲ್ – ಪ್ರವೇಶ ಚಲ್ಲಗಳ್ – ಚಲನೆಗಳು ?
ಪುಂಖಾನುಪುಂಖ – ಒಂದಾದ ಮೇಲೊಂದು, ಒಂದೇಸಮನಾಗಿ
ಪುದಿದಿರ್ದ – ಒಳಹೊಕ್ಕಿದ್ದ
ಪುದಿದಿರೆ – ವ್ಯಾಪಿಸಿರಲು
ಪುದುಂಗೊಳಿಸು – ಸೇರಿಸಿದ, ಕೂಡಿಸಿದ, ಹೊಂದಿದ
ಪುನುಂಗು – ಪುನುಗು
ಪುಷ್ಪಿತ – ಚೆನ್ನಾಗಿ ಬೆಳೆದ
ಪುಷ್ಪಾಯುಧ – ಮನ್ಮಥ (ಹೂವುಗಳನ್ನೇ ಆಯುಧವಾಗುಳ್ಳವನು)
ಪುೞುಮಾನಸ – ಕೀಳುಮನುಷ್ಯ
ಪೂೞ್ವವೊಲ್ – ಮುಳುಗಿಸುವಂತೆ
ಪೃಥು – ವಿಶಾಲವಾದ, ದೊಡ್ಡ
ಪೃಥಾಸುತರು – ಕುಂತಿಯ ಮಕ್ಕಳು, ಪಾಂಡವರು
ಪೊಟ್ಟಳಿಸು – ಗರ್ವಿಸು
ಪೆಡಪುರ್ – ಸಾಮರ್ಥ್ಯ, ಕಾಂತಿ
ಪೊಣ್ಮುತ್ತಿರೆ – ಹೊರಚಿಮ್ಮುತ್ತಿರೆ
ಪೊಣರಲ್ – ಹೋರಾಡಲು, ಯುದ್ಧಮಾಡಲು
ಪೊಱೆ – ಹೊರೆ, ಭಾರ
ಪೌಳೋಮೀಪತಿ – ಪೌದನಪುರದ ದೊರೆ, ಬಾಹುಬಲಿ
ಬಕವೇಷಿ – ಕಪಟವೇಷಧಾರಿ, ಇಲ್ಲಿ ಅಗ್ನಿ

ಶರತ್ಸಮಯ - ಶರತ್ಕಾಲ (ಚಳಿಗಾಲ)
ಶರಭ - ವೀರಭದ್ರ (ಈಶ್ವರ)
ಶಲಾಕೆ – ಸಲಾಕೆ, ಕಂಬಿ
ಶಾರದ – ಮೇಘ
ಶಾಳ – ಕೋಟೆಯಗೋಡೆ, ಪ್ರಾಕಾರ
ಶಿಖಾಕಳಾಪ - ಬಾಣ ಸಮೂಹ
ಶೋಣಾಕ್ಷಿ ಕೋಣಂ - ಕೆಂಗಣ್ಣ ನೋಟದವನು
ಶೋಕಕೃಶಾನು - ದುಃಖಾಗ್ನಿ
ಶ್ವೈಬ್ಯ, ಬಳಾಹಕ, ಮೇಘವರ್ಣ,
ಸುಗ್ರೀವ - ನಾಲ್ಕು ಹೆಸರಿನ ಕುದುರೆಗಳು
ಷಂಡಂ - ಸಮೂಹ
ಸಂಕ್ರಂದನ - ಇಂದ್ರ
ಸಕ್ಷತಕಾಯ – ಗಾಯಗೊಂಡ ದೇಹ
ಸಂತಸಗಣ್ಬನಿ - ಆನಂದಬಾಷ್ಪ
ಸನ್ನಣಂ - ಸಿದ್ಧತೆ, ಸನ್ನಾಹ
ಸಪತ್ನ - ದಾಯಾದಿ, ಸವತಿಯಮಗ, ಶತ್ರು
ಸಪ್ತಾರ್ಚಿ - ಏಳು ನಾಲಗೆಗಳುಳ್ಳವ, ಅಗ್ನಿ
ಸಮಕಟ್ಟುವ – ಸಾಟಿಯಾಗುವ, ಹೋಲುವ, ಸರಿತೂಗುವ
ಸಮವಸರಣ - ತೀರ್ಥಂಕರನಿಗೆ ಕುಬೇರ ರಚಿಸಿದ ಮಂಟಪ (ದೇವತಾ ವಿಮಾನ)
ಸಮೀರ - ವಾಯು
ಸರ್ವಗ್ರಾಸಿ - ಎಲ್ಲನನ್ನೂ ತಿನ್ನುವವನು; ಅಗ್ನಿ
ಸರುಜಂ - ರೋಗಿ
ಸಲವಿಲ್ಲ - ಸ್ಥಳವಿಲ್ಲ, ಪ್ರವೇಶವಿಲ್ಲ
ಸುಹೃದ್ಬಳ - ಮಿತ್ರಸೈನ್ಯ
ಸಾಕೇತ - ಅಯೋಧ್ಯೆ
ಸಾಧ್ವಸ – ಭಯ
ಸಾಮಜ - ಆನೆ
ಸಾರಣ್ಗೆ – ಸಮೀಪಕ್ಕೆ
ಸ್ಥಾಯಿಕೆ - ಆಸ್ಥಾನ
ಸ್ವಾಹಾಂಗನೆ – ಸ್ವಾಹಾ ಎಂಬ ಹೆಂಗಸು (ಅಗ್ನಿ ಪತ್ನಿ)
ಸಿಗ್ಗು – ಲಜ್ಜೆ, ಅವಮಾನ
ಸಿಂಧೂರ - ಕೇಸರೀಬಣ್ಣ (ಚಂದ್ರ)
ಸಿಂಧುತನೂಜ - ಭೀಷ್ಮ (ಗಂಗಾಪುತ್ರ)
ಸಿಂಧುರ - ಆನೆ
ಸಿಂಹಾವಲೋಕನ – ಹಿನ್ನೋಟ
ಸ್ತಿಮಿತತಾರಕ – ಚಲಿಸದ ದೃಷ್ಟಿ, ನೆಟ್ಟನೋಟ
ಸುಪರ್ವಸಂತತಿ – ದೇವಗಣ
ಸುರಚಾಪ – ಇಂದ್ರ ಧನುಸ್ಸು, ಕಾಮನಬಿಲ್ಲು
ಸುರಯಿ – ಸುರಹೊನ್ನೆ
ಸೂರಯಿಯರಲ್ – ಸುರಹೊನ್ನೆ ಹೂವು
ಸುರಶರಾಸನ – ಇಂದ್ರಧನು, ಕಾಮನಬಿಲ್ಲು
ಸೂಡು – ಮಾಲೆಹಾಕು
ಸೂರ್ಯಹಾಸ + ಅಸಿ – ಸೂರ್ಯಹಾಸವೆಂಬ ಖಡ್ಗ
ಸೂಱಿಂ – ಸರದಿ
ಸೂಱನೆ – ಅಬ್ಬರಿಸಿ
ಸೂಱಲ್ತು – (ಈಗಿನ) ಸರದಿಯಲ್ಲ
ಸೆರಗಿಲ್ಲದ – ಭಯವಿಲ್ಲದ
ಸೆಱೆಕೊಲ್ಗಳ್ – ಸೈನ್ಯದಕೊನೆ
ಸೇದೆವಡು – ಆಯಾಸಪಡು
ಸೈಪು – ಪುಣ್ಯ
ಸೈಂಹಿಕೇಯ – ರಾಹು (ಸಿಂಹಿಕೆಯ ಮಗ)
ಸೊರ್ಕಿದೆಕ್ಕಲಂ – ಕೊಬ್ಬಿದ ಹಂದಿ
ಸೋನೆ – ತುಂತುರು
ಸೌದಾಮಿನಿ – ಮಿಂಚು
ಸ್ಪೃಹೆ – ಅಭಿಲಾಷೆ
ಸ್ಫಟೆ – ಹೆಡೆ
ಸ್ಫುರಿತ – ಹೊಳೆಯುವ
ಹಮ್ಮದಂ – ಮೂರ್ಛೆ
ಹರಿನೀಲ – ಇಂದ್ರನೀಲ (ಒಂದು ಬಗೆಯ ರತ್ನ)
ಹರಿಸುತ – ಇಂದ್ರನ ಮಗ, ಅರ್ಜುನ
ಹಿಮಕ್ಷ್ಮಾಧರ – ಹಿಮವತ್ಪರ್ವತ
ಹಿರಣ್ಯಗರ್ಭ – ಬ್ರಹ್ಮ
ಹೆಱಸಾರ್ದು – ಹಿಂದೆ ಸರಿದು, ಪಕ್ಕಕ್ಕೆ ಹೋಗಿ
ಹೊದ್ದಿದರಂ – ಬಳಿಗೆ ಬಂದವರನ್ನು, ಭಕ್ತರನ್ನು

ಮುಯ್ವನ್ ಅಣಂ ಆನದೆ - ನೋಡಿನ ಮನೋಭಾವವನ್ನು ಸ್ವಲ್ಪವೂ ತಾಳದೆ

ಮೂರ್ಧ್ವ - ತಲೆ

ಮೂರಿವಿಡು – ಬಾಯಿಬಿಡು

ಮೃಗಮದ - ಕಸ್ತೂರಿ

ಮೃಗಲಿತನ – ಪರಾಕ್ರಮ

ಮೆಯ್ಗರೆ - ಅದೃಶ್ಯನಾಗು, ಮರೆಯಾಗು

ಮೈಯಂಗಿದಪುದು – ಮೈಸಡುಗವುದು

ಮೈಯ್ವೆತ್ತು - ಕಾಣಿಸಕೊಳ್ಳು, ತಲೆಯೆತ್ತು

ಮೊಕ್ಕಳಂ - ಹೆಚ್ಚಳ, ಹಿರಿದು

ಯಮಳರ್ - ಅವಳಿ ಮಕ್ಕಳು, ಇಲ್ಲಿ ನಕುಲ ಸಹದೇವರು

ಯುಗಪತ್ - ಏಕಕಾಲ, ಜತೆಯಲ್ಲಿಯೇ

ಯುಷ್ಮ....ಲೋಕಂ – ತಮ್ಮ ದರ್ಶನ

ಯೂಥಪತಿ – ಸಲಗ, ಗಂಡಾನೆ

ರಜ + ಒಂದದ – ರಾಜಸ ಗುಣವಿಲ್ಲದ

ರಜಸ್ಸಂಸಕ್ತ – ಮಕರಂದ ಪಾನಾಸಕ್ತ

ರಣೋದ್ಯತ – ಯುದ್ಧಕ್ಕೆ ತೊಡಗುವ

ರಯದಿಂ – ರಭಸದಿಂದ

ರವ – ಶಬ್ದ

ರಸೆ – ಪಾತಾಳಲೋಕ, ಭೂಗರ್ಭ

ರಾಜಕೀರ – ಅರಗಿಳಿ

ರಾಜಮಂಡಲ – ಚಂದ್ರಮಂಡಲ

ರೈವತಕ – ರೇವತಿ ತಂದೆ, ಯಾದವರಲ್ಲಿ ಪ್ರಮುಖ

ಲವಲೀಭೂಜಾ – ಒಂದು ಜಾತಿಯ ವೃಕ್ಷ

ಲಾವಗೆ – ಒಂದು ಜಾತಿಯ ಪಕ್ಷಿ

ಲುಳಿತಾಳಕಿ – ಧ್ವನಿಸುವ ಒಂದು ಬಗೆಯ ಕಾಲಿನ ಆಭರಣ

ಲೋಕಪಿತ – ಬ್ರಹ್ಮ

ವನರುಹನಾಭಂ – ಪದ್ಮನಾಭ, ಕೃಷ್ಣ

ವನೇಭ – ಕಾಡಾನೆ

ವರ್ಣಕ – ಕಾವ್ಯದ ಒಂದು ಬಗೆ, ವಸ್ತುಕದಿಂದ ಬೇರೆಯಾದ ಕಾವ್ಯ ಪ್ರಕಾರ

ವಶವರ್ತಿ – ಪರವಶತೆ, ವಶವಾಗು

ವಾಙ್ಮರೀಚಿ – ಮಾತಿನ ಕಿರಣ, ಬೆಳಕು

ವಾತಾಹತಿ – ಗಾಳಿಯ ಹೊಡೆತ

ವಾರವಿಳಾಸಿನೀತತಿ – ವೇಶ್ಯಾ ಸ್ತ್ರೀ ಸಮೂಹ

ವಾರಿ – ನೀರು

ವಿಕಲ್ಪ – ವ್ಯತ್ಯಾಸ

ವಿಟ – ಕಾಮುಕ

ವಿದಗ್ಧ – ತಿಳಿದ

ವಿದ್ವಿಷಂ – ವೈರಿ, ಶತ್ರು

ವಿಮೋಹಿನಿ – ಭ್ರಾಂತನಾಗಿ, ಭ್ರಮಿಸಿ

ವಿಲೋಲಗಳಂ – ಮಗ್ನನಾದ ಕಣ್ಣೋಟದ ಕಾಂತಿಮಾಲೆಗಳನ್ನು

ವಿಶದಯಶ – ಹಬ್ಬದ ಕೀರ್ತಿ

ವಿಶಿಖ – ಬಾಣ

ವಿಷಣ್ಣ – ಕುಗ್ಗಿದ್ದ, ಖಿನ್ನವಾದ

ವಿಷ್ಟರ – ಆಸನ, ಪೀಠ

ವಿಸಟಂಬರಿದು – ಮನಬಂದಂತೆ ಹರಿದಾಡುವ

ವಿಸ್ಮಯ—ಸ್ಯಂದಿ – ಆಶ್ಚರ್ಯ ರಸಾಧಿಕ್ಯವನ್ನು ಸೂಸುವ

ವಿಸ್ಮಯಮುತ್ತು – ಆಶ್ಚರ್ಯಪಟ್ಟು

ವಿಳಾಸರಸತೋಯಂ – ಶೃಂಗಾರರಸದ ಸರೋವರ

ವೀತಶಂಕಂ – ಭಯವಿಲ್ಲದವನು

ವೃಜಿನ – ಪಾಪ, ದುಃಖ, ರೋಗ

ವೃಷಮಾರ್ಗ – ಧರ್ಮಾಚಾರ

ವೇಲೆ – ಅಲೆ

ವೈಕುರ್ವಣ – ಧ್ವನಿ ಬದಲಾವಣೆ

ವೈಪಕ್ಷ—ಪಹಂ – ವಿರೋಧಿ ಜೀವರ ಪ್ರಾಣಹಾರಿ

ವೃಷಧ್ವಜ – ವೃಷಭಧ್ವಜ, ಈಶ್ವರ

ವೃಷಾಂಕ – ವೃಷಭವಾಹನ ? ನಂದಿ, ಶಿವ

ವ್ಯಗ್ರ – ಕಳವಳ

ವ್ಯತಿಕರ – ಪ್ರಸಂಗ, ವೃತ್ತಾಂತ

ವ್ಯಾಘಾತ – ಹೊಡೆತ

ವ್ಯೋಮಸರಿತ್ – ಆಕಾಶದ ನದಿ, ಗಂಗೆ

ಶಂಬರವೈರಿ – ಮನ್ಮಥ

ಶತಪತ್ರಾಕ್ಷ – ಕಮಲಾಕ್ಷ, ಕೃಷ್ಣ